ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಮೇ 30 ಗುರುವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 44 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಭವಾನಿ ರೇವಣ್ಣ ನಿರೀಕ್ಷಣಾ ಜಾಮೀನು ಅರ್ಜಿ ಆದೇಶ ಕಾಯ್ದಿರಿಸಿದ ನ್ಯಾಯಾಲಯ



ಬೆಂಗಳೂರು, ಮೇ 29– ಹಾಸನ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿನ ಸಂತ್ರಸ್ತ ಮಹಿಳೆಯ ಅಪಹರಣಕ್ಕೆ ಸಂಬಂಧಿಸಿದಂತೆ ಬಂಧನ ಭೀತಿಯಲ್ಲಿರುವ ಭವಾನಿ ರೇವಣ್ಣ ನಿರೀಕ್ಷಣಾ ಜಾಮೀನು ಅರ್ಜಿ ವಿಚಾರಣೆ ಪೂರ್ಣಗೊಳಿಸಿರುವ ನ್ಯಾಯಾಲಯ, ಆದೇಶವನ್ನು ಕಾಯ್ದಿರಿಸಿದೆ.

ಅರ್ಜಿ ವಿಚಾರಣೆ ನಡೆಸಿದ ಬೆಂಗಳೂರಿನ ಜನಪ್ರತಿನಿಧಿಗಳ ನ್ಯಾಯಾಲಯ ಮೇ 31ರಂದು ತೀರ್ಪು ಪ್ರಕಟಿಸುವುದಾಗಿ ತಿಳಿಸಿದೆ. ವಿಚಾರಣೆ ವೇಳೆ ಎಸ್ಐಟಿ ಪರ ವಕೀಲರು, ಮಹಿಳೆ ಅಪಹರಣ ಪ್ರಕರಣದಲ್ಲಿ ಅರ್ಜಿದಾರರಾದ ಭವಾನಿ ವಿರುದ್ಧ ಗಂಭೀರ ಆರೋಪ ಇದೆ. ಅವರನ್ನು ವಿಚಾರಣೆಗೆ ಒಳಪಡಿಸಬೇಕಾಗಿದೆ. ಹೀಗಾಗಿ ನಿರೀಕ್ಷಣಾ ಜಾಮೀನು ನೀಡಬಾರದು ಎಂದು ಕೋರಿದರು.

ಅರ್ಜಿದಾರರ ಪರ ವಕೀಲರು, ವಿದ್ಯುನ್ಮಾನ ಮಾಧ್ಯಮಗಳಲ್ಲಿ ಬಿಂಬಿಸಿರುವಂತೆ ಎಸ್ಐಟಿ ಜಾರಿ ಮಾಡಿರುವ ನೋಟಿಸ್‌ನಲ್ಲಿ ಯಾವುದೇ ಕಾನೂನಿನ ನಿಬಂಧನೆ ಉಲ್ಲೇಖಿಸಲಾಗಿಲ್ಲ. ಹೀಗಾಗಿ, ಅರ್ಜಿದಾರರಿಗೆ ಬಂಧನ ಭೀತಿ ಇದೆ ಎಂದು ಹೇಳಿದರು. ಪ್ರಜ್ವಲ್ ಮತ್ತು ಸಂತ್ರಸ್ತ ಮಹಿಳೆ ಅಪಹರಣ ಪ್ರಕರಣಕ್ಕೆ ಸಂಬಂಧಿಸಿದಂತೆ ಭವಾನಿ ಅವರಿಗೆ ನೋಟಿಸ್ ಜಾರಿ ಮಾಡಲಾಗಿದೆ ಎಂದು ಮಾಧ್ಯಮಗಳು ಬಿಂಬಿಸಿವೆ. ಎಸ್ಐಟಿಯು ಮಾಧ್ಯಮಗಳು ಬಿಂಬಿಸಿದಂತೆ ಯಾವುದೇ ರೀತಿಯ ನೋಟಿಸ್ ಜಾರಿ ಮಾಡಿಲ್ಲ. ಮಾಧ್ಯಮಗಳ ವರದಿಯಿಂದ ತನಿಖಾ ಸಂಸ್ಥೆಯು ಬಂಧಿಸುವ ಸಾಧ್ಯತೆ ಹಿನ್ನೆಲೆಯಲ್ಲಿ ನಿರೀಕ್ಷಣಾ ಜಾಮೀನು ಕೋರುತ್ತಿರುವುದಾಗಿ ತಿಳಿಸಿದ್ದಾರೆ.

ಡಾ.ಮಂಜುನಾಥ್ ಗೆಲುವಿಗೆ ಸುಧಾಮೂರ್ತಿ ರಾಯರಿಗೆ ಹರಕೆ



ಬೆಂಗಳೂರು, ಮೇ 29– ಈಗಾಗಲೇ ಕರ್ನಾಟಕದಲ್ಲಿ ಲೋಕಸಭಾ ಚುನಾವಣೆ ಮುಗಿದಿದ್ದು, ಜೂನ್ 4ರಂದು ಯಾರು ಗೆಲ್ಲಲಿದ್ದಾರೆ. ಯಾರು ಸೋಲಲಿದ್ದಾರೆ ಎನ್ನುವುದು ಸ್ಪಷ್ಟವಾಗಿದೆ. ಆದರೆ, ಫಲಿತಾಂಶಕ್ಕೂ ಮುನ್ನ ಕಾಂಗ್ರೆಸ್, ಜೆಡಿಎಸ್ ಮತ್ತು ಬಿಜೆಪಿ ಕಾರ್ಯಕರ್ತರು ಮತ್ತು ನಾಯಕರಲ್ಲಿ ಇದೀಗ ಸೋಲು ಗೆಲುವಿನ ಲೆಕ್ಕಾಚಾರಗಳು ಗರಿಗೆದರಿವೆ. ಅದರಲ್ಲೂ ತಮ್ಮ ಅಭ್ಯರ್ಥಿ ಗೆಲ್ಲಲಿ ಎಂದು ಕೆಲವರು ದೇವರಿಗೆ ಹರಕೆ ಹೊತ್ತಿದ್ದಾರೆ. ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಬಿಜೆಪಿಯಿಂದ ಸ್ಪರ್ಧೆ ಮಾಡಿರುವ ಖ್ಯಾತ ಹೃದ್ರೋಗ ತಜ್ಞ ಡಾ ಸಿಎನ್ ಮಂಜುನಾಥ್ ಅವರ ಗೆಲುವಿಗೆ ರಾಜ್ಯಸಭಾ ಸದಸ್ಯೆ, ಇನ್ಫೋಸಿಸ್ ಸಹ ಸಂಸ್ಥಾಪಕಿ ಸುಧಾಮೂರ್ತಿ ಅವರು ಹರಕೆ ಹೊತ್ತುಕೊಂಡಿದ್ದಾರೆ. ಇದನ್ನು ಸ್ವತಃ ಡಾ ಮಂಜುನಾಥ್ ಅವರು ಕಾರ್ಯಕ್ರಮವೊಂದರಲ್ಲಿ ಬಹಿರಂಗಪಡಿಸಿದ್ದಾರೆ. ಡಾ.ಸಿ.ಎನ್. ಮಂಜುನಾಥ್ ಅವರು ಗೆದ್ದರೆ ಮಂತ್ರಾಲಯದಿಂದ ಸುಮಾರು ಆರು ಕಿಲೋಮೀಟರ್ ಇರುವ ಒಂದು ಸ್ಥಳದಿಂದ ಕಾಲ್ನಡಿಗೆ ● 2ನೇ ಪುಟಕ್ಕೆ

ಲೈಂಗಿಕ ದೌರ್ಜನ್ಯ ಪ್ರಕರಣ

ಪ್ರಜ್ವಲ್‌ಗೆ ಬಂಧನ ಭೀತಿ; ನಿರೀಕ್ಷಣಾ ಜಾಮೀನಿಗೆ ಅರ್ಜಿ

● ಮೂರು ಪ್ರಕರಣಗಳಿಗೆ ಸಂಬಂಧಿಸಿದಂತೆ ವಕೀಲರ ಮೂಲಕ ಜಾಮೀನು ಕೋರಿಕೆ ● ಮೇ 31ಕ್ಕೆ ವಿಚಾರಣೆ ಮುಂದೂಡಿಕೆ ● ವಿಡಿಯೋ ಸಂದೇಶದಂತೆ ಮೇ 31ರಂದು ಎಸ್ಐಟಿ ಮುಂದೆ ಹಾಜರಾಗುವರೇ?



ಬೆಂಗಳೂರು, ಮೇ 29(ಕೆಎಂಶಿ)– **ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಆರೋಪ ಎದುರಿಸುತ್ತಿರುವ ಸಂಸದ ಪ್ರಜ್ವಲ್ ಬಂಧನದಿಂದ ಪಾರಾಗಲು ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದಾರೆ.**

ಜನಪ್ರತಿನಿಧಿಗಳ ನ್ಯಾಯಾಲಯದ ಮುಂದೆ ಪ್ರಜ್ವಲ್ ವಕೀಲರು, ಎಸ್ಐಟಿ ಹೂಡಿರುವ ಮೂರು ಮೊಕದ್ದಮೆಗಳಿಗೆ ಸಂಬಂಧಿಸಿದಂತೆ ನಿರೀಕ್ಷಣಾ ಜಾಮೀನು ಕೋರಿದ್ದಾರೆ. ನಿರೀಕ್ಷಾ ಜಾಮೀನು ಅರ್ಜಿಯನ್ನು ಮೇ 31ರಂದು ವಿಚಾರಣೆಗೆ ಕೈಗೆತ್ತಿಕೊಳ್ಳುವುದಾಗಿ ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ತಿಳಿಸಿದ್ದಾರೆ. ನಿರೀಕ್ಷಣಾ ಜಾಮೀನು ಅರ್ಜಿ ಸಲ್ಲಿಸಿರುವುದರಿಂದ ಪ್ರಜ್ವಲ್ ನಗರಕ್ಕೆ ಹಿಂತಿರುಗುವ ಬಗ್ಗೆ ಅನುಮಾನಗಳು ಎದುರಾಗಿವೆ.

ಆದರೆ, ಜರ್ಮನಿಯ ಮ್ಯೂನಿಚ್‌ನಿಂದ ಬೆಂಗಳೂರಿಗೆ ಆಗಮಿಸಲು ಲುಫ್ತಾನ್ಸಾ ವಿಮಾನ ಟಿಕೆಟ್ ಕಾಯ್ದಿರಿಸಿದ್ದಾರೆ. ಈ ಹಿಂದೆಯೂ ಎರಡು ಬಾರಿ ಟಿಕೆಟ್ ಕಾಯ್ದಿರಿಸಿದ್ದ ಪ್ರಜ್ವಲ್, ನಂತರ ತಮ್ಮ ಮನಸ್ಸು ಬದಲಿಸಿ ಭಾರತಕ್ಕೆ ಹಿಂತಿರುಗಿರಲಿಲ್ಲ. ಸಿಐಡಿ ಠಾಣೆ, ಹೊಳೆನರಸೀಪುರ ಠಾಣೆ, ಸೈಬರ್ ಕ್ರೈಂ ಠಾಣೆಯಲ್ಲಿ ದಾಖಲಾಗಿರುವ ಮೂರು ಪ್ರಕರಣಗಳಿಗೆ ಸಂಬಂಧಿಸಿದಂತೆ ನಿರೀಕ್ಷಣಾ ಜಾಮೀನಿಗೆ ಅರ್ಜಿ ಸಲ್ಲಿಸಿದ್ದಾರೆ. ಇದರ ಮಧ್ಯೆಯೇ ಪ್ರಜ್ವಲ್ ಪರ ವಕೀಲರು, ಕೆಲಸದಾಕೆ ನೀಡಿದ ದೂರು 107/2024, ಅಲ್ಲದೆ, ಅಪಹರಣಕ್ಕೆ ಸಂಬಂಧಿಸಿದಂತೆ ಸಿಐಡಿ 20/2024 ಪ್ರಕರಣ, ಅತ್ಯಾಚಾರ ಆರೋಪಕ್ಕೆ ಸಂಬಂಧಿಸಿದಂತೆ 02/2024 ಪ್ರಕರಣಗಳಲ್ಲಿ ನಮ್ಮ ಕಕ್ಷಿದಾರರನ್ನು ಬಂಧಿಸದಂತೆ ಜಾಮೀನು ಕೋರಿ ಜನಪ್ರತಿನಿಧಿಗಳ ನ್ಯಾಯಾಲಯದ ಮೊರೆ ಹೋಗಿದ್ದಾರೆ. ● 2ನೇ ಪುಟಕ್ಕೆ

ವಾರಂಟ್ ಜಾರಿ ಆಗಿರುವುದರಿಂದ ಪ್ರಜ್ವಲ್ ರೇವಣ್ಣರ ಬಂಧಿಸಬೇಕಿದೆ

● ಗೃಹ ಸಚಿವ ಡಾ.ಪರಮೇಶ್ವರ್ ಸ್ಪಷ್ಟನೆ ● ಪ್ರಕರಣದಲ್ಲಿ ಭಾಗಿಯಾಗಿರುವವರು ಯಾರೇ ಆಗಿದ್ದರೂ ಬಂಧನ



ಬೆಂಗಳೂರು, ಮೇ 29(ಕೆಎಂಶಿ)– ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣಕ್ಕೆ ಸಂಬಂಧಿಸಿದಂತೆ ತಪ್ಪಿತಸ್ಥರ ಬಂಧನಕ್ಕೆ ಯಾವುದೇ ಪಕ್ಷ ಎಂಬುದಿಲ್ಲ, ಆರೋಪದಲ್ಲಿ ಭಾಗಿಯಾಗಿರುವುದು ಕಂಡು ಬಂದರೆ ಅಂತಹವರನ್ನು ಬಂಧಿಸಲಾಗುತ್ತದೆ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್, ಜನತಾದಳ, ಬಿಜೆಪಿ ಎಂಬುದಕ್ಕಿಂತ ಹೆಚ್ಚಾಗಿ, ಈ ಪ್ರಕರಣದಲ್ಲಿ ಯಾರು ಭಾಗಿಯಾಗಿರುವುದು ಕಂಡು ಬರುತ್ತದೋ ಅಂತಹವರನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತದೆ. ಈಗಾಗಲೇ ಪ್ರಕರಣದಲ್ಲಿ 11–12 ಜನರನ್ನು ಬಂಧಿಸಲಾಗಿದೆ ಎಂದರು. ಪ್ರಜ್ವಲ್ ವಿರುದ್ಧ ವಾರಂಟ್ ಜಾರಿಯಾಗಿರುವುದರಿಂದ ಬಂಧಿಸಬೇಕಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಎಸ್ಐಟಿ ಪ್ರಕ್ರಿಯೆ ಆರಂಭಿಸಿದೆ. ಪಕ್ಷದ ಎಂಎಲ್‌ಸಿ ಚುನಾವಣಾ ಅಭ್ಯರ್ಥಿಗಳ ಆಯ್ಕೆ ಕುರಿತು ಪ್ರಮುಖರೊಂದಿಗೆ ಸಮಾಲೋಚಿಸಿ ಆಯ್ಕೆ ಮಾಡಬೇಕಾದುದು ಪ್ರಕ್ರಿಯೆ. ಇದನ್ನು ತಪ್ಪು ಅಂತ ಹೇಳಲಾಗದು. ನಾನು ಸಹ ಕೆಪಿಸಿಸಿ ಅಧ್ಯಕ್ಷನಾಗಿ ಕೆಲಸ ಮಾಡಿದ ಅನುಭವದಿಂದ ಈ ಮಾತನ್ನು ಹೇಳಿದ್ದೇನೆ. ನಾವು ಹೇಳಿದವರಿಗೇ ಅವಕಾಶ ನೀಡಬೇಕು ಅಂತ ಹೇಳಲು ಬರುವುದಿಲ್ಲ ಎಂದು ಅಭಿಪ್ರಾಯಪಟ್ಟರು. ಯಾರು ಪಕ್ಷಕ್ಕಾಗಿ ದುಡಿದಿದ್ದಾರೋ, ಯಾವ ಸಮುದಾಯ ● 2ನೇ ಪುಟಕ್ಕೆ

ಪದವಿ ವಿದ್ಯಾರ್ಥಿನಿ ಅಪಹರಿಸಿ ಸಾಮೂಹಿಕ ಅತ್ಯಾಚಾರ: ಘಟನೆ ನಡೆದ 90 ನಿಮಿಷದಲ್ಲಿ ಇಬ್ಬರು ಕಾಮುಕರ ಬಂಧನ

● ದುಷ್ಕೃತ್ಯದ ವಿಡಿಯೋ ಮಾಡಿ ವೈರಲ್ ಮಾಡುವ ಬೆದರಿಕೆ
● ಯಾರಿಗಾದರೂ ಹೇಳಿದರೆ ಕೊಲ್ಲುವುದಾಗಿಯೂ ಎಚ್ಚರಿಕೆ



ಕೆ.ಆರ್. ಪೇಟೆ, ಮೇ 29– ಪದವಿ ವಿದ್ಯಾರ್ಥಿನಿಯನ್ನು ಅಪಹರಿಸಿ, ಸಾಮೂಹಿಕ ಅತ್ಯಾಚಾರಗೈದುದ್ದಲ್ಲದೇ ದುಷ್ಕೃತ್ಯವನ್ನು ವಿಡಿಯೋ ಚಿತ್ರೀಕರಣ ಮಾಡಿ ಕೊಲೆ ಬೆದರಿಕೆ ಹಾಕಿದ ಇಬ್ಬರು ಕಾಮುಕರನ್ನು ದೂರು ದಾಖಲಾದ 90 ನಿಮಿಷದಲ್ಲೇ ಬಂಧಿಸುವಲ್ಲಿ ಕೆ.ಆರ್. ಪೇಟೆ ಪೊಲೀಸರು ಯಶಸ್ವಿಯಾಗಿದ್ದಾರೆ.

ನಾಗಮಂಗಲ ತಾಲೂಕು ಬೆಳ್ಳೂರು ಹೋಬಳಿ ವಡ್ಡರಹಟ್ಟಿ ಗ್ರಾಮದ ಶಿವಣ್ಣನ ಪುತ್ರ ಜಗದೀಶ್ ಅಲಿಯಾಸ್ ಜಗ ಮತ್ತು ಆತನ ಸ್ನೇಹಿತ ಅದೇ ಗ್ರಾಮದ ಶಂಕರ್ ಪುತ್ರ ದೀಪು ಬಂಧಿತ ಕಾಮುಕರಾಗಿದ್ದು, ಇವರು ಅತ್ಯಾಚಾರ ದೃಶ್ಯವನ್ನು ಚಿತ್ರೀಕರಿಸಿದ್ದ ಮೊಬೈಲ್ ಅನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ವಿವರ: ಕೆ.ಆರ್. ಪೇಟೆಯ ಬಾಲಕಿಯರ ಹಾಸ್ಟೆಲ್‌ನಲ್ಲಿದ್ದ 21 ವರ್ಷದ ಪದವಿ ವಿದ್ಯಾರ್ಥಿನಿಗೆ ಅಪರಿಚಿತ ನಂಬರ್‌ನಿಂದ ಇಂದು ಸಂಜೆ 4 ಗಂಟೆಗೆ ಮಿಸ್ ಕಾಲ್ ಬಂದಿದೆ. ವಿದ್ಯಾರ್ಥಿನಿ ಸದರಿ ನಂಬರ್‌ಗೆ ಕರೆ ಮಾಡಿ ಯಾರು ಎಂದು ಕೇಳಿದಾಗ ಮಾತನಾಡಿದ ಯುವಕ, ತಾನು 'ನಿನ್ನ ಸ್ನೇಹಿತೆಯ ಗೆಳೆಯ ಜಗ' ಎಂದು ಹೇಳಿದ್ದಾನೆ. ಆದರೆ, ನಂಬರ್ ನಿಮ್ಮದಲ್ಲವಲ್ಲ ಎಂದು ಯುವತಿ ಕೇಳಿದಾಗ ಇದು ಸ್ನೇಹಿತನ ಮೊಬೈಲ್ ಎಂದು ಹೇಳಿದ ಆತ, 'ನಿನ್ನ ಸ್ನೇಹಿತೆ ಹಾಸ್ಟೆಲ್‌ನಲ್ಲಿ ಇಲ್ಲ ಎಂದು ಗೊತ್ತಾಯಿತು. ನಿನ್ನನ್ನು ಭೇಟಿ ಮಾಡಬೇಕು. ಹೊಸಹೊಳಲು ದೇವಸ್ಥಾನ ಬಳಿ ಹೋಗೋಣ' ಎಂದು ಕರೆದಿದ್ದಾನೆ.

ಯುವತಿಯು ಹಬ್ಬಕ್ಕಾಗಿ ಅಜ್ಜಿ ಮನೆಗೆ ಹೋಗಬೇಕು, ದೇವಸ್ಥಾನಕ್ಕೆ ಬರಲು ಆಗಲ್ಲ ಎಂದು ತಿಳಿಸಿದ್ದಾಳೆ. ಸುಮ್ಮನೆ ಭೇಟಿ ಮಾಡಿ ಹೋಗು ಎಂದು ಕರೆದಿದ್ದಾನೆ. ಯುವತಿಯು ಕೆ.ಆರ್.ಪೇಟೆಯ ಟಿಬಿ ಸರ್ಕಲ್‌ನಲ್ಲಿ ಹೊಸಹೊಳಲು ಕಡೆಗೆ ಹೋಗುವ ಆಟೋ ನಿಲ್ದಾಣದ ಬಳಿ ಜಗದೀಶ್‌ನನ್ನು ಭೇಟಿ ಮಾಡಿದಾಗ, ಆತ ನಿನ್ನ (ಯುವತಿ) ಸ್ನೇಹಿತೆಗೆ ಫೋನ್ ಮಾಡು ಎಂದು ಹೇಳಿದ್ದಾನೆ. ಮೊಬೈಲ್‌ನಿಂದ ಕರೆ ಮಾಡುತ್ತಿರುವಾಗಲೇ ಆಕೆಯ ಮೊಬೈಲ್ ಕಸಿದುಕೊಂಡ ಜಗದೀಶ್, ಯುವತಿಯನ್ನು ಬಲವಂತವಾಗಿ ಬೈಕ್‌ನಲ್ಲಿ ಕುಳ್ಳಿರಿಸಿಕೊಂಡಿದ್ದಾನೆ. ದೀಪು ಬೈಕ್ ಚಾಲನೆ ಮಾಡಿದರೆ, ಆತನ ಹಿಂದೆ ಯುವತಿಯನ್ನು ಕುಳ್ಳಿರಿಸಿ ನಂತರ ತಾನು ಕುಳಿತುಕೊಂಡ ಜಗದೀಶ್ ಹೊಸಹೊಳಲು ದೇವಸ್ಥಾನಕ್ಕೆ ಹೋಗುತ್ತಿದ್ದೇವೆ ಎಂದು ಕರೆದೊಯ್ದಿದ್ದಾಗಿ ದೂರಿನಲ್ಲಿ ತಿಳಿಸಲಾಗಿದೆ. ಆದರೆ ಇವರ ಬೈಕ್ ಹೊಸಹೊಳಲು ಕಡೆ ಹೋಗದೇ ಬೇರೆ ಮಾರ್ಗದಲ್ಲಿ ಚಲಿಸಿದೆ. ಇಟ್ಟಿಗೆ ಕಾರ್ಖಾನೆವೊಂದರ ಬಳಿ ಬೈಕ್ ನಿಲ್ಲಿಸಿಕೊಂಡು ಯುವತಿಯನ್ನು ಬೆತ್ತಲೆ ಮಾಡಿ ಮೊದಲಿಗೆ ● 2ನೇ ಪುಟಕ್ಕೆ

ಜೂನ್ 3ರಂದು ಪದವೀಧರ ಮತದಾರರು, ಶಿಕ್ಷಕರಿಗೆ ರಜೆ ಘೋಷಣೆ

ಬೆಂಗಳೂರು, ಮೇ 29– ಲೋಕಸಭೆ ಚುನಾವಣೆ ಬೆನ್ನಲ್ಲೇ ಜೂನ್ 3ರಂದು ನಡೆಯಲಿರುವ ವಿಧಾನಪರಿಷತ್ ಚುನಾವಣೆಗೆ ಪದವೀಧರ ಮತದಾರರಿಗೆ ಮತ್ತು ಶಿಕ್ಷಕರಿಗೆ ರಾಜ್ಯ ಸರ್ಕಾರ ವಿಶೇಷ ರಜೆ ಘೋಷಣೆ ಮಾಡಿ ಬುಧವಾರ ಆದೇಶ ಹೊರಡಿಸಿದೆ. ಕರ್ನಾಟಕ ವಿಧಾನಪರಿಷತ್‌ಗೆ ಈಶಾನ್ಯ, ನೈಋತ್ಯ, ಬೆಂಗಳೂರು ಪದವೀಧರ ಕ್ಷೇತ್ರ ಹಾಗೂ ಆಗ್ನೇಯ, ನೈಋತ್ಯ, ದಕ್ಷಿಣ ಶಿಕ್ಷಕರ ಕ್ಷೇತ್ರಗಳು ಸೇರಿ ಒಟ್ಟು 6 ಕ್ಷೇತ್ರಗಳಿಗೆ ಜೂ. 3ರಂದು ಚುನಾವಣೆ ನಡೆಯಲಿದೆ.

ವಿಧಾನ ಪರಿಷತ್ ಚುನಾವಣೆ ಹಿನ್ನೆಲೆಯಲ್ಲಿ ಪದವೀಧರ ಮತದಾರರಿಗೆ ಮತ್ತು ಶಿಕ್ಷಕರಿಗೆ ವಿಶೇಷ ರಜೆ ನೀಡಿ ರಾಜ್ಯ ಸರ್ಕಾರ ಇಂದು ಅಧಿಸೂಚನೆ ಹೊರಡಿಸಿದೆ. ಇತ್ತ ವಿಧಾನ ಪರಿಷತ್ ಚುನಾವಣೆ ಗೆಲ್ಲೋಕೆ ಬಿಜೆಪಿ–ಜೆಡಿಎಸ್ ನಾಯಕರು ಮೊದಲ ಸಮನ್ವಯ ಸಭೆ ನಡೆಸಿದ್ದು, ಸಭೆಯಲ್ಲಿ ಜೂನ್ 3ರಂದು ನಡೆಯೋ ಶಿಕ್ಷಕ, ಮತ್ತು ಪದವೀಧರ ಕ್ಷೇತ್ರಗಳನ್ನ ಗೆಲ್ಲೋಕೆ ರಣತಂತ್ರ ರೂಪಿಸಲಾಗಿದೆ.

ಪೆನ್‌ಡ್ರೈವ್ ಹಂಚಿಕೆ ಪ್ರಕರಣ: ನವೀನ್‌ಗೌಡ, ಚೇತನ್‌ಗೌಡ ಮೂರು ದಿನ ಎಸ್ಐಟಿ ವಶಕ್ಕೆ



ನವೀನ್‌ಗೌಡ



ಚೇತನ್‌ಗೌಡ

ಹಾಸನ, ಮೇ 29– ಸಂಸದ ಪ್ರಜ್ವಲ್ ರೇವಣ್ಣ ಅವರದ್ದು ಎನ್ನಲಾದ ಅಶ್ಲೀಲ ವೀಡಿಯೋ ಇರುವ ಪೆನ್‌ಡ್ರೈವ್ ಹಂಚಿಕೆ ಆರೋಪದಡಿ ಮಂಗಳವಾರ ಬೆಂಗಳೂರಿನಲ್ಲಿ ಬಂಧನಕ್ಕೊಳಗಾಗಿರುವ ಇಬ್ಬರು ಆರೋಪಿಗಳಾದ ನವೀನ್ ಗೌಡ ಹಾಗೂ ಚೇತನ್ ಗೌಡರನ್ನು ನ್ಯಾಯಾಲಯ ಮೂರು ದಿನಗಳ ಕಾಲ ● 2ನೇ ಪುಟಕ್ಕೆ

ಕಂಡ ಕಂಡಲ್ಲಿ ಕಸ ಹಾಕಿದರೆ 'ದಂಡಾಸ್ತ್ರ' ಪ್ರಯೋಗ

● ಕಸ ನಿರ್ವಹಣೆಯಲ್ಲಿ ಬೇಜವಾಬ್ದಾರಿತನ ತೋರುವವರಿಗೆ ಕಡಿವಾಣ ಹಾಕಲು ಪಾಲಿಕೆ ನಿರ್ಧಾರ
● ಸ್ವಚ್ಛತೆಗೆ ಸಂಚಕಾರ ತಂದೊಡ್ಡಿರುವ ಜನರಿಗೆ ವಿವಿಧ ಹಂತದಲ್ಲಿ ದಂಡ ವಿಧಿಸಲು ತೀರ್ಮಾನ



ಮೈಸೂರು, ಮೇ 29–ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಎಲ್ಲೆಂದರಲ್ಲಿ ಕಸದ ರಾಶಿ... ಹಲವೆಡೆ ಕೊಳೆತ ಹಸಿ ಕಸದ ದರ್ಶನ... ಇವಕ್ಕೆಲ್ಲಾ ಕಡಿವಾಣ ಹಾಕಲು ಮೈಸೂರು ನಗರ ಪಾಲಿಕೆ ದಂಡದ ಅಸ್ತ್ರ ಪ್ರಯೋಗಕ್ಕೆ ಮುಂದಾಗಿದೆ.

ಕಸ ನಿರ್ವಹಣೆ ವಿಚಾರ ನಗರಪಾಲಿಕೆಗೆ ತೀವ್ರ ತಲೆನೋವಾಗಿದ್ದು, ಸಾರ್ವಜನಿಕರ ಅಸಹಕಾರ ಪಾಲಿಕೆಯ ನಿದ್ದೆಗೆಡಿಸಿದೆ. ಈ ಹಿನ್ನೆಲೆಯಲ್ಲಿ ಕಸ ನಿರ್ವಹಣೆಯಲ್ಲಿ ಸಹಕರಿಸದೇ ಇರುವ ಸಾರ್ವಜನಿಕರು ಹಾಗೂ ಉದ್ಯಮಗಳಿಗೆ ದಂಡ ವಿಧಿಸಲು ಪಾಲಿಕೆ ನಿರ್ಧರಿಸಿ, ಈ ಸಂಬಂಧ ಪ್ರಕಟಣೆ ಹೊರಡಿಸಿದೆ. ಸಾರ್ವಜನಿಕ ರಸ್ತೆ, ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ, ಆಟದ ಮೈದಾನ, ಉದ್ಯಾನವನ ಹಾಗೂ ಇತರ ಸಾರ್ವಜನಿಕ ಸ್ಥಳದಲ್ಲಿ ಕಸ ಎಸೆದರೆ ಅಥವಾ ಸ್ವಚ್ಛತೆ ಕಾಪಾಡಲು ವಿಫಲವಾದರೆ ಮೊದಲ ಬಾರಿಗೆ 500 ರೂ., ಅದು ಪುನರಾವರ್ತನೆಯಾದರೆ ಸಾವಿರ ರೂ. ದಂಡ ● 2ನೇ ಪುಟಕ್ಕೆ



ರಾಜ್‌ಕೋಟ್, ದೆಹಲಿ ಅಗ್ನಿ ದುರಂತದ ಪ್ರತಿಧ್ವನಿ; ಮೈಸೂರು ಜಿಲ್ಲೆಯ ಆಸ್ಪತ್ರೆಗಳಲ್ಲಿ

ಅಗ್ನಿ ಸುರಕ್ಷತೆ ಪರಿಶೀಲನೆಗೆ ಸಮಿತಿಗಳ ರಚನೆ

ಮೈಸೂರು, ಮೇ 29(ಆರ್‌ಕೆ)– ಗುಜರಾತ್‌ನ ರಾಜ್‌ಕೋಟ್ ಮತ್ತು ದೆಹಲಿ ಮಕ್ಕಳ ಆಸ್ಪತ್ರೆಯಲ್ಲಿ ಇತ್ತೀಚೆಗೆ ಸಂಭವಿಸಿದ ಅಗ್ನಿ ಅವಘಡದಲ್ಲಿ ಭಾರಿ ಪ್ರಮಾಣದ ಸಾವು–ನೋವುಗಳಾದ ಹಿನ್ನೆಲೆಯಲ್ಲಿ ಎಚ್ಚೆತ್ತ ಮೈಸೂರು ಜಿಲ್ಲಾ ಆರೋಗ್ಯಾಧಿಕಾರಿಗಳು, ಅಗ್ನಿ ದುರಂತ ತಪ್ಪಿಸಲು ಜಿಲ್ಲೆಯ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಅಗತ್ಯ ಸುರಕ್ಷತಾ ಕ್ರಮ ವಹಿಸಲು ಮುಂದಾಗಿದ್ದಾರೆ.

ಎಲ್ಲಾ ಸಾರ್ವಜನಿಕ ಕಟ್ಟಡಗಳು ಹಾಗೂ ಆಸ್ಪತ್ರೆಗಳಲ್ಲಿ ಮಾರ್ಗಸೂಚಿಯಂತೆ ಬೆಂಕಿ ಆಕಸ್ಮಿಕ ಘಟನೆಗಳು ಸಂಭವಿಸಿದಾಗ ಸಾವು–ನೋವುಗಳ ತಡೆಯಲು ಉಪಕರಣಗಳನ್ನು ಅಳವಡಿಸುವುದು ಕಡ್ಡಾಯವಾಗಿದೆಯಾದರೂ, ಬಹುತೇಕ ಕಟ್ಟಡಗಳಲ್ಲಿ ಈ ವಿಷಯದ ಬಗ್ಗೆ ನಿರ್ಲಕ್ಷ್ಯ ಧೋರಣೆ ತಾಳಲಾಗಿದೆ.

ಮೈಸೂರಿನ ಕೆಆರ್‌ಎಸ್ ರಸ್ತೆಯ ಜಿಲ್ಲಾಸ್ಪತ್ರೆ ಸೇರಿದಂತೆ ಜಿಲ್ಲೆಯಾದ್ಯಂತ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಈ ವ್ಯವಸ್ಥೆ ಅನುಷ್ಠಾನವಾಗಿರಬೇಕೆಂದು ಪಟ್ಟು ಹಿಡಿದಿರುವ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ, ಎಲ್ಲೆಲ್ಲಿ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿಲ್ಲ ಎಂಬುದನ್ನು ತಿಳಿಯಲು ಸಮೀಕ್ಷಾ ಸಮಿತಿಗಳನ್ನು ರಚಿಸಿದ್ದಾರೆ. ಅದಕ್ಕಾಗಿ ತಮ್ಮ ನೇತೃತ್ವದಲ್ಲಿ ಜಿಲ್ಲಾ ಮಟ್ಟದ ಸಮಿತಿ ಹಾಗೂ ತಾಲೂಕು ವೈದ್ಯಕೀಯ ಅಧಿಕಾರಿಗಳ ನೇತೃತ್ವದಲ್ಲಿ ತಾಲೂಕು ಮಟ್ಟದ ಸಮಿತಿಗಳನ್ನು ರಚಿಸಿರುವ ಜಿಲ್ಲಾ ಆರೋಗ್ಯಾಧಿಕಾರಿ ಡಾ. ಕುಮಾರಸ್ವಾಮಿ, ಇತ್ತೀಚೆಗೆ ಮೈಸೂರಿನ ಕೆಆರ್‌ಎಸ್ ರಸ್ತೆಯ ಜಿಲ್ಲಾಸ್ಪತ್ರೆಯಲ್ಲಿ ಅಳವಡಿಸಿರುವ ಅಗ್ನಿ ಸುರಕ್ಷತಾ ಕ್ರಮಗಳನ್ನು ಪರಿಶೀಲಿಸಿದರು.





ಮೈಸೂರು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಜಿಲ್ಲಾಸ್ಪತ್ರೆಯಲ್ಲಿ ಅಗ್ನಿ ಸುರಕ್ಷತಾ ಕ್ರಮಗಳ ಪರಿಶೀಲನೆ ನಡೆಸಿದರು (ಎಡಚಿತ್ರ), ಬಲಚಿತ್ರದಲ್ಲಿ ಆಸ್ಪತ್ರೆಯಲ್ಲಿ ಅಳವಡಿಸಿರುವ ಫೈರ್ ಸೇಫ್ಟಿ ಇಕ್ವಿಪ್‌ಮೆಂಟ್ ಅನ್ನು ಕಾಣಬಹುದು.

ಮೊದಲು ಆಸ್ಪತ್ರೆಗಳಲ್ಲಿ ಬೆಂಕಿ ಅಪಘಾತಗಳು ಸಂಭವಿಸಿದಾಗ ಅದನ್ನು ಶಮನಗೊಳಿಸಲು ಒದಗಿಸಿರುವ ಸಲಕರಣೆಗಳು, ಅವುಗಳನ್ನು ಆಪರೇಟ್ ಮಾಡಲು ತರಬೇತಿ ಹೊಂದಿದ ಸಿಬ್ಬಂದಿ, ಅವರ ಜ್ಞಾನ, ಕೌಶಲ್ಯ ಕುರಿತಂತೆ ಪರಿಶೀಲಿಸಿ ಅಭಿಪ್ರಾಯಗಳೊಂದಿಗೆ ಸಮಿತಿ ಸದಸ್ಯರು ತಮಗೆ ವರದಿ ಸಲ್ಲಿಸಬೇಕಾಗಿದೆ ಎಂದು ಡಾ.ಕುಮಾರಸ್ವಾಮಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ರೋಗಿಗಳು, ವೈದ್ಯರು, ಸಿಬ್ಬಂದಿ ಹಾಗೂ ಸಾರ್ವಜನಿಕರ ಸುರಕ್ಷತೆ ದೃಷ್ಟಿಯಿಂದ ಎಲ್ಲಾ ಸಾರ್ವಜನಿಕ ವಲಯದ ಆಸ್ಪತ್ರೆಗಳಲ್ಲಿನ ಅಗ್ನಿ ಅವಘಡ ನಿಗ್ರಹಿಸುವ ಉಪಕರಣಗಳು ಸುಸ್ಥಿತಿಯಲ್ಲಿರಬೇಕು ಹಾಗೂ ಅವುಗಳನ್ನು ತುರ್ತು ಸಂದರ್ಭದಲ್ಲಿ ನಿರ್ವಹಿಸಲು ತಿಳಿದಿರಬೇಕು. ಹಾಗಾಗಿ ಅಗ್ನಿಶಾಮಕ ಠಾಣೆ ಅಧಿಕಾರಿಗಳಿಂದ ಸೂಕ್ತ ತರಬೇತಿ ಹೊಂದಿರುವ ಸಿಬ್ಬಂದಿಗಳಿರಬೇಕೆಂದು ಡಾ. ಕುಮಾರಸ್ವಾಮಿ ತಿಳಿಸಿದ್ದಾರೆ.

ಪ್ರತೀ ಆಸ್ಪತ್ರೆಯಲ್ಲಿ ಹಿಂಡ್ರಂಟ್‌ಗಳು, ಹೋಸ್‌ಲೀಲ್ಸ್, ವಾಟರ್ ಟ್ಯಾಂಕ್, ಫೈರ್ ಅಲರಾಂ ಸೇರಿದಂತೆ ಎಲ್ಲಾ ಅಗತ್ಯ ಸಲಕರಣೆಗಳನ್ನು ಅಳವಡಿಸಬೇಕು, ಅಗ್ನಿ ಅವಘಡ ಸಂಭವಿಸಿದಾಗ ಶಮನಗೊಳಿಸಲು ತರಬೇತಿ ಹೊಂದಿದ ಸಿಬ್ಬಂದಿಗಳಿರುವುದು ಕಡ್ಡಾಯ ಎಂದು ಜಿಲ್ಲಾ ಆರೋಗ್ಯಾಧಿಕಾರಿಗಳು ತಿಳಿಸಿದ್ದಾರೆ.

ತಿ.ನರಸೀಪುರ, ನಂಜನಗೂಡು, ಸರಗೂರು, ಹೆಚ್.ಡಿ.ಕೋಟೆ, ಹುಣಸೂರು, ಪಿರಿಯಾಪಟ್ಟಣ, ಕೆ.ಆರ್.ನಗರ ಹಾಗೂ ಸಾಲಿಗ್ರಾಮಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ ಹಾಗೂ ತಾಲೂಕು ಆರೋಗ್ಯ ಕೇಂದ್ರಗಳಲ್ಲಿ ಅಗ್ನಿಶಾಮಕ ಉಪಕರಣಗಳನ್ನು ಅಳವಡಿಸಿ ಸುರಕ್ಷತಾ ಕ್ರಮ ಕೈಗೊಳ್ಳುವ ಸಂಬಂಧ ಖುದ್ದು ಪರಿಶೀಲನೆ ನಡೆಸಿ ವಸ್ತುಸ್ಥಿತಿ ಕುರಿತು ವರದಿ ನೀಡುವಂತೆ ಸಮಿತಿ ನೇತೃತ್ವ ವಹಿಸಿರುವ ವೈದ್ಯರಿಗೆ ಜಿಲ್ಲಾ ಆರೋಗ್ಯಾಧಿಕಾರಿಗಳು ತಾಕೀತು ಮಾಡಿದ್ದಾರೆ.

ಹೊರರೋಗಿ ವಿಭಾಗ, ತುರ್ತು ಚಿಕಿತ್ಸೆ, ಸರ್ಜಿಕಲ್ ವಿಭಾಗ, ಒಳರೋಗಿ ವಿಭಾಗ, ಎಲ್ಲಾ ವಾರ್ಡ್‌ಗಳು, ಬ್ಲಡ್ ಬ್ಯಾಂಕ್, ಆಡಳಿತ ವಿಭಾಗ ಸೇರಿದಂತೆ ಆಸ್ಪತ್ರೆಯ ಎಲ್ಲಾ ಸ್ಥಳಗಳಲ್ಲಿ ಅಗ್ನಿಶಾಮಕ ಉಪಕರಣಗಳನ್ನು ಅಳವಡಿಸಬೇಕೆಂಬ ಮಾರ್ಗಸೂಚಿಯನ್ನು ಮುಖ್ಯಸ್ಥರು ಪಾಲಿಸಬೇಕು ಎಂದು ಡಾ. ಕುಮಾರಸ್ವಾಮಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

ನಿರೀಕ್ಷಣಾ ಜಾಮೀನಿಗೆ ಅರ್ಜಿ

ನಿರೀಕ್ಷಣಾ ಜಾಮೀನು ಅರ್ಜಿಗಳ ವಿಚಾರಣೆಗೆ ಮುನ್ನ ಪ್ರತಿವಾದಿಗಳಿಗೆ ಸಮನ್ಸ್ ನೀಡಬೇಕಾಗುತ್ತದೆ. ಈಗಾಗಲೇ ಪ್ರಜ್ವಲ್ ತಂದೆ ಎಚ್.ಡಿ.ರೇವಣ್ಣ ಅವರಿಗೆ ಎರಡು ಪ್ರಕರಣಗಳಲ್ಲಿ ಜಾಮೀನು ದೊರೆತಿದೆ.

ನಾನು ಪ್ರವಾಸ ಕೈಗೊಳ್ಳುವ ಮುನ್ನ ನನ್ನ ವಿರುದ್ಧ ಯಾವುದೇ ರೀತಿಯ ಪ್ರಕರಣಗಳು ದಾಖಲಾಗಿರಲಿಲ್ಲ. ಈ ಹಿಂದೆ ನಿಗದಿಯಾದ ಕಾರ್ಯಕ್ರಮದಂತೆ ನಾನು ಪ್ರವಾಸ ಕೈಗೊಂಡೆ. ಮೂರು ದಿನಗಳ ನಂತರ ನನ್ನ ಮೇಲಿನ ಆರೋಪಗಳ ತನಿಖೆಗೆ ಎಸ್ಐಟಿ ರಚನೆ ಆಯಿತು.

ನಂತರ ಎಸ್ಐಟಿ ನನಗೆ ನೀಡಿದ ನೋಟಿಸ್‌ಗೆ ಉತ್ತರ ನೀಡಿ ಕಾಲಾವಕಾಶ ಕೋರಿದ್ದೆ ಎಂಬುದೂ ಸೇರಿದಂತೆ ಪ್ರಜ್ವಲ್ ತಮ್ಮ ಮೇಲಿನ ಆರೋಪಗಳಲ್ಲಿ ಹುರುಳಿಲ್ಲ. ರಾಜಕೀಯ ಪ್ರೇರಿತವಾಗಿ ವಿರೋಧಿಗಳು ಇಂತಹ ದೂರು ನೀಡಿದ್ದಾರೆ ಎಂದು ನ್ಯಾಯಾಲಯದ ಮುಂದೆ ಪ್ರತಿಪಾದಿಸಿದ್ದಾರೆ. ಪ್ರಜ್ವಲ್ ಇದೇ 31ಕ್ಕೆ ಹಿಂತಿರುಗಿ ಅಂದೇ ಎಸ್ಐಟಿ ಮುಂದೆ ಹಾಜರಾಗುವುದಾಗಿಯೂ ವಿಡಿಯೊ ಸಂದೇಶ ಕಳುಹಿಸಿದ್ದರು. ಹೀಗೆ ವಿಡಿಯೋ ಸಂದೇಶ ಬಂದ ಎರಡು ದಿನದ ನಂತರ ಅವರ ಪರ ವಕೀಲರು ಜನಪ್ರತಿನಿಧಿಗಳ ನ್ಯಾಯಾಲಯದಲ್ಲಿ ನಿರೀಕ್ಷಣಾ ಜಾಮೀನು ಅರ್ಜಿ ಸಲ್ಲಿಸಿದ್ದಾರೆ. ಇದರ ಮಧ್ಯೆ, ಗೃಹ ಸಚಿವ ಡಾ.ಪರಮೇಶ್ವರ್ ಸುದ್ದಿಗಾರರೊಂದಿಗೆ ಮಾತನಾಡಿ, ಪ್ರಜ್ವಲ್ ಹಿಂತಿರುಗುತ್ತಿದ್ದಂತೆ ಬಂಧಿಸಲಾಗುವುದು ಎಂದು ತಿಳಿಸಿದ್ದಾರೆ. ಪ್ರಜ್ವಲ್ ವಿಡಿಯೋ ಹೇಳಿಕೆ ಹಿನ್ನೆಲೆಯಲ್ಲಿ ಎಸ್ಐಟಿ ರಾಷ್ಟ್ರದ ಎಲ್ಲಾ ವಿಮಾನ ನಿಲ್ದಾಣಗಳಿಗೆ ಸಂದೇಶ ರವಾನೆ ಮಾಡಿ, ಅವರನ್ನು ವಶಕ್ಕೆ ತೆಗೆದುಕೊಳ್ಳುವಂತೆ ಅಲರ್ಟ್ ಮಾಡಿದೆ. ಇದರ ನಡುವೆಯೂ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಎಸ್ಐಟಿ ಅಧಿಕಾರಿಗಳ ತಂಡಗಳು ಕಾಯುತ್ತಿವೆ.

ಪ್ರಜ್ವಲ್ ರೇವಣ್ಣರ ಬಂಧಿಸಬೇಕಿದೆ

ಪಕ್ಷದ ಜೊತೆ ನಿಂತಿದೆಯೋ ಅಂತಹವರಿಗೆ ಅವಕಾಶ ಕಲ್ಪಿಸಬೇಕು. ಪಕ್ಷಕ್ಕಾಗಿ ಕೆಲಸ ಮಾಡಿದ ಅನೇಕರಿಗೆ ಅನುಭವ ಇರುತ್ತದೆ, ಅಂತಹವರೊಂದಿಗೆ ಸಮಾಲೋಚಿಸಿ ಅಭಿಪ್ರಾಯ ಪಡೆಯಬೇಕು ಎಂಬುದನ್ನು ಹೇಳಿದ್ದೇನೆ ಎಂದು ಸ್ಪಷ್ಟಪಡಿಸಿದರು. ನನ್ನ ಅಭಿಪ್ರಾಯವನ್ನು ನಾನು ಹೇಳಿಬಿಟ್ಟಿದ್ದೇನೆ. ಏಳು ಸ್ಥಾನಗಳು ನಮ್ಮ ಪಕ್ಷಕ್ಕೆ ಬರುತ್ತವೆ. 300 ಅರ್ಜಿ ಬಂದಿವೆ ಎಂಬುದನ್ನು ಪತ್ರಿಕೆಗಳಲ್ಲಿ ಗಮನಿಸಿದ್ದೇನೆ. ಆಯ್ಕೆ ಮಾಡುವುದು ಕಷ್ಟದ ಕೆಲಸ. ಹೈಪವರ್ ಕಮಿಟಿ ರಚಿಸಿ, ಚರ್ಚಿಸಿದರೆ ಸಲಹೆಗಳು ಬರುತ್ತವೆ. ಹೈಪವರ್ ಕಮಿಟಿ ರಚಿಸುವ ಸಮಯ ಈಗ ಮೀರಿದೆ ಎಂದು ಹೇಳಿದರು.

ಅಭ್ಯರ್ಥಿಗಳ ಆಯ್ಕೆ ವಿಚಾರವಾಗಿ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿಲ್ಲ. ಇಲಾಖೆಗೆ ಸಂಬಂಧಿಸಿದಂತೆ ಸಾಕಷ್ಟು ಕೆಲಸಗಳಿವೆ. ಯಾವುದಾದರು ತೀರ್ಮಾನ ತೆಗೆದುಕೊಳ್ಳುವಾಗ ಮುಖ್ಯಮಂತ್ರಿಯವರ ಗಮನಕ್ಕೆ ತರಬೇಕಾಗುತ್ತದೆ. ಅವರ ಸಲಹೆ ಪಡೆದು ತೀರ್ಮಾನ ಕೈಗೊಳ್ಳಬೇಕಾಗುತ್ತದೆ ಎಂದರು.

ಬೆಳ್ಳೂರು ಕ್ರಾಸ್ ಪ್ರಕರಣ ಕುರಿತು ಅವರು, ನಿಗದಿತ ಜವಾಬ್ದಾರಿಯನ್ನು ಅಧಿಕಾರಿಗಳು ಮಾಡದೇ ಇದ್ದಾಗ, ಅದರಿಂದ ಬೇರೆ ಬೇರೆ ರೀತಿಯ ಪರಿಣಾಮಗಳಾಗಿ ಅಮಾನತುಗೊಳಿಸಲಾಗುತ್ತದೆ. ಇಲಾಖಾ ವಿಚಾರಣೆ ನಡೆಯುತ್ತದೆ, ದೊಡ್ಡ ಪ್ರಕರಣಗಳಲ್ಲಿ ಸಿಐಡಿ ತನಿಖೆ ಮಾಡುತ್ತಾರೆ. ತನಿಖೆ ವರದಿಯಲ್ಲಿ ತಪ್ಪು ಕಂಡು ಬಂದಿಲ್ಲ ಎಂದಾದರೆ ಅಮಾನತು ಆದೇಶ ಹಿಂಪಡೆಯಲಾಗುತ್ತದೆ. ಇದು ಇಲಾಖೆಯಲ್ಲಿ ನಡೆಯುವ ಪ್ರಕ್ರಿಯೆ ಎಂದರು.

ಎಸ್ಐಟಿ ವಶಕ್ಕೆ

ಎಸ್ಐಟಿ ವಶಕ್ಕೆ ನೀಡಿದೆ. ಬುಧವಾರ ಇಬ್ಬರನ್ನೂ ಹಿಮ್ಸ್ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದ ನಂತರ ಹಾಸನದ ಎರಡನೇ ಅಧಿಕ ಹಿರಿಯ ಸಿವಿಲ್ ಮತ್ತು ಜೆಎಂಎಫ್‌ಸಿ ಕೋರ್ಟ್ ಮುಂದೆ ಹಾಜರು ಪಡಿಸಲಾಯಿತು. ವಿಚಾರಣೆ ನಡೆಸಿದ ನ್ಯಾಯಾಧೀಶರು ಬುಧವಾರದಿಂದ ಜೂ.1ರವರೆಗೆ ಎಸ್ಐಟಿ ಕಸ್ಟಡಿಗೆ ನೀಡಿ ಆದೇಶಿಸಿದರು.

ಜೂನ್ 1ರ ಶನಿವಾರ ಸಂಜೆ 4:30ಕ್ಕೆ ಮತ್ತೆ ಕೋರ್ಟ್‌ಗೆ ಹಾಜರುಪಡಿಸಲು ತಿಳಿಸಲಾಗಿದೆ. ನಾಳೆ (ಗುರುವಾರ) ಇಬ್ಬರು ಆರೋಪಿಗಳನ್ನು ಸ್ಥಳ ಮಹಜರಿಗೆ ಕರೆದೊಯ್ಯಲಿದ್ದು, ಪೆನ್‌ಡ್ರೈವ್ ಹಂಚಿಕೆ ಹಿಂದೆ ಇರುವ ಕಾಣದ ಕೈಗಳ ಬಗ್ಗೆ ಆರೋಪಿಗಳಿಂದ ಸಾಕ್ಷ್ಯ ಸಂಗ್ರಹಕ್ಕೆ ಎಸ್ಐಟಿ ಮುಂದಾಗಿದೆ.

90 ನಿಮಿಷದಲ್ಲಿ ಇಬ್ಬರು ಕಾಮುಕರ ಬಂಧನ

ಜಗದೀಶ್ ಅತ್ಯಾಚಾರವೆಸಗಿದರೆ, ಅದನ್ನು ದೀಪು ಮೊಬೈಲ್‌ನಲ್ಲಿ ಚಿತ್ರೀಕರಣ ಮಾಡಿದ್ದಾನೆ. ನಂತರ ಆಕೆಯ ಮೇಲೆ ದೀಪು ಸಹ ಅತ್ಯಾಚಾರವೆಸಗಿದ್ದು, ಬಳಿಕ ಆಕೆಗೆ ಬಟ್ಟೆ ತೊಡಿಸಿ, ಯಾರಿಗಾದರೂ ಹೇಳಿದರೆ ಬೆತ್ತಲೆ ಫೋಟೋಗಳನ್ನು ಟ್ರೋಲ್ ಮಾಡುವುದರ ಜೊತೆಗೆ, ಕೊಲೆ ಮಾಡುವುದಾಗಿಯೂ ಬೆದರಿಸಿದ್ದಲ್ಲದೇ, ನಾವು ಕರೆದಾಗ ಬರಬೇಕು ಎಂದು ತಾಕೀತು ಮಾಡಿ ಆಕೆಯ ಮೊಬೈಲ್ ವಾಪಸ್ ಕೊಟ್ಟು ಕೆ.ಆರ್.ಪೇಟೆ ಮಹಿಳಾ ಕಾಲೇಜು ಬಳಿ ಬಿಟ್ಟು ತೆರಳಿದ್ದಾರೆ ಎಂದು ಯುವತಿ ದೂರಿನಲ್ಲಿ ತಿಳಿಸಿದ್ದಾಳೆ.

ಹಾಸ್ಟೆಲ್‌ಗೆ ಬಂದ ನಂತರ ಅತ್ಯಾಚಾರ ವಿಚಾರವನ್ನು ವಾರ್ಡನ್‌ಗೆ ತಿಳಿಸಲಾಗಿ ಅವರು ಯುವತಿಯನ್ನು ಪೊಲೀಸ್ ಠಾಣೆಗೆ ಕರೆತಂದಿದ್ದಾರೆ. ಯುವತಿ ನೀಡಿದ ದೂರನ್ನು ಭಾರತೀಯ ದಂಡ ಸಂಹಿತೆ 354 ಬಿ, 366, 376 ಡಿ, 323, 506, ರೆಡ್‌ವಿತ್ 34 ಹಾಗೂ ಮಾಹಿತಿ ತಂತ್ರಜ್ಞಾನ ಕಾಯ್ದೆಯಡಿ ದಾಖಲಿಸಿಕೊಂಡ ಇನ್ಸ್‌ಪೆಕ್ಟರ್ ಆನಂದೇಗೌಡ ಅವರು ಜಿಲ್ಲಾ ಎಸ್ಪಿ ಡಾ. ಯತೀಶ್, ಡಿವೈಎಸ್ಪಿ ಸುಮಿತ್ ಅವರಿಗೆ ಮಾಹಿತಿ ನೀಡಿ, ಅವರ ಮಾರ್ಗದರ್ಶನದಂತೆ ಸಬ್ ಇನ್ಸ್‌ಪೆಕ್ಟರ್ ನವೀನ್‌ಕುಮಾರ್, ಸಿಬ್ಬಂದಿಗಳಾದ ರಘು, ಜೀಸಸ್, ಅರುಣ್‌ಕುಮಾರ್, ವೈರಮುಡಿ, ಜಯವರ್ಧನ್ ಅವರನ್ನೊಳಗೊಂಡ ತಂಡದೊಂದಿಗೆ ಕಾರ್ಯಾಚರಣೆ ನಡೆಸಿ, ನಾಗಮಂಗಲದಲ್ಲಿ ಆರೋಪಿಗಳಾದ ಜಗದೀಶ್ ಅಲಿಯಾಸ್ ಜಗ ಮತ್ತು ದೀಪುವನ್ನು ಬಂಧಿಸಿ, ಅವರ ಬಳಿ ಇದ್ದ ಮೊಬೈಲ್ ವಶಪಡಿಸಿಕೊಂಡು, ಇಬ್ಬರನ್ನೂ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿ, ಅವರನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ. ಯುವತಿಯನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಲಾಗಿದೆ.

ಕಸ ಹಾಕಿದರೆ 'ದಂಡಾಸ್ತ್ರ' ಪ್ರಯೋಗ

ವಿಧಿಸುವುದಾಗಿ ಪಾಲಿಕೆ ಪ್ರಕಟಣೆ ತಿಳಿಸಿದೆ. ಹಸಿ ಕಸ ಹಾಗೂ ಒಣ ಕಸ, ಕೈತೋಟದ ತ್ಯಾಜ್ಯ, ವೈದ್ಯಕೀಯ ತ್ಯಾಜ್ಯ, ವಿಷಕಾರಿ ತ್ಯಾಜ್ಯ ಹಾಗೂ ಇತರೆ ತ್ಯಾಜ್ಯವನ್ನು ಮೂಲದಲ್ಲೇ ಬೇರ್ಪಡಿಸಿ, ತ್ಯಾಜ್ಯ ಸಂಗ್ರಹಕಾರರಿಗೆ ನೀಡದಿದ್ದಲ್ಲಿ ನಿವಾಸಿಗಳಿಗೆ ಮೊದಲ ಬಾರಿಗೆ 200 ರೂ. ಹಾಗೂ ಅದು ಪುನರಾವರ್ತನೆಗೊಂಡರೆ 500 ರೂ., ವಾಣಿಜ್ಯ ಉದ್ದಿಮೆಗಳಿಗೆ ಮೊದಲ ಬಾರಿಗೆ 500 ರೂ. ಹಾಗೂ ಪುನರಾವರ್ತನೆಗೊಂಡರೆ ಸಾವಿರ ರೂ. ದಂಡ ವಿಧಿಸಲಾಗುವುದು. ಚರಂಡಿಗಳಲ್ಲಿ ತ್ಯಾಜ್ಯ ಬಿಸಾಡುವವರಿಗೆ ಮೊದಲ ಬಾರಿಗೆ 500 ರೂ. ಹಾಗೂ ಪುನರಾವರ್ತನೆಗೊಂಡರೆ ಸಾವಿರ ರೂ. ದಂಡ. ರಸ್ತೆ ಬದಿಯಲ್ಲಿ ಎಲೆ ತ್ಯಾಜ್ಯ ಸುಡುವವರಿಗೆ ಮೊದಲ ಬಾರಿಗೆ 200 ರೂ., ಪುನರಾವರ್ತನೆಗೊಂಡರೆ 500 ರೂ., ಪ್ಲಾಸ್ಟಿಕ್ ವಸ್ತುಗಳು ಹಾಗೂ ಒಣ ತ್ಯಾಜ್ಯ ಸುಡುವವರಿಗೆ ಮೊದಲ ಬಾರಿಗೆ 500 ರೂ., ಪುನರಾವರ್ತನೆಗೊಂಡರೆ ಸಾವಿರ ರೂ. ಇ-ತ್ಯಾಜ್ಯ ಸುಡುವವರಿಗೆ ಮೊದಲ ಬಾರಿಗೆ 1000 ರೂ., ಪುನರಾವರ್ತನೆಗೊಂಡರೆ 5000 ರೂ. ದಂಡ ವಿಧಿಸಲಾಗುವುದು.

ಹಾಸ್ಟೆಲ್, ಹೋಟೆಲ್, ರೆಸ್ಟೋರೆಂಟ್, ವಿದ್ಯಾಸಂಸ್ಥೆಗಳು, ಕಲ್ಯಾಣ ಮಂಟಪಗಳು, ಮಾಲ್‌ಗಳು, ವಾಣಿಜ್ಯ ಕಟ್ಟಡಗಳು, ಕೋಚಿಂಗ್ ಸೆಂಟರ್, ಸರ್ಕಾರಿ ಕಚೇರಿಗಳು, ಕಾರ್ಯಕ್ರಮಗಳು ನಡೆಯುವ ಸ್ಥಳಗಳಲ್ಲಿ, ವಸ್ತುಪ್ರದರ್ಶನ ಇತ್ಯಾದಿ ಸ್ಥಳಗಳಲ್ಲಿ ಮೂಲದಲ್ಲೇ ತ್ಯಾಜ್ಯವನ್ನು ಪ್ರತ್ಯೇಕಿಸಿ, ಅದನ್ನು ಪ್ರತ್ಯೇಕ ಸ್ಥಳದಲ್ಲಿ ವೈಜ್ಞಾನಿಕವಾಗಿ ಸಂಸ್ಕರಿಸದಿದ್ದಲ್ಲಿ ಮೊದಲ ಬಾರಿಗೆ 20,000 ರೂ., ಪುನರಾವರ್ತನೆಗೊಂಡರೆ 50,000 ರೂ. ದಂಡ, ಸಾರ್ವಜನಿಕರು ಕಟ್ಟಡ ಭಗ್ನಾವೇಶ ತ್ಯಾಜ್ಯವನ್ನು ನಿಗದಿತ ಜಾಗದಲ್ಲಿ ವಿಲೇವಾರಿ ಮಾಡದಿದ್ದಲ್ಲಿ ಮೊದಲ ಬಾರಿಗೆ 5000 ರೂ. ಹಾಗೂ ಪುನರಾವರ್ತನೆಗೊಂಡರೆ 10,000 ರೂ. ದಂಡ ವಿಧಿಸಲಾಗುವುದು ಎಂದು ನಗರ ಪಾಲಿಕೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದು ವೇಳೆ ಸಾರ್ವಜನಿಕರು ಮೂಲದಲ್ಲೇ ತ್ಯಾಜ್ಯವನ್ನು ವಿಂಗಡಿಸದೇ ನೀಡಿದಲ್ಲಿ ಯಾವುದೇ ಕಾರಣಕ್ಕೂ ಅಂತಹ ತ್ಯಾಜ್ಯವನ್ನು ಪೌರಕಾರ್ಮಿಕರು ಸ್ವೀಕರಿಸುವುದಿಲ್ಲ. ಕಟ್ಟಡ ತ್ಯಾಜ್ಯವನ್ನು ಪಾಲಿಕೆ ಗುರುತಿಸಿರುವ ಹಂಚ್ಯಾ-ಸಾತಗಳ್ಳಿ ಎ ವಲಯದ ಸಿಎ-05 ನಿವೇಶನದಲ್ಲಿಯೇ ಕಡ್ಡಾಯವಾಗಿ ವಿಲೇವಾರಿ ಮಾಡಬೇಕು ಎಂದು ಅವರು ಕಟ್ಟುನಿಟ್ಟಾಗಿ ಸೂಚಿಸಿದ್ದಾರೆ.

ಸುಧಾಮೂರ್ತಿ ರಾಯರಿಗೆ ಹರಕೆ

ಮೂಲಕ ಹೋಗಿ ರಾಯರ ಪಾದ ಪೂಜೆ ಮಾಡುತ್ತೇನೆ ಎಂದು ಸುಧಾಮೂರ್ತಿ ಅವರು ಹರಕೆ ಹೊತ್ತಿದ್ದಾರೆ. ಚುನಾವಣೆ ಮುಗಿದ ಬಳಿಕ ಡಾ.ಮಂಜುನಾಥ್ ಅವರು ಅವರ ನಿವಾಸಕ್ಕೆ ಭೇಟಿ ನೀಡಿದ್ದ ವೇಳೆ ಸುಧಾಮೂರ್ತಿಯವರೇ ಹೇಳಿದ್ದಾರೆ. ಇದನ್ನು ಇದೀಗ ಸ್ವತಃ ಮಂಜುನಾಥ್ ಅವರೇ ಕಾರ್ಯಕ್ರಮವೊಂದರಲ್ಲಿ ಹಂಚಿಕೊಂಡಿದ್ದಾರೆ. ಓರ್ವ ಅಭ್ಯರ್ಥಿ ಗೆಲುವಿಗಾಗಿ ಕಾರ್ಯಕರ್ತರು, ಮುಖಂಡರು ಹರಿಕೆ ಹೊತ್ತುಕೊಳ್ಳುವುದು ಸಾಮಾನ್ಯ. ಅಂದರೆ, ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ ಸದಸ್ಯರುಗಳ ಮಟ್ಟದ ಮುಖಂಡರು, ಚುನಾವಣೆಯಲ್ಲಿ ತಮ್ಮ ನಾಯಕನ ಗೆಲುವಿಗೆ ದೇವರಲ್ಲಿ ನಾನಾ ರೀತಿಯಾಗಿ ಹರಕೆ ಹೋರುವುದನ್ನು ನೋಡಿದ್ದೇವೆ, ಕಂಡಿದ್ದೇವೆ.

ಆದರೆ, ರಾಜ್ಯಸಭಾ ಸದಸ್ಯೆಯಾಗಿ, ಅದರಲ್ಲೂ ಇನ್ಫೋಸಿಸ್‌ನಂತಹ ಬಹುರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆಯ ಸಹ ಸಂಸ್ಥಾಪಕಿಯಾಗಿ ಓರ್ವ ಅಭ್ಯರ್ಥಿಯ ಗೆಲುವಿಗೆ ಹರಕೆ ಹೊತ್ತುಕೊಂಡಿದ್ದಾರೆ ಎನ್ನುವುದು ನಿಜಕ್ಕೂ ಅಚ್ಚರಿ ಮೂಡಿಸಿದೆ. ಇನ್ನು ಡಾ. ಮಂಜುನಾಥ್ ಅವರ ಪತ್ನಿ ಅನಸೂಯ ಅವರು ಸಹ ತಮ್ಮ ಮನೆ ದೇವರಲ್ಲಿ ಪತಿಯ ಗೆಲುವಿಗೆ ಹರಕೆ ಹೊತ್ತಿರುವುದನ್ನು ಇಲ್ಲಿ ಸ್ಮರಿಸಬಹುದು.

ಒಟ್ಟಿನಲ್ಲಿ ಈ ಬಾರಿ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಫಲಿತಾಂಶ ಕುತೂಹಲ ಮೂಡಿಸಿದ್ದು, ಯಾರಿಗೆ ಗೆಲುವಾಗಲಿದೆ ಎನ್ನುವುದನ್ನು ಜನರು ಕಾತರದಿಂದ ಕಾಯುತ್ತಿದ್ದಾರೆ.

ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದ ಬದುಕಿನ ಸವಾಲುಗಳನ್ನು ಎದುರಿಸಬೇಕು

ಕನ್ನಡ-ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಕಿವಿಮಾತು



ಮೈಸೂರಿನ ಜೆಎಸ್ಎಸ್ ಕಾಲೇಜಿನಲ್ಲಿ ನಡೆದ ಸ್ನಾತಕ ಪದವಿಯ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಸಮಾರೋಪ ಸಮಾರಂಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ ಸುದರ್ಶನ್ ಮಾತನಾಡಿದರು.

ಮೈಸೂರು, ಮೇ 29- ನಿಚ್ಚಳವಾದ ಗುರಿ ಇದ್ದರೆ ಮಾತ್ರ ಸಾಧನೆ ಸಾಧ್ಯ. ಅದಕ್ಕಾಗಿ ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದ ಬದುಕಿನ ಸವಾಲುಗಳನ್ನು ಎದುರಿಸಬೇಕು ಎಂದು ಮೈಸೂರಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಹೇಳಿದರು.

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್ಎಸ್ ಕಾಲೇಜಿನಲ್ಲಿ ನಡೆದ ಸ್ನಾತಕ ಪದವಿಯ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಅನೇಕ ಸೋಲುಗಳನ್ನು ಕಂಡವರು ನಮಗೆ ಆದರ್ಶಪ್ರಾಯರಾಗುತ್ತಾರೆಯೇ ವಿನಃ ತಕ್ಷಣದಲ್ಲಿ ಏನನ್ನೋ ಸಾಧಿಸಿದವರಲ್ಲ. ಸೋಲುಗಳು ನಮಗೆ ಅನೇಕ ಪಾಠಗಳನ್ನು ಕಲಿಸುತ್ತವೆ. ಅದರಿಂದ ನಾವು ಹೇಗೆ ಇರಬೇಕು, ಹೇಗೆ ಇರಬಾರದು, ಏನು ಮಾಡಬೇಕು, ಏನು ಮಾಡಬಾರದು ಎಂಬುದನ್ನು ಅರಿತುಕೊಂಡು ನಮ್ಮ ಬದುಕನ್ನು ಸರಿಯಾಗಿ ರೂಪಿಸಿಕೊಳ್ಳಬೇಕು.

ನಿಮ್ಮ ಸುತ್ತ ಇರುವ ಸ್ನೇಹಿತರನ್ನು ನೀವು ಗಮನಿಸಿಕೊಳ್ಳಬೇಕು. ಏಕೆಂದರೆ ವಿದ್ಯಾರ್ಥಿಗಳ ವಿಕಾಸದಲ್ಲಿ ಮತ್ತು ಸಾಧನೆಯಲ್ಲಿ ಸ್ನೇಹಿತರು ಪ್ರಮುಖ ಪಾತ್ರವನ್ನು ವಹಿಸುತ್ತಾರೆ. ಸಾಧನೆಯೆಂದರೆ ಕೇವಲ ಸರ್ಕಾರಿ ನೌಕರಿಯನ್ನು ಗಳಿಸುವುದೆಂದು ಅರ್ಥವಲ್ಲ. ನಾವು ಏನನ್ನೇ ಸಾಧಿಸಿದರೂ ನಮ್ಮ ಸುತ್ತಮುತ್ತಲಿನವರನ್ನು ದಯೆ ಮತ್ತು ಕರುಣೆಯಿಂದ ಕಾಣಬೇಕು. ಹಾಗಾದಾಗ ಮಾತ್ರ ಸ್ವಸ್ಥ ಸಮಾಜದ ನಿರ್ಮಾಣದಲ್ಲಿ ನಿಮ್ಮ ಪಾತ್ರವಿರುತ್ತದೆ ಎಂದರು.

ಬೆಂಗಳೂರಿನ ಕೆನರಾ ಬ್ಯಾಂಕ್ ಮುಖ್ಯ ಕಚೇರಿ ಸಹಾಯಕ ವ್ಯವಸ್ಥಾಪಕ ಕೆ.ಮಹಾದೇವ ಮಾತನಾಡಿ, ಕ್ರೀಡೆಗಳಲ್ಲಿ ಉತ್ತಮ ಸಾಧನೆ ಮಾಡುವುದಕ್ಕೂ ಉತ್ತಮ ಸ್ನೇಹಿತರಿರಬೇಕು. ತಂದೆ-ತಾಯಿಗಳು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಬಹಳ ಶ್ರಮಿಸುತ್ತಾರೆ ಎಂಬುದನ್ನು ನೆನಪಿಡಿ. ನಿಮ್ಮ ಕೈಯಲ್ಲಿರುವ ಮೊಬೈಲು ಬಹಳ ಕೆಟ್ಟದು, ಅದನ್ನು ಮಿತವಾಗಿ ಬಳಸಿ, ಕಿರಿಯರನ್ನು ಪ್ರೀತಿಯಿಂದ, ಹಿರಿಯರನ್ನು ಗೌರವದಿಂದ ಕಾಣಬೇಕು ಎಂದು ಹೇಳಿದರು.


ಕಾಲೇಜಿನ ಪ್ರಾಂಶುಪಾಲ ಡಾ.ಎಂ. ಪ್ರಭು ಮಾತನಾಡಿ, ಕಾಲೇಜಿನಲ್ಲಿ ಪಠ್ಯೇತರ ಚಟುವಟಿಕೆಗಳ ಪ್ರತಿರೂಪವಾಗಿ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳು ಇವೆ. ಪಠ್ಯವನ್ನು ಓದಿ ಸಾಧಿಸಲು ಸಾಧ್ಯವಿಲ್ಲದವರು ಪಠ್ಯೇತರ ಚಟುವಟಿಕೆಗಳಲ್ಲಿ ಸಾಧನೆ ಮಾಡಲು ಅವಕಾಶವಿದೆ. ಈ ಕಾಲೇಜಿನಿಂದ ಅನೇಕ ಕ್ರೀಡಾಪಟುಗಳು, ಸಾಹಿತಿಗಳು, ರಾಜಕಾರಣಿಗಳು, ವಾಗ್ಮಿಗಳು ಹೊರಬಂದಿದ್ದಾರೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜು ಸಮುಚ್ಚಯದ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ.ಸಾಂಬಶಿವಯ್ಯ ಮಾತನಾಡಿ, ರಾಜ್ಯದ ಪ್ರತಿಷ್ಠಿತ ಕಾಲೇಜುಗಳಲ್ಲಿ ನಮ್ಮದೂ ಒಂದು ಎಂಬ ಹೆಗ್ಗಳಿಕೆಯಿದೆ. ಆದರೆ ಕಾಲೇಜುಗಳು ಪದವೀಧರರನ್ನು ಸೃಷ್ಟಿಸುವ ಕಾರ್ಖಾನೆಗಳಾಗದೆ, ಸೃಜನಶೀಲ ವಿದ್ಯಾರ್ಥಿಗಳನ್ನು ನೀಡುವ ವಿದ್ಯಾ ಕೇಂದ್ರಗಳಾಗಬೇಕು. ಪಠ್ಯದಷ್ಟೇ ಪಠ್ಯೇತರ ಚಟುವಟಿಕೆಗಳೂ ಮುಖ್ಯ, ಅದಕ್ಕಾಗಿಯೇ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳು ಅಸ್ತಿತ್ವದಲ್ಲಿರುವುದು. ಈ ವೇದಿಕೆಗಳ ಮೂಲಕ ಅನೇಕ ವಿದ್ಯಾರ್ಥಿಗಳು ಬಹುಮಾನಗಳನ್ನು ಪಡೆದಿರುವುದು ಅವರ ಸಾಧನೆಗೆ ಸಾಕ್ಷಿ ಎಂದರು. ಸಾಂಸ್ಕೃತಿಕ ವೇದಿಕೆ ಸಂಚಾಲಕ ಡಾ.ಮಧುಸೂದನ್, ಕ್ರೀಡಾ ವೇದಿಕೆ ಸಂಚಾಲಕ ಎಂ.ಕಾರ್ತಿಕ್ ಇದ್ದರು. ಸಾಂಸ್ಕೃತಿಕ ಮತ್ತು ಕ್ರೀಡೆಗಳ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ಬದುಕು ಎಂದರೆ ಚಲನಚಿತ್ರದಂತೆ ಅಲ್ಲ

"ವಾಸ್ತವದಲ್ಲಿ ಎಲ್ಲವೂ ನಿಧಾನವಾಗಿ ಚಲಿಸುತ್ತದೆ ಎಂಬ ವಾಸ್ತವ ಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕು. ಮೊಬೈಲು ಬಳಕೆಯ ಸಾಧಕ-ಬಾಧಕಗಳನ್ನು ತಿಳಿದುಕೊಂಡು ನೀವು ನಿಮ್ಮ ಜೀವನವನ್ನು ರೂಪಿಸಿಕೊಳ್ಳುವುದರತ್ತ ಗಮನ ಕೊಡಬೇಕು. ಬದುಕು ಎಂದರೆ ಚಲನಚಿತ್ರದಂತೆ ಅಲ್ಲ. -ಡಾ.ಎಂ.ಡಿ.ಸುದರ್ಶನ್

ಶ್ರೀ ಜ್ಞಾನಾನಂದಜಿ ಮಹಾರಾಜ್ ಅವರಿಂದ ಗೀತಾ ಸತ್ಸಂಗ ಪ್ರವಚನ



ಮೈಸೂರು, ಮೇ 29- ಪುಷ್ಪಾಂಜಲಿ ಮತ್ತು ಅಗರವಾಲ್ ಸಮಾಜದ ಸಂಯುಕ್ತ ಆಶ್ರಯದಲ್ಲಿ ಸರ್ವ ರಾಜಸ್ಥಾನಿ ಸಮಾಜದ ನೆರವಿನೊಂದಿಗೆ ನಾಳೆ (ಮೇ 30) ಗುರುವಾರ ಸಂಜೆ 4 ಗಂಟೆಗೆ ಮೈಸೂರು ಪುರಭವನ ಸಭಾಂಗಣದಲ್ಲಿ ವಿಶ್ವವಿಖ್ಯಾತ ಗೀತಾ ಪ್ರವಚನಕರಾದ ಮಥುರಾದ ಬೃಂದಾವನ ಆಶ್ರಮದ ಗುರುಗಳಾದ ಶ್ರೀ ಶ್ರೀ ಸ್ವಾಮಿ ಶ್ರೀ ಜ್ಞಾನಾನಂದ ಜಿ ಮಹಾರಾಜ್ ಅವರಿಂದ ಒಂದು ದಿನದ ದಿವ್ಯ ಗೀತಾ ಸತ್ಸಂಗ ಪ್ರವಚನ ಆಯೋಜಿಸಲಾಗಿದೆ.

ಪ್ರವಚನದಲ್ಲಿ ದತ್ತ ಅವಧೂತ ಪೀಠದ ಸ್ವಾಮಿ ವಿಜಯಾನಂದ ತೀರ್ಥ, ಚಿಂತಾಮಣಿ ಮಾತೃಪುರಿ ಆಶ್ರಮದ ಅಮೃತ ಚೈತನ್ಯಮಯಿ ದೇವಿ, ಅಖಿಲ ಭಾರತ ಅಗರವಾಲ್ ಸಂಘಟನೆಯ ರಾಷ್ಟ್ರೀಯ ಅಧ್ಯಕ್ಷ ಪ್ರದೀಪ್, ಮಿತ್ತಲ್ ಉಪಸ್ಥಿತರಿರುವರು ಎಂದು ಮೈಸೂರು ಅಗರವಾಲ್ ಸಮಾಜದ ಅಧ್ಯಕ್ಷ ಕೃಷ್ಣ ಮಿತ್ತಲ್ ತಿಳಿಸಿದ್ದಾರೆ.

ಜೂ.1ರಿಂದ ಯೋಗ ತರಬೇತಿ

ಮೈಸೂರು, ಮೇ 29-ಮೈಸೂರಿನ ಜೆಎಸ್ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಜೂ.1ರಿಂದ ಪ್ರತಿದಿನ ಬೆಳಗ್ಗೆ 6.30ರಿಂದ 7.30ರವರೆಗೆ ಯೋಗ ತರಬೇತಿ ಆಯೋಜಿಸಲಾಗಿದೆ. ಮಾಹಿತಿಗೆ ಮೊ. 9916483919, 9632000697 ಸಂಪರ್ಕಿಸಬಹುದು.

ವೀರಶೈವ ಲಿಂಗಾಯಿತ ಮಠಾಧಿಪತಿಗಳ ಗೋಷ್ಠಿ


ನಂಜನಗೂಡು ತಾಲೂಕು ಸೂರಹಳ್ಳಿ ಶ್ರೀ ವಿರಕ್ತ ಮಠದಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ವೀರಶೈವ-ಲಿಂಗಾಯತ ಮಠಾಧಿಪತಿಗಳ ಗೋಷ್ಠಿಯ 7ನೇ ಸಭೆಯು ಶ್ರೀ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಎರಡೂ ಜಿಲ್ಲೆಗಳ ಮಠಾಧೀಶರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು ಎಂಎಂಕೆ-ಎಸ್‌ಡಿಎಂ ಕಾಲೇಜು ವಾರ್ಷಿಕೋತ್ಸವ

ಉನ್ನತ ಸ್ಥಾನಕ್ಕೇರಿದವರು ಕಲಿತ ವಿದ್ಯಾಸಂಸ್ಥೆಗೆ ಕೃತಜ್ಞತಾಭಾವ ತಾಳುವುದು ಅವಶ್ಯ: ಹಿರಿಯ ವಿದ್ಯಾರ್ಥಿನಿ ಡಾ.ಎಂ.ಕೆ.ಉಷಾ ಅಭಿಮತ



ಎಂಎಂಕೆ-ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯದ ಹಿರಿಯ ವಿದ್ಯಾರ್ಥಿನಿ ಡಾ.ಎಂ.ಕೆ.ಉಷಾ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಮೇ 29-ಉನ್ನತ ಸ್ಥಾನಮಾನಗಳು ನಮಗೆ ದೊರೆತಾಗ ಕಲಿತ ವಿದ್ಯಾಸಂಸ್ಥೆಗೆ ಕೃತಜ್ಞತಾಭಾವ ತಾಳುವುದು ನಮ್ಮ ಬದುಕಿನ ಮೌಲ್ಯಗಳನ್ನು ಇಮ್ಮಡಿಗೊಳಿಸುತ್ತದೆ ಎಂದು ಎಂಎಂಕೆ-ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯದ ಹಿರಿಯ ವಿದ್ಯಾರ್ಥಿನಿ ಡಾ.ಎಂ.ಕೆ.ಉಷಾ ಹೇಳಿದರು.

ಮೈಸೂರಿನ ಎಂಎಂಕೆ ಮತ್ತು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮಹಿಳಾ ಮಹಾವಿದ್ಯಾಲಯ ವತಿಯಿಂದ ಕಾಲೇಜು ವಾರ್ಷಿಕೋತ್ಸವ ಸಮಾರಂಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಕುಲಸಚಿವೆ ಶ್ರೀಮತಿ ವಿ.ಆರ್.ಶೈಲಜಾ ಅವರಿಂದ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಮೈಸೂರಿನ ಮಹಿಳಾ ಶಿಕ್ಷಣಕ್ಕೆ ಎಸ್‌ಡಿಎಂ ಮಹಿಳಾ ಕಾಲೇಜು ಮಹಿಳಾ ಸಬಲೀಕರಣದ ಆಶೋತ್ತರವನ್ನು ಈಡೇರಿಸುತ್ತಾ ವಿದ್ಯಾರ್ಥಿನಿಯರ ಸರ್ವತೋಮುಖ ಶಿಕ್ಷಣದ ಕನಸಿಗೆ ಸಾಕಾರವಾಗಿದೆ. ಈ ಕಾಲೇಜಿನಲ್ಲಿ ಬಿ.ಎಸ್ಸಿ ಪದವಿ ಪಡೆದ ನಂತರ, ಎರಡನೇ ರ‍್ಯಾಂಕ್ ಪಡೆದು ಮೂರು ಚಿನ್ನದ ಪದಕದೊಂದಿಗೆ ಎಂಎಸ್ಸಿ ಪದವಿ ಪಡೆಯಲು ಸಾಧ್ಯವಾಯಿತು. ಇದೇ ಕಾಲೇಜಲ್ಲಿ ಅಧ್ಯಾಪನ ವೃತ್ತಿ ಆರಂಭಿಸಿದ್ದು ನನ್ನ ಬದುಕಿನ ಅವಿಸ್ಮರಣೀಯ ನೆನಪಾಗಿದೆ. ತದನಂತರದಲ್ಲಿ ಕೇಂದ್ರ ಸರ್ಕಾರದ ಫೆಲೋಶಿಪ್ ಪಡೆದು ವಿಜ್ಞಾನ ಸಂಶೋಧನೆಯಲ್ಲಿ ಕಾರ್ಯನಿರ್ವಹಿಸುವ ಸದವಕಾಶ ದೊರೆಯಿತು. ರಾಜ್ಯದ ವಿವಿಧ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವ ಅವಕಾಶ ಸಿಕ್ಕಿದೆ.

ಈ ಸಂದರ್ಭದಲ್ಲಿ ನಾನು ಓದಿರುವ ಈ ಕಾಲೇಜಿಗೆ ಎಪ್ಪತ್ತು ಸಾವಿರ ರೂ.ಗಳ ದೇಣಿಗೆಯನ್ನು ಹಿರಿಯ ವಿದ್ಯಾರ್ಥಿನಿ ಸಂಘ ರತ್ನ ಮಾನಸ ಸಂಘಕ್ಕೆ ಅಭಿಮಾನದಿಂದ ನೀಡುತ್ತಿರುವುದಾಗಿ ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಲೇಜಿನ ಪ್ರಾಂಶುಪಾಲ ಪ್ರೊ.ಸಾಯಿನಾಥ್ ಮಲ್ಲಿಗೆಮಾಡು, ಜಾಗತಿಕ ಸವಾಲುಗಳನ್ನು ಎದುರಿಸುವಲ್ಲಿ ಸಶಕ್ತ ಮಹಿಳಾ ಸಬಲೀಕರಣ ಎಂಬ ಧ್ಯೇಯದೊಂದಿಗೆ ಮಹಿಳಾ ಶಿಕ್ಷಣಕ್ಕೆ ಉತ್ತೇಜನ ನೀಡುತ್ತಿರುವ ನಮ್ಮ ಸಂಸ್ಥೆಯು 1990ರಿಂದ ಸಮಾಜಕ್ಕೆ ಅತ್ಯುತ್ತಮ ಸಾಧಕ ಮಹಿಳಾ ವಿದ್ಯಾರ್ಥಿನಿಯರನ್ನು ಕೊಡುಗೆಯಾಗಿ ನೀಡುತ್ತಿದೆ. ಶ್ರೀ ಕ್ಷೇತ್ರ ಧರ್ಮಸ್ಥಳದ ಡಾ.ವೀರೇಂದ್ರ ಹೆಗ್ಗಡೆ ಅವರ ಸಮರ್ಥ ಮಾರ್ಗದರ್ಶನ ಮತ್ತು ಮಂಜುನಾಥ ಸ್ವಾಮಿಯ ಅನುಗ್ರಹ ಆಶೀರ್ವಾದದೊಂದಿಗೆ ಮೈಸೂರಿನ ಶೈಕ್ಷಣಿಕ ಕ್ಷೇತ್ರದಲ್ಲಿ ನಮ್ಮ ಕಾಲೇಜು ಮಹತ್ವ ಸ್ಥಾನಮಾನ ಪಡೆದಿದೆ. ಶಿಕ್ಷಣದ ಜೊತೆಗೆ ವಿದ್ಯಾರ್ಥಿನಿಯರ ಭವಿಷ್ಯದ ಹಾದಿಗೆ ಸದೃಢವಾದ ನೆಲೆಗಟ್ಟನ್ನು ರೂಪಿಸುತ್ತಾ ಬಂದಿರುವ ನಮ್ಮ ಕಾಲೇಜಿನಲ್ಲಿ ಹಿರಿಯ ವಿದ್ಯಾರ್ಥಿನಿಯರ ಸಂಘ ರತ್ನ ಮಾನಸ ಅಸ್ತಿತ್ವಕ್ಕೆ ಬಂದು ಹಳೆ ಬೇರು ಹೊಸ ಚಿಗುರು ಬೆಸೆಯುವ ಮತ್ತು ಹಿರಿಯ ವಿದ್ಯಾರ್ಥಿನಿಯರ ಮೂಲಕ ಮಾರ್ಗದರ್ಶನವನ್ನು ಕೊಡಿಸುತ್ತಿದೆ. ಸಂಘದ ವತಿಯಿಂದ ಕಾಲೇಜಿನಲ್ಲಿ ಕಲಿಯುತ್ತಿರುವ ಮಧ್ಯಮ ಮತ್ತು ಬಡ ಹೆಣ್ಣುಮಕ್ಕಳ ಶ್ರೇಯೋಭಿವೃದ್ಧಿಗಾಗಿ ಹಲವು ರೀತಿಯ ಯೋಜನೆಗಳನ್ನು ಕೈಗೊಂಡಿದೆ ಈ ದಿಸೆಯಲ್ಲಿ ನಮ್ಮ ಸಂಸ್ಥೆಯಲ್ಲಿ ವ್ಯಾಸಂಗ ಮಾಡಿ ಉನ್ನತ ಸ್ಥಾನ ಮಾನದಲ್ಲಿರುವ ಹಿರಿಯ ವಿದ್ಯಾರ್ಥಿನಿಯರು ತಮ್ಮ ತನು ಮನ ಧನ ಸಮರ್ಪಿಸುವುದರೊಂದಿಗೆ ಸಾಮಾಜಿಕ ಕಳಕಳಿಯನ್ನು, ಮಾರ್ಗದರ್ಶನವನ್ನು, ಸಲಹೆ ಸೂಚನೆಗಳನ್ನು ನೀಡಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ನಯನ ಕುಮಾರಿ, ಉಪ ಪ್ರಾಂಶುಪಾಲರಾದ ಪ್ರೊ.ಎನ್.ಭಾರತಿ, ಐಕ್ಯುಎಸಿ ಸಂಚಾಲಕ ಪ್ರೊ.ಕೆ.ಎಸ್.ಸುಕೃತ ವಿದ್ಯಾರ್ಥಿ ಕ್ಷೇಮ ಪಾಲನಾಧಿಕಾರಿ ಪ್ರೊ ಜ್ಯೋತಿ ಲಕ್ಷ್ಮಿ ಜಿ. ಕಾವಾ ರತ್ನ ಮಾನಸ ಹಿರಿಯ ವಿದ್ಯಾರ್ಥಿನಿ ಸಂಘದ ಸಂಚಾಲಕಿ ಶ್ರೀಮತಿ ಚೈತ್ರಾ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...




ಇಂದಿನ ಪಂಚಾಂಗ

30.05.2024 ಗುರುವಾರ, ಮಳೆ ನಕ್ಷತ್ರ: ರೋಹಿಣಿ, 25.05.2024ರಿಂದ 07.06.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ,
ತಿಥಿ: ಸಪ್ತಮಿ, ನಕ್ಷತ್ರ: ಧನಿಷ್ಠ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

- **ಜೆಎಸ್ಎಸ್ ಆಸ್ಪತ್ರೆ, ಶಸ್ತ್ರ ಚಿಕಿತ್ಸಾ ವಿಭಾಗ, ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗ :** ಅಂತರರಾಷ್ಟ್ರೀಯ ಮಹಿಳಾ ಆರೋಗ್ಯ ದಿನದ ಪ್ರಯುಕ್ತ ಸ್ತನರೋಗ, ಗರ್ಭಕಂಠ ಕ್ಯಾನ್ಸರ್‌ಗೆ ಉಚಿತ ತಪಾಸಣೆ, ಜಾಗೃತಿ ಶಿಬಿರ, ಸ್ಥಳ: ಮೈಸೂರು ಜೆಎಸ್ಎಸ್ ಆಸ್ಪತ್ರೆ, ಬೆಳಗ್ಗೆ 9.30 ರಿಂದ.
- **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್ :** ಅಕ್ಯೂಪ್ರೆಶರ್, ಸುಜೋಕ್, ಅಕ್ಯೂ ಡಿಜಿಟಲ್ ಫಿಶಿಯೋಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: 222, ಲೀಲಾವತಿ ನಾಯ್ಡು, ಅರವಿಂದನಗರ, ಬೆಳಗ್ಗೆ 10.30ಕ್ಕೆ.
- **ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಗಮ, ಬೆಂಗಳೂರು :** ಸೌಹಾರ್ದ ಸಂಯುಕ್ತ ಸಹಕಾರಿ ಸಂಸ್ಥೆಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರಿಗಾಗಿ ಆಡಳಿತ ತರಬೇತಿ ಕಾರ್ಯಕ್ರಮ, ಉದ್ಘಾಟನೆ: ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಗಮದ ಅಧ್ಯಕ್ಷ ಜಿ. ನಂಜನಗೌಡ, ಅಧ್ಯಕ್ಷತೆ: ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಗಮದ ನಿರ್ದೇಶಕ ಎಸ್.ಕೆ. ಮಂಜುನಾಥ್, ಮುಖ್ಯ ಅತಿಥಿಗಳು : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಗಮದ ಉಪಾಧ್ಯಕ್ಷ ಎ.ಆರ್.ಪ್ರಸನ್ನಕುಮಾರ್, ನಿರ್ದೇಶಕರಾದ ಶ್ರೀಮತಿ ಭಾರತಿ ಜಿ. ಭಟ್, ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಎಸ್.ಆರ್. ನಾರಾಯಣರಾವ್, ರಾಮಪ್ಪ, ಸ್ಥಳ: ಗ್ರೀನ್ ಹೆರಿಟೇಜ್ ಹೋಟೆಲ್ ಸಭಾಂಗಣ, ದಿವಾನ್ಸ್ ರಸ್ತೆ, ಬೆಳಗ್ಗೆ 10.30ಕ್ಕೆ.
- **ಜೆಎಸ್ಎಸ್ ನರ್ಸಿಂಗ್ ಕಾಲೇಜು :** ಸಂಭ್ರಮ-2024 ವಾರ್ಷಿಕ ಸಾಂಸ್ಕೃತಿಕೋತ್ಸವ, ಅಧ್ಯಕ್ಷತೆ : ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್. ಮಹೇಶ್, ಮುಖ್ಯ ಅತಿಥಿಗಳು : ಹಿನ್ನೆಲೆ ಗಾಯಕಿ ಶ್ರೀಮತಿ ಅಮೂಲ್ಯ, ಸ್ಥಳ: ಶ್ರೀ ರಾಜೇಂದ್ರ ಸಭಾಂಗಣ, ಸಂಜೆ 4ಕ್ಕೆ.
- **ಅಗರ್‌ವಾಲ್ ಸಮಾಜ ಮೈಸೂರು, ಪುಷ್ಪಾಂಜಲಿ :** ಸ್ವಾಮಿ ಶ್ರೀ ಜ್ಞಾನಾನಂದ ಮಹಾರಾಜ್ ಅವರಿಂದ ಗೀತಾ ಸತ್ಸಂಗ, ಉಪಸ್ಥಿತರು : ದತ್ತ ಅವಧೂತ ಪೀಠದ ಸ್ವಾಮಿ ವಿಜಯಾನಂದ ತೀರ್ಥ, ಚಿಂತಾಮಣಿ ಮಾತೃಪುರಿ ಆಶ್ರಮದ ಅಮೃತ ಚೈತನ್ಯಮಯಿ ದೇವಿ, ಅಖಿಲ ಭಾರತ ಅಗರವಾಲ್ ಸಂಘಟನೆಯ ರಾಷ್ಟ್ರೀಯ ಅಧ್ಯಕ್ಷ ಪ್ರದೀಪ್ ಮತ್ತು ಮಿತ್ತಲ್, ಸ್ಥಳ: ಪುರಭವನ, ಸಂಜೆ 4.30ಕ್ಕೆ.
- **ನಾದಬ್ರಹ್ಮ ಸಂಗೀತ ಸಭಾ:** ಟಿ.ಆರ್.ಮಹಾಲಿಂಗಂ ಸಂಸ್ಮರಣಾ ಕಾರ್ಯಕ್ರಮ, ವಿದ್ವಾನ್ ವಿ. ವಂಶೀಧರ್ ಅವರಿಂದ ಕರ್ನಾಟಕ ಶಾಸ್ತ್ರೀಯ ಕೊಳಲು ವಾದನ, ವಿದುಷಿ ಅದಿತಿ ಕೃಷ್ಣಪ್ರಕಾಶ್-ಪಿಟೀಲು, ವಿದ್ವಾನ್ ತುಮಕೂರು ಬಿ.ರವಿಶಂಕರ್-ಮೃದಂಗ, ವಿದ್ವಾನ್ ಅಜಯ್ ಟಿ.ಎನ್.-ಘಟಂ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಮೈಸೂರು ಕೆ. ವಾಸುದೇವಾಚಾರ್ಯ ಭವನ, ಸಂಜೆ 6ಕ್ಕೆ.
- **ರಂಗಾಯಣ :** ನಾಂದಿ ನಾಟಕೋತ್ಸವ, ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ವೆನಿಸ್ಸಿನ ವ್ಯಾಪಾರ ನಾಟಕ ಪ್ರದರ್ಶನ, ಅನುವಾದ : ಎಸ್. ರಾಮನಾಥ, ರಂಗ ವಿನ್ಯಾಸ : ಹೆಚ್.ಕೆ. ದ್ವಾರಕಾನಾಥ್, ಸಂಗೀತ : ರವಿ ಮೂರೂರು, ಸಾಂಗತ್ಯ : ಸುಬ್ರಹ್ಮಣ್ಯ ಮೈಸೂರು, ನಿರ್ದೇಶನ : ಅಮಿತ್ ಜೆ. ರೆಡ್ಡಿ, ಸ್ಥಳ: ಭೂಮಿಗೀತ, ಸಂಜೆ 6.30ಕ್ಕೆ.
- **ಶ್ರೀ ಶ್ರೀನಿವಾಸ ಸ್ವಾಮಿ ಕೈಂಕರ್ಯ ಸಭಾ :** ಶ್ರೀ ಶ್ರೀನಿವಾಸ ಸ್ವಾಮಿಯವರ ವಾರ್ಷಿಕ ಮಹೋತ್ಸವ, ಸಂಜೆ 7ಕ್ಕೆ ಶಯನೋತ್ಸವ, ಸ್ಥಳ: ದೇವಸ್ಥಾನದ ಆವರಣ, ತಿಲಕ್‌ನಗರ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 'ಸಂವಹನ ಸಮಾಚಾರ' ಬಾನುಲಿ ಸರಣಿ. ಪ್ರಸ್ತುತಿ: ಅಲಕಾ ಕಟ್ಟೆಮನೆ, 6.40 ಪದ ಸಂಸ್ಕೃತಿ, ಪ್ರಸ್ತುತಿ: ಡಾ.ಹೆಚ್.ವಿ.ನಾಗರಾಜ್‌ರಾವ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು-ಡಾ.ಎನ್.ಎಸ್.ಲಕ್ಷ್ಮೀ ನಾರಾಯಣ ಭಟ್ಟರ ಕವಿತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ಮಿಶ್ರಮಾಧುರ್ಯ **ಮಧ್ಯಾಹ್ನ:** 12.30 ದೇವರನಾಮ-ಮಾನಸ ನಯನ, 12.45 ಚಟ್‌ಪಟ್ ಚುರುಮುರಿ, ಪ್ರಸ್ತುತಿ: ಪ್ರಭುಸ್ವಾಮಿ ಮಳಿಮಠ್ ಹಾಗೂ ಕೆ.ಬಿ.ಮೀನಾ, 1.20 ಭಾವಗೀತೆ-ಪೃಥ್ವಿ ಎಸ್.ಭಾರದ್ವಾಜ್, 4.00 ಜನಪದ ಸಂಗೀತ, 4.30 ಕನ್ನಡ ಭಾರತಿ, 6.10 'ಸಂವಹನ ಸಮಾಚಾರ' ಬಾನುಲಿ ಸರಣಿ. ಪ್ರಸ್ತುತಿ: ಅಲಕಾ ಕಟ್ಟೆಮನೆ, 6.55 ಕೃಷಿರಂಗ-ಕಿಸಾನ್‌ವಾಣಿ, ನಾಟಿ ಕೋಳಿ ಸಾಕಾಣಿಕೆ-ಈ ಕುರಿತು ಟಿ.ನರಸೀಪುರ ತಾಲೂಕು ತುಂಬಲ ಗ್ರಾಮದ ಪಿ.ಎ.ಅಭಿಲಾಷ್ ಅವರೊಂದಿಗೆ ಸಂದರ್ಶನ, ಸಂದರ್ಶಕರು: ಎನ್. ಕೇಶವಮೂರ್ತಿ, 8.00 ಯುವವಾಣಿ: 'ಚಿತ್ರ ಚಿತ್ತಾರ' ಪರಿಸರ ಸಂರಕ್ಷಣೆ ಕುರಿತ ವಿಶೇಷ ಕಾರ್ಯಕ್ರಮ. ಪ್ರಸ್ತುತಿ: ಎಸ್.ಎಂ.ಸ್ಫೂರ್ತಿ ಮರೂರ್, 10.00 ನಾಟಕ 'ಮುಖವಾಡ ಹೊದ್ದ ಮನಸ್ಸು', ಮೂಲ ನೇಪಾಳಿ-ರಾಜು ಪ್ರಧಾನ್ ಹಿಮಾಂಶು, ಹಿಂದಿ ಅನುವಾದ-ಶೋಭಾ ಲಿಂಬು, ಕನ್ನಡ ಅನುವಾದ-ಡಾ.ಹೆಚ್.ಎಂ.ಕುಮಾರಸ್ವಾಮಿ, ನಿರ್ಮಾಣ: ಪ್ರಭುಸ್ವಾಮಿ ಮುಳಿಮಠ್, 10.30 ಸವಿನೆನಪು

ಮೈಸೂರು ಮಿತ್ರ

ಎಟಿಐ ವಸತಿಗೃಹದಲ್ಲಿ ವಾಸ್ತವ್ಯ ವೇಳೆ ಸಾಮಗ್ರಿ ನಾಪತ್ತೆ

ರೋಹಿಣಿ ಸಿಂಧೂರಿ ವೇತನದಲ್ಲಿ 77,295ರೂ. ಕಡಿತಗೊಳಿಸಿ; ಎಟಿಐ ಮಹಾ ನಿರ್ದೇಶಕರ ಖಾತೆಗೆ ಜಮಾಮಾಡಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಕಾರ್ಯದರ್ಶಿಗೆ ಮೈಸೂರಿನ ಎಟಿಐ ಜಂಟಿ ನಿರ್ದೇಶಕರ ಪತ್ರ



ಮೈಸೂರು, ಮೇ 29 (ಆರ್‌ಕೆ)–ತಮ್ಮ ಸಂಸ್ಥೆ ಅತಿಥಿ ಗೃಹದಲ್ಲಿ ವಾಸ್ತವ್ಯವಿದ್ದ ವೇಳೆ ಕೆಲ ಸಾಮಗ್ರಿಗಳು ನಾಪತ್ತೆಯಾಗಿರುವ ಸಂಬಂಧ ಐಎಎಸ್ ಅಧಿಕಾರಿ ಹಾಗೂ ಮೈಸೂರು ಮಾಜಿ ಡಿಸಿ ರೋಹಿಣಿ ಸಿಂಧೂರಿ ಅವರ ವೇತನದಿಂದ 77,295ರೂಗಳನ್ನು ಕಡಿತಗೊಳಿಸಿ ತಮ್ಮ ಸಂಸ್ಥೆಯ ಮಹಾ ನಿರ್ದೇಶಕರ ಖಾತೆಗೆ ಜಮಾ ಮಾಡುವಂತೆ ಮೈಸೂರಿನ ಆಡಳಿತ ತರಬೇತಿ ಸಂಸ್ಥೆ (ETI) ಜಂಟಿ ನಿರ್ದೇಶಕರು ಬೆಂಗಳೂರಿನ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಕಾರ್ಯದರ್ಶಿಗಳಿಗೆ ಪತ್ರ ಬರೆದಿದ್ದಾರೆ. ಮೇ 9ರಂದು ಪತ್ರ ಬರೆದಿರುವ ಅವರು, ಮೈಸೂರು ಜಿಲ್ಲಾಧಿಕಾರಿಯಾಗಿ ವರ್ಗವಾಗಿ ಬಂದ ಸಂದರ್ಭ ರೋಹಿಣಿ ಸಿಂಧೂರಿ ಅವರು 2020 ಅಕ್ಟೋಬರ್ 2ರಿಂದ ನವೆಂಬರ್ 14ರವರೆಗೆ ಆಡಳಿತ ತರಬೇತಿ ಸಂಸ್ಥೆ ಅತಿಥಿಗೃಹದಲ್ಲಿ ವಾಸ್ತವ್ಯ ಹೂಡಿದ್ದರು. ನವೆಂಬರ್ 14ರಂದು ಗೆಸ್ಟ್‌ಹೌಸ್ ತೆರವುಗೊಳಿಸಿದಾಗ ಅಲ್ಲಿದ್ದ ಟೆಲಿಫೋನ್ ಟೇಬಲ್, ಕೋಟ್ ಹ್ಯಾಂಗರ್ಸ್, ಬ್ಲಾಂಕೆಟ್, ಮೈಕ್ರೋ ಓವನ್, ಪ್ಲೇಟ್ಸ್, ವಾಟರ್ ಗ್ಲಾಸ್, ಸ್ಟೀಲ್ ವಾಟರ್ ಜಗ್, ಬಿಗ್ ಟವೆಲ್, ಹ್ಯಾಂಡ್ ಟವೆಲ್, ಟೀ ಕಪ್, ಪಿಲ್ಲೋ, ಪಿಲ್ಲೋ ಕವರ್, ಬ್ಲಾಂಕೆಟ್ ಕವರ್ಸ್, ಬೆತ್ತದ ಚೇರ್‌ಗಳು, ಟೀಪಾಯಿ, ರಿಷೆಪ್ಷನ್ ಟೆಲಿಫೋನ್ ಸ್ಟೂಲ್, ಮಂಚ, ಹಾಸಿಗೆ, ಬಾತ್‌ರೂಂ ಸ್ಟೂಲ್, ಯೋಗಾ ಮ್ಯಾಟ್ ಸೇರಿದಂತೆ ಒಟ್ಟು 77,295ರೂ ಬೆಲೆಯ ಸಾಮಾಗ್ರಿಗಳು ನಾಪತ್ತೆಯಾಗಿದ್ದವು ಎಂದು ಅವರು ತಿಳಿಸಿದ್ದಾರೆ. ಈ ಸಂಬಂಧ ಎರಡು ಬಾರಿ ಪತ್ರ ಬರೆದು ಸಾಮಾಗ್ರಿಗಳನ್ನು ಹಿಂದಿರುಗಿಸುವಂತೆ ತಿಳಿಸಿದರೂ ಮಾಹಿತಿ ನೀಡಿರುವುದಿಲ್ಲ. ನಂತರ 2022ರ ನವೆಂಬರ್30ರಂದು ಬರೆದ ಮತ್ತೊಂದು ಪತ್ರಕ್ಕೆ ಜಿಲ್ಲಾಧಿಕಾರಿಗಳ ವಸತಿ ಗೃಹದಲ್ಲಿ ಯಾವುದೇ ಸಾಮಗ್ರಿಗಳು ಇರುವುದಿಲ್ಲ ಎಂದು ರೋಹಿಣಿ ಸಿಂಧೂರಿ ಪತ್ರ ಮುಖೇನ ತಿಳಿಸಿದ್ದಾರೆ ಎಂದೂ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

ನಂತರ ಹಿಂದೂ ಧಾರ್ಮಿಕ ಹಾಗೂ ಧರ್ಮಾದಾಯ ದತ್ತಿಗಳ ಇಲಾಖೆ ಆಯುಕ್ತರಾಗಿರುವ ಅವರಿಗೆ ಪತ್ರ ಬರೆದು ಸಾಮಾಗ್ರಿಗಳನ್ನು ಹಿಂದಿರುಗಿಸುವಂತೆಯೂ ಅಥವಾ ಮೌಲ್ಯದ ಮೊತ್ತವನ್ನು ಎಟಿಐಗೆ ಪಾವತಿಸುವಂತೆ 2023ರ ಫೆಬ್ರವರಿ 15ರಂದು ಪತ್ರ ಬರೆದಿದ್ದರೂ ಉತ್ತರ ನೀಡಿಲ್ಲವಾದ್ದರಿಂದ ರೋಹಿಣಿ ಸಿಂಧೂರಿ ಅವರ ವೇತನದಿಂದ 77,296ರೂ ಕಡಿತಗೊಳಿಸಿ ಎಟಿಐ ಮಹಾನಿರ್ದೇಶಕರ ಹೆಸರಿಗೆ ಡಿಡಿ ಮೂಲಕ ಅಥವಾ ಸಂಸ್ಥೆ ಉಳಿತಾಯ ಖಾತೆಗೆ ಜಮಾ ಮಾಡುವಂತೆ ಜಂಟಿ ನಿರ್ದೇಶಕರು ಪತ್ರದಲ್ಲಿ ಕೋರಿದ್ದಾರೆ.

ಶಸ್ತ್ರ ಚಿಕಿತ್ಸೆಗೆ ಲಂಚ: ಮೂಳೆ ಡಾಕ್ಟರ್ ಪುಟ್ಟಸ್ವಾಮಿಗೆ 4 ವರ್ಷ ಜೈಲು ಶಿಕ್ಷೆ

ಮೈಸೂರು, ಮೇ 29(ಎಂಕೆ)– ಶಸ್ತ್ರ ಚಿಕಿತ್ಸೆ ಮಾಡಲು ಲಂಚಕ್ಕೆ ಬೇಡಿಕೆ ಇಟ್ಟು, ಎಸಿಬಿ ಬಲೆಗೆ ಬಿದ್ದಿದ್ದ ಮೂಳೆ ಶಸ್ತ್ರ ಚಿಕಿತ್ಸಕನಿಗೆ 4 ವರ್ಷ ಜೈಲು ಹಾಗೂ 50 ಸಾವಿರ ರೂ.ದಂಡ ವಿಧಿಸಿ 3ನೇ ಅಪರ ಜಿಲ್ಲಾ ಸತ್ರ ಮತ್ತು ಲೋಕಾಯುಕ್ತ ವಿಶೇಷ ನ್ಯಾಯಾಲಯ ಆದೇಶಿಸಿದೆ.

ಫಿರ್ಯಾದುದಾರ ಎಸ್.ಆರ್.ದೇವರಾಜು ಎಂಬುವರ ಸಂಬಂಧಿಯೊಬ್ಬರು ಕೆ.ಆರ್.ಆಸ್ಪತ್ರೆಗೆ ಶಸ್ತ್ರಚಿಕಿತ್ಸೆಗೆ ದಾಖಲಾಗಿದ್ದು, ಶಸ್ತ್ರಚಿಕಿತ್ಸೆ ಮಾಡಲು 40 ಸಾವಿರ ರೂ. ಲಂಚ ನೀಡುವಂತೆ ಮೂಳೆ ಶಸ್ತ್ರಚಿಕಿತ್ಸಕ ಡಾ.ಪುಟ್ಟಸ್ವಾಮಿ ಬೇಡಿಕೆ ಇಟ್ಟಿದ್ದಾರೆ. ಅದರಂತೆ 2017ರ ಏ.12ರಂದು 26 ಸಾವಿರ ರೂ. ಲಂಚ ಪಡೆಯುವಾಗ ಎಸಿಬಿ ಪೊಲೀಸರಿಗೆ ಸಿಕ್ಕಿಬಿದ್ದಿದ್ದರು.

ಮೂಳೆ ಶಸ್ತ್ರಚಿಕಿತ್ಸಕ ಡಾ.ಪುಟ್ಟಸ್ವಾಮಿ ವಿರುದ್ಧ ದಾಖಲಾದ ಪ್ರಕರಣದ ತನಿಖೆ ನಡೆಸಿದ ಎಸಿಬಿ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಶೇಖರ್, ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು. ಈ ಸಂಬಂಧ ವಿಚಾರಣೆ ನಡೆಸಿದ 3ನೇ ಅಪರ ಜಿಲ್ಲಾ ಸತ್ರ ಮತ್ತು ಲೋಕಾಯುಕ್ತ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಭಾಗ್ಯ ಅವರು, ಆರೋಪಿಗೆ 4 ವರ್ಷ ಶಿಕ್ಷೆ ಹಾಗೂ 50 ಸಾವಿರ ರೂ. ದಂಡ ವಿಧಿಸಿ ಆದೇಶಿಸಿದ್ದಾರೆ. ಲೋಕಾಯುಕ್ತ ವಿಶೇಷ ಅಭಿಯೋಜಕಿಯಾಗಿ ಕಲಿಯಂಡ ಮುತ್ತಮ್ಮ ಪೂಣಚ್ಚ ವಾದ ಮಂಡಿಸಿದರೆ, ಕರ್ನಾಟಕ ಲೋಕಾಯುಕ್ತ ಮೈಸೂರು ವಿಭಾಗದ ಪೊಲೀಸ್ ಅಧೀಕ್ಷಕ ವಿ.ಜೆ.ಸಜೀತ್ ಉಸ್ತುವಾರಿ ವಹಿಸಿದ್ದರು.

ಉಕ್ಕಿ ಹರಿಯುವ ಒಳಚರಂಡಿ ನೀರು; ಮೂಗು ಮುಚ್ಚಿ ಸಾಗುವ ಪಾದಚಾರಿಗಳು



ಮೈಸೂರು,ಮೇ 29(ಪಿಎಂ)– ಒಳಚರಂಡಿಯ ಚೇಂಬರ್ ಉಕ್ಕಿ ಹರಿಯುತ್ತಿದ್ದರೆ ಅಲ್ಲಿಯೇ ಪಾದಚಾರಿಗಳು ಮೂಗು ಮುಚ್ಚಿಕೊಂಡು ಸಾಗುವ ದುಸ್ಥಿತಿ ನಿರ್ಮಾಣವಾಗಿದೆ. ನಿತ್ಯ ಜನಜಂಗುಳಿ ದಟ್ಟವಾಗಿರುವ ಸ್ಥಳದಲ್ಲಿಯೇ ಇಂತಹ ಅನೈರ್ಮಲ್ಯ ಸೃಷ್ಟಿಯಾಗಿದ್ದರೂ ಸ್ಥಳೀಯ ಆಡಳಿತ ಮಾತ್ರ ಕ್ರಮಕ್ಕೆ ಮುಂದಾಗಿಲ್ಲ. ಮೈಸೂರು ನಗರದ ಹೃದಯಭಾಗವಾದ ಸಯ್ಯಾಜಿರಾವ್ ರಸ್ತೆಯ ಫುಟ್‌ಪಾತ್‌ನಲ್ಲಿ ದೇವರಾಜ ಮಾರುಕಟ್ಟೆ ಎದುರು (ಚಿಕ್ಕ ಗಡಿಯಾರ ದಿಕ್ಕಿನಲ್ಲಿ) ಇಂತಹ ಅಶುಚಿತ್ವದ ವಾತಾವರಣ ತಲೆದೋರಿದ್ದರೂ ಅದೇಕೋ ಮೈಸೂರು ಮಹಾನಗರ ಪಾಲಿಕೆ ಕಣ್ಮುಚ್ಚಿ ಕುಳಿತಿದೆ. ಸ್ಥಳೀಯ ವ್ಯಾಪಾರಸ್ಥರ ಪ್ರಕಾರ ಪಾಲಿಕೆಗೆ ಹಲವು ಬಾರಿ ಗಮನಕ್ಕೆ ತಂದರೂ ಪ್ರಯೋಜನ ಆಗಿಲ್ಲ.

ಇಲ್ಲಿ ಚೇಂಬರ್‌ನಿಂದ ಹೊರಬರುತ್ತಿರುವ ಮಲ ಮೂತ್ರದ ಕೊಳಚೆ ನೀರನ್ನೇ ತುಳಿದುಕೊಂಡು ಪಾದಚಾರಿಗಳು ಸಂಚರಿಸುತ್ತಿದ್ದಾರೆ. ಹೋಟೆಲ್‌ವೊಂದರ ದ್ವಾರದಲ್ಲಿಯೇ ಇಂತಹ ಅನೈರ್ಮಲ್ಯ ಉಂಟಾಗಿದ್ದು, ಹೋಟೆಲ್‌ನಲ್ಲಿ ಗ್ರಾಹಕರು ದುರ್ವಾಸನೆ ನಡುವೆಯೇ ಆಹಾರ ಸೇವಿಸುವ ಸನ್ನಿವೇಶ ಸೃಷ್ಟಿಯಾಗಿದೆ.

ಇಂತಹ ಅಶುಚಿತ್ವದ ವಾತಾವರಣವೇ ಅನೇಕ ಕಾಯಿಲೆಗಳಿಗೆ ಮೂಲ. ಈಗಾಗಲೇ ಕಾಲರಾ, ಕರುಳುಬೇನೆಯಿಂದ ಮೈಸೂರಿನಲ್ಲಿ ಹಲವರು ಸಂಕಷ್ಟ ಅನುಭವಿಸಿದ್ದಾರೆ. ಹಾಗಾಗಿ ಸಮಸ್ಯೆ ಬಿಗಡಾಯಿಸುವ ಮುನ್ನ ಎಚ್ಚೆತ್ತುಕೊಳ್ಳುವುದು ತುರ್ತು ಅಗತ್ಯವಾಗಿದೆ. ಮಳೆ ಬಂದರೆ ಚೇಂಬರ್‌ನಿಂದ ಉಕ್ಕುವ ಮಲಿನ ನೀರು ಹಾಗೂ ಮಳೆ ನೀರು ಮಿಶ್ರಣಗೊಂಡ ಹರಿಯಲಿದ್ದು, ಇಂತಹ ಅನೈರ್ಮಲ್ಯದಿಂದ ಸ್ಥಳೀಯ ವ್ಯಾಪಾರಸ್ಥರು ಹಾಗೂ ಇಲ್ಲಿನ ಅಂಗಡಿ ಮುಂಗಟ್ಟುಗಳಿಗೆ ನಿತ್ಯ ಭೇಟಿ ನೀಡುವ ಸಾರ್ವಜನಿಕರು ತೀವ್ರತರ ತೊಂದರೆ ಅನುಭವಿಸುವಂತಾಗಿದೆ.

ಬಸವಣ್ಣನವರ ಶರಣ ಸಮಾಜದಲ್ಲಿ ತಳ ವರ್ಗದವರಿಗೆ ಹೆಚ್ಚಿನ ಅವಕಾಶವಿತ್ತು

● ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕಿ ಡಾ.ಧರಣೀದೇವಿ ಮಾಲಗತ್ತಿ ಅಭಿಮತ ● ಬಸವಣ್ಣನವರ ಕಾಯಕ ಸಿದ್ಧಾಂತ ಸರ್ವಕಾಲಕ್ಕೂ ಮಾದರಿ

ಮೈಸೂರು, ಮೇ 29(ಎಂಕೆ)– ಬಸವಣ್ಣನವರ ಕಾಯಕ ಸಿದ್ಧಾಂತ ಸರ್ವಕಾಲಕ್ಕೂ ಮಾದರಿ ಸಿದ್ಧಾಂತ ಎಂದು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಾದ ಡಾ.ಕೆ. ಧರಣೀದೇವಿ ಮಾಲಗತ್ತಿ ತಿಳಿಸಿದರು.

ನಗರ ಎಂಜಿ ರಸ್ತೆಯಲ್ಲಿರುವ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಶರಣ ಸಾಹಿತ್ಯ ಪರಿಷತ್ ಮೈಸೂರು ನಗರ ಘಟಕ ಹಾಗೂ ಕದಳಿ ಮಹಿಳಾ ವೇದಿಕೆ ವತಿಯಿಂದ ಆಯೋಜಿಸಿದ್ದ ಬಸವ ಜಯಂತಿ, ಕಾಯಕ ದಿನಾಚರಣೆ ಹಾಗೂ ಕಾಯಕಶ್ರೀ ಪ್ರಶಸ್ತಿ ಪ್ರದಾನ ದತ್ತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ವರ್ಗದ ನೆಲೆಯಲ್ಲಿ ಹಾಗೂ ಜಾತಿಯ ನೆಲೆಯಲ್ಲಿ ಬಲಿಷ್ಠರಾಗಿದ್ದವರು ಯಾರದ್ದೇ ಪ್ರಭುತ್ವವಾದರೂ ತಮ್ಮ ತಮ್ಮ ಅಧಿಕಾರವನ್ನು ಯಾವ ತೊಂದರೆ ಇಲ್ಲದೆ ಅನುಭವಿಸುತ್ತಿದ್ದರು. ಆದರೆ ಕಾಯಕ ಜೀವಿಗಳಾಗಿದ್ದ ತಳ ವರ್ಗದವರು ಪ್ರತಿಸಲವೂ ಶೋಷಣೆಗೆ ಒಳಗಾಗುತ್ತಿದ್ದರು. ಹಾಗಾಗಿ ಬಸವಣ್ಣನವರು ಕಟ್ಟಿದ ಶರಣ ಸಮಾಜದಲ್ಲಿ ಬಹುತೇಕರು ತಳ ವರ್ಗದವರೇ ಆಗಿದ್ದರು. ಕಾಯಕ ಎಂಬ ಪದಕ್ಕೆ ವಿಶಿಷ್ಟವಾದ ಅರ್ಥ ಕಲ್ಪಿಸಿದ್ದೆ ಶರಣ ಚಳವಳಿ ಎಂದು ತಿಳಿಸಿದರು.

ಬಸವಣ್ಣನವರು ಹಾಗೂ ಶರಣ ಸಮಾಜ ಹೇಳುವ ಕಾಯಕವೆಂಬುದು ಕರ್ಮಕ್ಕಿಂತಲೂ ಮಿಗಿಲಾದುದು. ಕಾಯಕದ ಜೊತೆಗೆ ನಿಸ್ವಾರ್ಥ ದಾಸೋಹವೂ ಇರಬೇಕು. ದಾಸೋಹ ಇಲ್ಲವಾದರೆ ಕಾಯಕವೆಂಬುದು ಪೂರ್ಣವಾಗುವುದಿಲ್ಲ ಎಂಬುದನ್ನು ತಿಳಿಸಿದ್ದಾರೆ. ನಾನು ಎಂಬ ಭಾವ ದಾಸೋಹದಲ್ಲಿ ಬರಬಾರದು ಎಂದಿದ್ದಾರೆ. ಶಿವ ಎಂದರೆ ಮಂಗಳ ಹಾಗೂ ಕಲ್ಯಾಣಕರವಾದುದು. ಮಂಗಳ ಹಾಗೂ ಕಲ್ಯಾಣಕರವಾದ ಕಾಯಕ ಶಿವನಿಗೆ ಅರ್ಪಿತ ಎಂಬುದನ್ನು ಸಹ ತಿಳಿಸಿದ್ದಾರೆ. ಹಾಗೆಯೇ ಕಾಯಕದಿಂದ ಬರುವುದೇ ಲಿಂಗಕ್ಕೆ ಅರ್ಪಿತ ಎಂಬುದನ್ನು ವಚನಕಾರರಾದ ನುಲಿಯ ಚಂದಯ್ಯರು ಹೇಳುತ್ತಾರೆ. ದುರಾಸೆಯನ್ನು ಹೋಗಲಾಡಿಸಬೇಕೆನ್ನುವ ಕಾಯಕ ಸಿದ್ಧಾಂತ ಕೊಡುವ ಆರ್ಥಿಕ ನೀತಿ ಬಹಳ ವಿಶೇಷವಾಗಿದ್ದು, ಆದರ್ಶವೂ ಆಗಿದೆ ಎಂದು ಕಾಯಕ ಸಿದ್ಧಾಂತದ ಮಹತ್ವ ಕುರಿತು ತಿಳಿಸಿದರು.

ಮಾರ್ಕ್ಸ್‌ನ ಚಿಂತನೆಗಳು, ಭಗವಾನ್ ಬುದ್ಧರ ಚಿಂತನೆಗಳು ಒಟ್ಟಿಗೆ ಸೇರಿಕೊಂಡಂತೆ ಇರುವುದು ಬಸವಣ್ಣನವರು. ಅವರ ಕಾಯಕ ಸಿದ್ಧಾಂತ ಸರ್ವಕಾಲಕ್ಕೂ ಮಾದರಿಯಾಗಿರುವ ಸಿದ್ಧಾಂತ. ತನ್ನ ವೃತ್ತಿಯನ್ನು ಕಾಯಕವಾಗಿ ರೂಪಿಸಿಕೊಂಡವರು ಬಸವಣ್ಣ. ಬಿಜ್ಜಳನ ಆಸ್ಥಾನದಲ್ಲಿ ಕರಣಿಕರಾಗಿ ಸೇರಿಕೊಂಡ ಅವರು, ಬಿಜ್ಜಳನ ಭಂಡಾರವೆನ್ನುವ ಬದಲಿಗೆ ಭಕ್ತರ ಒಡವೆ ಕೆಡಲಾಗದು ಎನ್ನುವ ಹಿನ್ನೆಲೆಯಲ್ಲಿ ರಕ್ಷಣೆ ಮಾಡಿದವರು. ಆ ಭಕ್ತರ ಒಡವೆ ಎನ್ನುವ ಪದವನ್ನು ಸಿದ್ದಯ್ಯ ಪುರಾಣಿಕರು ಪಬ್ಲಿಕ್ ಫೈನಾನ್ಸ್ ಎಂದು ಉಲ್ಲೇಖಿಸಿದ್ದಾರೆ ಎಂದರು.

ಮೇ ತಿಂಗಳು ವಿಶೇಷ: ಮೇ ತಿಂಗಳು ಬಹಳ ವಿಶೇಷ. ಭಾರತೀಯ ಪರಂಪರೆಯಲ್ಲಿ ಮೇ ತಿಂಗಳಿನಲ್ಲೇ ಬರುವ ವೈಶಾಖ ಮಾಸ ಬಹಳ ಮಹತ್ವದ್ದಾಗಿದೆ. ಮೇ ತಿಂಗಳ ಮೊದಲ ದಿನ ಕಾರ್ಮಿಕ ದಿನಾಚರಣೆ ಆಚರಿಸಿದರೆ, ವೈಶಾಖ ಶುದ್ಧ ತೃತೀಯದಂದು ಕಾಯಕ ಜೀವಿಗಳಿಗೆ ಗೌರವ ಕೊಟ್ಟಂತಹ ಮಹಾನ್ ಮನವತಾವಾದಿ ಬಸವಣ್ಣನವರು ಜನಿಸಿದ ದಿನ ಹಾಗೂ ಶುದ್ಧ ಪೂರ್ಣಿಮೆಯಂದು ಇಹಲೋಕದ ದುಃಖಕ್ಕೆ ಕಾರಣವೇನು ಎಂಬುದನ್ನು ಪರಿಶೋಧಿಸಿ, ಬದುಕುವ ಮಾರ್ಗ ತೋರಿದ ಭಗವಾನ್ ಬುದ್ಧರ ಜನ್ಮದಿನವೂ ಆಗಿದೆ. ಈ ನಿಟ್ಟಿನಲ್ಲಿ ಮೇ ತಿಂಗಳು ಬಹಳ ವಿಶೇಷ ಎಂದರು. ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಹಿರಿಯ ಸಿವಿಲ್ ನ್ಯಾಯಾಧೀಶರಾದ ಬಿ.ಜಿ.ದಿನೇಶ್, ಶರಣ ಸಾಹಿತ್ಯ ಪರಿಷತ್ ಮೈಸೂರು ನಗರ ಘಟಕದ ಅಧ್ಯಕ್ಷ ಮ.ಗು.ಸದಾನಂದಯ್ಯ, ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶಾರದಾ ಶಿವಲಿಂಗಸ್ವಾಮಿ ಮತ್ತಿತರರಿದ್ದರು.



ಶರಣ ಸಾಹಿತ್ಯ ಪರಿಷತ್ ಮೈಸೂರು ನಗರ ಘಟಕ, ಕದಳಿ ಮಹಿಳಾ ವೇದಿಕೆ ವತಿಯಿಂದ ಎಂ.ಬಿ.ಮಹದೇವಪ್ಪ ಹಾಗೂ ಜಯಮ್ಮ ಅವರಿಗೆ 'ಕಾಯಕಶ್ರೀ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕಿ ಡಾ.ಧರಣೀದೇವಿ ಮಾಲಗತ್ತಿ, ಹಿರಿಯ ಸಿವಿಲ್ ನ್ಯಾಯಾಧೀಶರಾದ ಬಿ.ಜಿ.ದಿನೇಶ್ ಮತ್ತಿತರರಿದ್ದರು.

ಕಾಯಕಶ್ರೀ ಪ್ರಶಸ್ತಿ ಪ್ರದಾನ...


ಕೂಲಿ ಕೆಲಸ, ಗಾರೆ ಕೆಲಸ ಹಾಗೂ 76ನೇ ಇಳಿ ವಯಸ್ಸಿನಲ್ಲೂ ಸೆಕ್ಯೂರಿಟಿ ಕೆಲಸ ಮಾಡಿಕೊಂಡು, ಜೆಪಿ ನಗರದ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಬೆಳಗ್ಗೆಯೇ ಕಸ ಗುಡಿಸಿ ಸ್ವಚ್ಛಗೊಳಿಸುವ ಎಂ.ಬಿ.ಮಹದೇವಪ್ಪ ಹಾಗೂ ಖಾಸಗಿ ಶಾಲೆಯಲ್ಲಿ 33 ವರ್ಷದಿಂದ ಆಯಾ ಕೆಲಸ ಮಾಡಿಕೊಂಡಿರುವ ಕುವೆಂಪುನಗರದ ಜಯಮ್ಮ ಅವರಿಗೆ 'ಕಾಯಕಶ್ರೀ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಇಬ್ಬರು ಕಾಯಕ ಜೀವಿಗಳನ್ನು ಸನ್ಮಾನಿಸಿ, ಆಶೀರ್ವದಿಸಿದರು.

ಉದ್ದೂರಲ್ಲಿ ಹಲವರಿಗೆ ವಾಂತಿ–ಭೇದಿ



ಮೈಸೂರು,ಮೇ 29(ಪಿಎಂ)– ಮೈಸೂರು ತಾಲೂಕಿನ ಉದ್ದೂರು ಗ್ರಾಮದಲ್ಲಿ ಹಲವರಲ್ಲಿ ಕರುಳುಬೇನೆಯಿಂದ ವಾಂತಿ–ಭೇದಿ ಉಂಟಾಗಿದ್ದು, ಆ ಎಲ್ಲರೂ ಹೊರರೋಗಿಗಳಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಯಾರಿಗೂ ತೀವ್ರ ತರದ ಸಮಸ್ಯೆ ಕಂಡು ಬಂದಿಲ್ಲದ ಹಿನ್ನೆಲೆಯಲ್ಲಿ ಯಾವುದೇ ಆತಂಕಪಡಬೇಕಿಲ್ಲವೆಂದು ಆರೋಗ್ಯ ಇಲಾಖೆ ಮೂಲಗಳು ತಿಳಿಸಿವೆ. ಇಲಾಖೆ ಮೂಲಗಳ ಮಾಹಿತಿಯಂತೆ ಒಟ್ಟು 9 ಮಂದಿಗೆ ಸೌಮ್ಯ ರೀತಿಯ ವಾಂತಿ–ಭೇದಿ ಕಾಣಿಸಿಕೊಂಡಿದೆ. ವಾಂತಿ–ಭೇದಿ ಆಗುತ್ತಿದ್ದಂತೆ ಮುನ್ನೆಚ್ಚರಿಕಾ ಕ್ರಮ ಕೈಗೊಂಡ ಆರೋಗ್ಯ ಇಲಾಖೆ ಸೋಂಕಿತರಿಗೆ ಸೂಕ್ತ ಚಿಕಿತ್ಸೆ ಕೊಡಿಸಲು ಮುಂದಾಗಿದೆ. ನೀರಿನ ಮೂಲಗಳ ಪರೀಕ್ಷೆಗೂ ಕ್ರಮ ವಹಿಸಲಾಗಿದೆ. ಆರೋಗ್ಯ ಇಲಾಖೆ ಸಿಬ್ಬಂದಿ ಗ್ರಾಮದಲ್ಲಿ ಮನೆ ಮನೆಗೆ ಭೇಟಿ ನೀಡಿ ಗ್ರಾಮಸ್ಥರ ಆರೋಗ್ಯ ವಿಚಾರಣೆ ನಡೆಸುವ ಜೊತೆಗೆ ಜಾಗೃತಿ ಮೂಡಿಸುತ್ತಿದ್ದಾರೆ. ಕುದಿಸಿ ಆರಿಸಿದ ನೀರನ್ನೇ ಕುಡಿಯುವಂತೆ ಅರಿವು ಮೂಡಿಸಲಾಗುತ್ತಿದೆ. ಮುನ್ನೆಚ್ಚರಿಕೆ ವಹಿಸಬೇಕಿರುವ ಅಂಶಗಳನ್ನು ಒಳಗೊಂಡ ಕರಪತ್ರಗಳನ್ನು ಮನೆ ಮನೆಗೆ ವಿತರಿಸಲಾಗುತ್ತಿದೆ. ಇಲ್ಲಿನ ಗ್ರಾಪಂ. ವತಿಯಿಂದ ಆಟೋರಿಕ್ಷಾ ಮೂಲಕ ಮೈಕ್‌ನಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ.

ದಕ್ಷಿಣ ಶಿಕ್ಷಕರ ಕ್ಷೇತ್ರ: ಜೆಡಿಎಸ್‌ನಿಂದ ಮತಯಾಚನೆ



ಮೈಸೂರಿನ ಶಾರದಾ ವಿಲಾಸ ಕಾಲೇಜಿನಲ್ಲಿ ದಕ್ಷಿಣ ಶಿಕ್ಷಕರ ಕ್ಷೇತ್ರದ ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದ ಅವರ ಪರ ಮತಯಾಚಿಸಲಾಯಿತು. ಕೆ.ಆರ್.ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ಬಿ.ಜಿ.ಸಂತೋಷ್, ಕಾರ್ಯಾಧ್ಯಕ್ಷ ಎಸ್.ಪ್ರಕಾಶ್ ಪ್ರಿಯದರ್ಶನ್, ಮುಖಂಡರಾದ ಆರ್.ಎ.ರಾಧಾಕೃಷ್ಣ ಸುರೇಶ್, ಯದುನಂದನ್, ರವಿ, ಪ್ರದೀಪ್‌ಕುಮಾರ್, ಶಿವಪ್ರಸಾದ್, ರಾಘವೇಂದ್ರ ಅವರನ್ನು ಕಾಣಬಹುದು.

ವಾಲ್ಮೀಕಿ ಅಭಿವೃದ್ಧಿ ನಿಗಮದ 94 ಕೋಟಿ ಹಣ ದುರ್ಬಳಕೆ ಆರೋಪ

ಬ್ಯಾಂಕ್ ಸಿಇಒ ಸೇರಿ ಆರು ಮಂದಿ ವಿರುದ್ಧ ಎಫ್‌ಐಆರ್

ಬೆಂಗಳೂರು, ಮೇ 29– ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಲೆಕ್ಕಾಧಿಕಾರಿಯಾಗಿದ್ದ ಚಂದ್ರಶೇಖರ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಹಣ ದುರ್ಬಳಕೆ ಆರೋಪದಡಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಸಿಇಒ ಸೇರಿ ಆರು ಮಂದಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ನಕಲಿ ದಾಖಲಾತಿ ಸೃಷ್ಟಿಸಿ ಅಕ್ರಮವಾಗಿ ಕೋಟ್ಯಾಂತರ ಹಣವನ್ನು ಬೇರೆ–ಬೇರೆ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಮಾಡಿದ ಆರೋಪದ ಮೇಲೆ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಅಧಿಕಾರಿಗಳ ವಿರುದ್ಧ ನಿಗಮದ ವ್ಯವಸ್ಥಾಪಕ ನಿರ್ದೇಶಕ ರಾಜಶೇಖರ್ ಎಂಬುವರು ನೀಡಿದ ದೂರಿನ ಮೇರೆಗೆ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕ ಹಾಗೂ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ (ಸಿಇಒ) ಮನಿಮೇಖಲೈ, ಕಾರ್ಯ ನಿರ್ವಾಹಕ ನಿರ್ದೇಶಕ ನಿತೇಶ್ ರಂಜನ್, ರಾಮ ಸುಬ್ರಮಣ್ಯಂ, ಸಂಜಯರುದ್ರ, ಪಂಕಜ್ ದ್ವಿವೇದಿ ಹಾಗೂ ಸುಶಿಚಿತ ರಾವ್ ವಿರುದ್ಧ ಈ ಕೇಸ್ ಮಾಡಲಾಗಿದೆ.

ಎಂಡಿ ದೂರಿನಲ್ಲಿ ಏನಿದೆ: ಬೆಂಗಳೂರಿನ ವಸಂತ ನಗರದಲ್ಲಿರುವ ವಾಲ್ಮೀಕಿ ಅಭಿವೃದ್ಧಿ ನಿಗಮದ ಹೆಸರಿನಲ್ಲಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಬ್ಯಾಂಕ್ ಖಾತೆಯಿದ್ದು, ಇದೇ ವರ್ಷ ಫೆ.2ರಂದು ಈ ಖಾತೆಯನ್ನು ಎಂಜಿ ರೋಡ್ ಶಾಖೆಗೆ ವರ್ಗಾವಣೆ ಮಾಡಲಾಗಿದೆ. ಈ ಅಕೌಂಟ್ ನಿಗಮದ ಪರವಾಗಿ ನಿರ್ವಹಣೆ ಮಾಡಲಾಗುತಿತ್ತು. ಫೆ.26ರಂದು ಬ್ಯಾಂಕ್‌ನವರು ನಿಗಮದ ಎಂಡಿ ಹಾಗೂ ಲೆಕ್ಕಾಧಿಕಾರಿಗಳ ಸಹಿ ಪಡೆದುಕೊಂಡು ತದ ನಂತರ ಖಾತೆಯಿಂದ ಮಾರ್ಚ್ 4ರಂದು 25 ಕೋಟಿ, ಮಾ. 6ರಂದು 25 ಕೋಟಿ, ಮಾ.21 ರಂದು 44 ಕೋಟಿ, ಮೇ 21ರಂದು 50 ಕೋಟಿ ಹಾಗೂ ಮೇ 22ರಂದು 33 ಕೋಟಿ ಸೇರಿದಂತೆ ಒಟ್ಟು ನಿಗಮದ ಬ್ಯಾಂಕ್ ಖಾತೆಯಿಂದ 187.33 ಕೋಟಿ ಹಣ ವರ್ಗಾವಣೆಯಾಗಿದೆ.

ಈ ಮಧ್ಯೆ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದರಿಂದ ಬ್ಯಾಂಕ್‌ಗೆ ನಿಗಮದಿಂದ ಯಾವುದೇ ಪತ್ರ ವ್ಯವಹಾರ ನಡೆಸಿಲ್ಲ. ನಿಗಮದ ಅಧಿಕೃತ ವಿಳಾಸಕ್ಕೆ ಪಾಸ್‌ಬುಕ್, ಚೆಕ್ ಬುಕ್ ಸೇರಿದಂತೆ ಇನ್ನಿತರ ಯಾವುದೇ ದಾಖಲಾತಿಗಳನ್ನು ಬ್ಯಾಂಕ್‌ನಿಂದ ಕಳುಹಿಸಿಲ್ಲ. ಅಲ್ಲದೇ, ಭೌತಿಕವಾಗಿ ನಿಗಮದ ವತಿಯಿಂದ ಯಾವ ವ್ಯಕ್ತಿಯು ನಿಗಮದ ಹಣವನ್ನು ವಿತ್‌ಡ್ರಾ ಮಾಡಿಲ್ಲ. ಆದರೂ ನಕಲಿ ದಾಖಲೆ ಸೃಷ್ಟಿಸಿ ಸುಮಾರು 94 ಕೋಟಿ ಹಣ ವರ್ಗಾವಣೆಯಾಗಿದೆ. ಈ ಬಗ್ಗೆ ಬ್ಯಾಂಕ್ ಅಧಿಕಾರಿಗಳಿಗೆ ಸೂಕ್ತ ದಾಖಲಾತಿ ನೀಡುವಂತೆ ಕೋರಿದ್ದರೂ ಈವರೆಗೂ ಮಾಹಿತಿ ನೀಡಿಲ್ಲ ಎಂದು ದೂರಿನಲ್ಲಿ ನಿಗಮದ ಎಂಡಿ ರಾಜಶೇಖರ್ ಉಲ್ಲೇಖಿಸಿದ್ದಾರೆ.

ಬೆಂಗಳೂರು ವಿಮಾನ ನಿಲ್ದಾಣಕ್ಕೆ ಹುಸಿ ಬಾಂಬ್ ಬೆದರಿಕೆ; ತೀವ್ರ ತಪಾಸಣೆ

ಬೆಂಗಳೂರು, ಮೇ 29– ಬೆಂಗಳೂರಿನ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್–1ರ ಶೌಚಾಲಯದ ಕನ್ನಡಿ ಮೇಲೆ ವಿಮಾನ ನಿಲ್ದಾಣದೊಳಗೆ ಬಾಂಬ್ ಇರಿಸಿರುವ ಸಂದೇಶ ಬರೆಯಲಾಗಿದ್ದು, ಕೆಲ ಕಾಲ ಪ್ರಯಾಣಿಕರ ಆತಂಕಕ್ಕೆ ಕಾರಣವಾಗಿತ್ತು.

ಇಂದು ಬೆಳಗ್ಗೆ ಬೆಳಗಿನ ಜಾವ 3.40ರ ಸುಮಾರಿಗೆ ಈ ಸಂದೇಶ ಬರೆಯಲಾಗಿದ್ದು, ವಿಮಾನ ನಿಲ್ದಾಣದ ಭದ್ರತಾ ಸಿಬ್ಬಂದಿ ಮತ್ತು ಪೊಲೀಸರು ವಿಮಾನ ನಿಲ್ದಾಣದ ಎರಡೂ ಟರ್ಮಿನಲ್‌ಗಳ ತೀವ್ರ ತಪಾಸಣೆ ನಡೆಸಿದರು. ನಂತರ ಬೆಳಗ್ಗೆ 7 ಗಂಟೆಯ ಸುಮಾರಿಗೆ ಇದು ಹುಸಿ ಬಾಂಬ್ ಬೆದರಿಕೆ ಎಂದು ಘೋಷಿಸಲಾಯಿತು. ವಿಮಾನ ಕಾರ್ಯಾಚರಣೆಯ ಮೇಲೆ ಯಾವುದೇ ಪರಿಣಾಮ ಬೀರಿಲ್ಲ ಎಂದು ವಿಮಾನ ನಿಲ್ದಾಣದ ಮೂಲಗಳು ತಿಳಿಸಿವೆ. ಹದಿನೈದು ದಿನಗಳ ಅವಧಿಯಲ್ಲಿ ವಿಮಾನ ನಿಲ್ದಾಣಕ್ಕೆ ಬಂದಿರುವ ಎರಡನೇ ಹುಸಿ ಬಾಂಬ್ ಬೆದರಿಕೆ ಇದಾಗಿದೆ.

ಭದ್ರತಾ ಅಧಿಕಾರಿಯೊಬ್ಬರ ಪ್ರಕಾರ, ವಿಮಾನ ನಿಲ್ದಾಣದ ಆಲ್ಫಾ 3 ಬಿಲ್ಡಿಂಗ್‌ನಲ್ಲಿನ ಶೌಚಾಲಯದ ಕನ್ನಡಿ ಮೇಲೆ 25 ನಿಮಿಷದಲ್ಲಿ ಕಟ್ಟಡಗಳು ಸ್ಫೋಟವಾಗುವುದಾಗಿ ಬೆದರಿಕೆ ಸಂದೇಶ ಬರೆಯಲಾಗಿತ್ತು. ಬೆಳಗ್ಗೆ ಶೌಚಾಲಯಕ್ಕೆ ಸಿಬ್ಬಂದಿ ತೆರಳಿದ ವೇಳೆ ಬರಹವನ್ನು ನೋಡಿದ್ದಾರೆ. ಕೂಡಲೆ ಈ ವಿಚಾರವನ್ನು ಭದ್ರತಾ ಪಡೆಗೆ ತಿಳಿಸಿದ್ದಾರೆ. ಬೆದರಿಕೆ ಸಂದೇಶದಿಂದ ಸಿಬ್ಬಂದಿ ಹಾಗೂ ಭದ್ರತಾ ಪಡೆ ಕೆಲಕಾಲ ಆತಂಕಕ್ಕೆ ಒಳಗಾಗಿದ್ದರು.

ಇಂಡಿಯಾ ಕೂಟ ಅಧಿಕಾರಕ್ಕೆ ಬಂದರೆ ಖಾತೆಗೆ 1 ಲಕ್ಷ ಜಮಾ...!

ರಾಹುಲ್ ಗಾಂಧಿ ಹೇಳಿಕೆ ಬೆನ್ನಲ್ಲೇ ಪೋಸ್ಟ್ ಆಫೀಸ್ ಮುಂದೆ ಸಾಲುಗಟ್ಟಿದ ಮಹಿಳೆಯರು



ಬೆಂಗಳೂರು, ಮೇ 29–ಹಾಲಿ ಲೋಕಸಭಾ ಚುನಾವಣೆ ಅಂತಿಮ ಹಂತ ತಲುಪಿದ್ದು, ಕಾಂಗ್ರೆಸ್ ನೇತೃತ್ವದ ಇಂಡಿಯಾ ಕೂಟ ಅಧಿಕಾರಕ್ಕೆ ಬಂದರೆ ಮಹಿಳೆಯರ ಖಾತೆಗೆ 1 ಲಕ್ಷ ರೂ ಜಮೆ ಮಾಡಲಾಗುತ್ತದೆ ಎಂಬ ರಾಹುಲ್ ಗಾಂಧಿ ಹೇಳಿಕೆ ಬೆನ್ನಲ್ಲೇ ನಗರದ ವಿವಿಧ ಅಂಚೆ ಕಚೇರಿ ಮುಂದೆ ಜನ ಸಾಲುಗಟ್ಟಿ ನಿಲ್ಲಲಾರಂಭಿಸಿದ್ದಾರೆ. ಲೋಕಸಭೆ ಚುನಾವಣೆ ಪ್ರಚಾರದಲ್ಲಿ ರಾಹುಲ್ ಗಾಂಧಿ, ಇಂಡಿಯಾ ಒಕ್ಕೂಟ ಅಧಿಕಾರಕ್ಕೆ ಬಂದ ಕೂಡಲೇ ನಿಮ್ಮ ಖಾತೆಗೆ ಹಣ ಜಮಾವಣೆ ಮಾಡುವುದಾಗಿ ಘೋಷಣೆ ಮಾಡಿದ್ದರು.

ಈ ಘೋಷಣೆಯ ಬೆನ್ನಲ್ಲೇ ಇಂಡಿಯನ್ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್ ಡಿಜಿಟಲ್ ಖಾತೆ ತೆರೆಯಲು ಮಹಿಳೆಯರು ಮುಗಿಬಿದ್ದಿದ್ದಾರೆ. ರಾಹುಲ್ ಗಾಂಧಿ ಘೋಷಣೆ ಪರಿಣಾಮ, ಪೋಸ್ಟ್ ಆಫೀಸ್‌ಗಳಲ್ಲಿ ಖಾತೆ ತೆರೆಯಲು ಮಹಿಳೆಯರು ಮುಗಿಬಿದ್ದಿದ್ದಾರೆ. ಇವರಲ್ಲಿ ಹೆಚ್ಚಾಗಿ ಮುಸ್ಲಿಂ ಮಹಿಳೆಯರೇ ಕಂಡು ಬರುತ್ತಿದ್ದಾರೆ. ಪ್ರತಿ ತಿಂಗಳು 8500 ರೂ. ಹಣ ಬರಲಿದೆ ಎಂಬ ನಿರೀಕ್ಷೆಯಲ್ಲಿ ಪೋಸ್ಟ್ ಆಫೀಸ್ ಮುಂದೆ ಕ್ಯೂ ನಿಲ್ಲುತ್ತಿದ್ದಾರೆ.

ಜನರ ನಿಯಂತ್ರಣಕ್ಕೆ ಅಂಚೆ ಸಿಬ್ಬಂದಿ ಹರಸಾಹಸ: ಇನ್ನು ಕಳೆದ 15 ದಿನದಿಂದ ನಿತ್ಯ ಸಾವಿರಾರು ಸಂಖ್ಯೆಯಲ್ಲಿ ಖಾತೆ ತೆರೆಯಲು ಮಹಿಳೆಯರು ಮುಗಿಬೀಳುತ್ತಿರುವುದು ಕಂಡುಬಂದಿದೆ. ಮಹಿಳೆಯರ ನಿಯಂತ್ರಣ ಮಾಡಲಾರದೆ ಬೆಂಗಳೂರಿನ ಅಂಚೆ ಕೇಂದ್ರ ಕಚೇರಿಯ ಸಿಬ್ಬಂದಿ ಹರಸಾಹಸ ಪಡುತ್ತಿದ್ದಾರೆ. ನಿತ್ಯ ಬೆಳಗ್ಗೆ 4 ಗಂಟೆಯಿಂದಲೇ ಕಚೇರಿ ಮುಂದೆ ಮುಗಿಬೀಳುತ್ತಿರುವ ಸುತ್ತಮುತ್ತಲಿನ ಶಿವಾಜಿ ನಗರ, ವಸಂತನಗರ ಮುಂತಾದೆಡೆಗಳ ಮಹಿಳೆಯರು, ಅವರ ಜೊತೆಗೆ ಬರುತ್ತಿರುವ ಪುರುಷರು ಅಂಚೆ ಕಚೇರಿ ಆವರಣವನ್ನು ಅಕ್ಷರಶಃ ಸಂತೆಯಾಗಿಸಿದ್ದಾರೆ.

ಟೋಕನ್ ವ್ಯವಸ್ಥೆ ಆರಂಭಿಸಿದ ಸಿಬ್ಬಂದಿ: ಮಹಿಳೆಯರ ನಿಯಂತ್ರಣ ಸಾಧ್ಯವಾಗದೆ ಅಂಚೆ ಸಿಬ್ಬಂದಿ ಟೋಕನ್ ವಿತರಿಸಲು ಆರಂಭಿಸಿದ್ದು, ಬೆಳಗ್ಗೆ 4 ಗಂಟೆಗೆ ಟೋಕನ್ ವಿತರಣೆ ಆರಂಭವಾಗುತ್ತಿದೆ. ಸಾವಿರಾರು ಸಂಖ್ಯೆಯಲ್ಲಿ ಕ್ಯೂ ನಿಂತು ಮಹಿಳೆಯರು ಟೋಕನ್ ಪಡೆಯುತ್ತಿದ್ದಾರೆ.

ಹಣ ಬರುತ್ತೆ ಅಂದ್ರು... ಅದಕ್ಕೆ ಬಂದ್ವಿ: ಇನ್ನು ಪೋಸ್ಟ್ ಆಫೀಸ್ ಖಾತೆ ತೆರೆದರೆ ಸರ್ಕಾರ ಹಣ ಹಾಕುತ್ತದೆ ಎಂದು ಪಕ್ಕದ ಮನೆಯವರು ಹೇಳಿದರು. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಒಂದು ಲಕ್ಷ ಹಣ ನೀಡುತ್ತಾರಂತೆ. ಮೋದಿ ಬಂದ್ರೆ 2 ಸಾವಿರ ನೀಡುತ್ತಾರಂತೆ. ಯಾರು ಬಂದ್ರೇನು ನಮಗೆ ಹಣ ಬರುತ್ತೆ ಅಂತ ಹೇಳಿದ್ರು. ಅದಕ್ಕೆ ಬಂದಿದ್ದೇವೆ. ಬೆಳಗ್ಗೆ 5 ಗಂಟೆಗೆ ಬಂದಿದ್ದೇವೆ. ಯಾವ ಅಧಿಕಾರಿಗಳೂ ಹೇಳಿಲ್ಲ, ನೆರೆಮನೆಯವರು, ಸ್ಥಳೀಯರು ಹೇಳಿದರು ಎಂದು ಖಾತೆಗಾಗಿ ಕ್ಯೂ ನಿಂತ ಮಹಿಳೆಯೊಬ್ಬರು ತಿಳಿಸಿದ್ದಾರೆ.

ಜಿಪಿಒ ಸ್ಪಷ್ಟನೆ: ಇನ್ನು ಈ ಬಗ್ಗೆ ಸ್ಪಷ್ಟನೆ ನೀಡಿರುವ ಹೆಡ್ ಪೋಸ್ಟ್ ಮಾಸ್ಟರ್ ಮಂಜೇಶ್ ಅವರು, ನಮ್ಮಲ್ಲಿ ಮೊದಲಿನಿಂದಲೂ IPPB ಖಾತೆ ಮಾಡುತ್ತಿದ್ದೇವೆ. ಆದರೆ ಕೆಲ ದಿನಗಳಿಂದ ಜನರ ಸಂಖ್ಯೆ ಸಿಕ್ಕಾಪಟ್ಟೆ ಹೆಚ್ಚಾಗಿದೆ. ಅಕೌಂಟ್‌ಗೆ ಹಣ ಹಾಕ್ತಾರೆ ಅಂತ ಜನ ಬರುತ್ತಿದ್ದಾರೆ. ಹಣ ಬರುವ ಬಗ್ಗೆ ನಮಗೆ ಯಾವುದೇ ಸೂಚನೆ ಇಲ್ಲ. ಆದರೆ ವದಂತಿ ಹರಡಿ ಜನರು ಜಾಸ್ತಿ ಜಾಸ್ತಿ ಬರ್ತಿದ್ದಾರೆ. ಈ ಖಾತೆಯಿಂದ ಬೇರೆ ಬೇರೆ ಪ್ರಾಧಿಕಾರಗಳಿಗೆ ಹಣ ಕಟ್ಟಬಹುದು.

200 ರೂ. ಮಾತ್ರ ಜಮಾ ಮಾಡಿಸಿ ಖಾತೆ ತೆರೆಯುತ್ತಿದ್ದೇವೆ. ಜನರು ಹೆಚ್ಚಾಗಿದ್ದರಿಂದ ಈಗ ಹೆಚ್ಚಿನ ಸಿಬ್ಬಂದಿ ನೇಮಿಸಿದ್ದೇವೆ. ನಿತ್ಯ 1 ಸಾವಿರ ಅಕೌಂಟ್ ಮಾಡಿ ಕೊಡುತ್ತಿದ್ದೇವೆ. ಜನರಿಗೆ ಮಾಹಿತಿ ಕೊರತೆ ಇರೋದರಿಂದ ಮುಗಿಬೀಳ್ತಿದ್ದಾರೆ. ಇದಕ್ಕೆ ಯಾವುದೇ ಕೊನೆ ದಿನಾಂಕ ಇಲ್ಲ. ಯಾವ ಅಂಚೆ ಕಚೇರಿಯಲ್ಲಾದರೂ ಅಕೌಂಟ್ ಮಾಡಿಸಬಹುದು ಎಂದು ಸ್ಪಷ್ಟನೆ ನೀಡಿದರು.

ನಕ್ಕರೆ ಅದೇ ಸ್ವರ್ಗ

ಆತ : "ಇತ್ತೀಚೆಗೆ ಟೀ ಕುಡಿದು ಬಿಟ್ರೆ ನಂಗೆ ನಿದ್ದೇನೇ ಬರೋದಿಲ್ಲ..."
ಈತ : "ಹೌದಾ...!"
ಆತ : "ನಿಂಗೆ?"
ಈತ : "ನಂಗೆ ಉಲ್ಟಾ ಮಲಗಿ ಬಿಟ್ರೆ ಕಾಫಿ ಕುಡಿಯೋಕೇ ಆಗೊಲ್ಲ"

ಮೈಸೂರು ಮಿತ್ರ

ಗುರುವಾರ, 30 ಮೇ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಜಗತ್ತಿನಲ್ಲಿ ಮಹಾತ್ಕಾರ್ಯಗಳಾಗಬೇಕಾದರೆ
ಸ್ಫೂರ್ತಿಯೇ ಒಂದು ಸಾಧನ – ರ್‍ಯಾಂಡಿಪಾಶ್.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬಿಸಾಕಿದ್ದ ಹಳೇ ಕಂಬಳಿ ಚಳಿಗಾಲಕ್ಕೆ ಬೇಕಾಯ್ತು

ನಿಮ್ಮ ಪತ್ರಗಳು

■ ಪಾದಚಾರಿ ಮಾರ್ಗಗಳಲ್ಲಿ ವ್ಯಾಪಾರ ವಹಿವಾಟು ತೆರವುಗೊಳಿಸಿ



ಮಾನ್ಯರೆ,

ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಪಾದಚಾರಿ ಮಾರ್ಗಗಳಲ್ಲಿ ವ್ಯಾಪಾರ ವಹಿವಾಟು ಎಗ್ಗಿಲ್ಲದೆ ನಡೆಯುತ್ತಿದೆ. ಇದರಿಂದ ಪಾದಚಾರಿಗಳ ಓಡಾಟಕ್ಕೆ ತುಂಬಾ ತೊಂದರೆಯಾಗಿದೆ. ಮೈಸೂರಿನ ಪ್ರಮುಖ ರಸ್ತೆಗಳಾದ ಸಬರ್ಬನ್ ಬಸ್ ಸ್ಟ್ಯಾಂಡ್ ರಸ್ತೆ, ಗಾಂಧಿ ವೃತ್ತ, ಅಶೋಕ ರಸ್ತೆ, ಮೀನಾ ಬಜಾರ್ ರಸ್ತೆ, ದೇವರಾಜ ಅರಸು ರಸ್ತೆ, ಶಿವರಾಂಪೇಟೆ, ದೇವರಾಜ ಮಾರುಕಟ್ಟೆ, ಕೆ.ಆರ್.ವೃತ್ತದಿಂದ ಕೆ.ಆರ್.ಆಸ್ಪತ್ರೆವರೆಗೆ, ಬನ್ನಿಮಂಟಪದ ಅನೇಕ ರಸ್ತೆಗಳ ಪಾದಚಾರಿ ಮಾರ್ಗಗಳಲ್ಲಿ ಬೀದಿ ಬದಿ ವ್ಯಾಪಾರಿಗಳು ಪಾದಚಾರಿ ಮಾರ್ಗಗಳನ್ನು ಆಕ್ರಮಿಸಿಕೊಂಡು ವ್ಯಾಪಾರ ಮಾಡುತ್ತಿದ್ದಾರೆ. ಇದರಿಂದ ಹಿರಿಯ ನಾಗರಿಕರು, ಮಹಿಳೆಯರು, ವಿದ್ಯಾರ್ಥಿಗಳು, ಚಿಕ್ಕ ಮಕ್ಕಳು ಇತರರಿಗೆ ಪಾದಚಾರಿ ಮಾರ್ಗದಲ್ಲಿ ಸಂಚರಿಸಲು ಕಷ್ಟವಾಗುತ್ತಿದೆ. ಕೆಲವು ಸಮಯಗಳಲ್ಲಿ ಪುಂಡರು ಬೇಕಂತಲೇ ಮಹಿಳೆಯರನ್ನು ಟಚ್ ಮಾಡಿ ಕಿರಿಕಿರಿ ಉಂಟು ಮಾಡುತ್ತಿದ್ದಾರೆ. ಈ ಕೂಡಲೆ ಮೈಸೂರು ನಗರ ಪಾಲಿಕೆಯ ಅಧಿಕಾರಿಗಳು ಪಾದಚಾರಿ ಮಾರ್ಗಗಳಲ್ಲಿ ವ್ಯಾಪಾರ ವಹಿವಾಟುಗಳನ್ನು ತೆರವುಗೊಳಿಸಿ ಸಾರ್ವಜನಿಕರಿಗೆ ಪಾದಚಾರಿ ಮಾರ್ಗಗಳಲ್ಲಿ ಓಡಾಡಲು ಅನುಕೂಲ ಮಾಡಿಕೊಡಬೇಕೆಂದು ಮನವಿ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು

■ ಸಿಎಂ ಸಿದ್ದರಾಮಯ್ಯ, ಹೆಚ್‌ಡಿಕೆ ನಡುವಿನ ಹೇಳಿಕೆಗಳು ಸರಿಯಲ್ಲ

ಮಾನ್ಯರೆ,

ಸಂಸದ ಪ್ರಜ್ವಲ್ ರೇವಣ್ಣ ಅವರ ಲೈಂಗಿಕ ದೌರ್ಜನ್ಯದ ಪೆನ್‌ಡ್ರೈವ್ ವಿಷಯಕ್ಕೆ ಸಂಬಂಧಿಸಿದಂತೆ ಹಾಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರ ನಡುವಿನ ಹೇಳಿಕೆಗಳು ಇತ್ತೀಚೆಗೆ ತೀರಾ ವೈಯಕ್ತಿಕ ಮಟ್ಟ ತಲುಪುತ್ತಿರುವುದು, ಅವರುಗಳು ಸಭ್ಯತೆಯನ್ನು ಮೀರಿ ಹೋಗುತ್ತಿರಬಹುದು ಎನ್ನಿಸುತ್ತಿದೆ.

ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ವಿದೇಶಕ್ಕೆ ಕಳುಹಿಸಿದ್ದೆ ಮಾಜಿ ಪ್ರಧಾನಿ ದೇವೇಗೌಡರು, ಈಗ ಪತ್ರ ಬರೆದು ಏನು ಪ್ರಯೋಜನ ಎಂದು ಸಿಎಂ ಸಿದ್ದರಾಮಯ್ಯನವರ ಹೇಳಿಕೆಗೆ ಕುಮಾರಸ್ವಾಮಿ ಅವರು, ಸಿದ್ದರಾಮಯ್ಯ ಅವರಿಗೆ, ನಿಮ್ಮ ಮಗ ಸಾಯಲಿ ಎಂದು ವಿದೇಶಕ್ಕೆ ಕಳಿಸಿದ್ರ ಎಂದು ತೀರಾ ವೈಯಕ್ತಿಕ ಮಟ್ಟಕ್ಕೆ ಇಳಿದು ಮಾತನಾಡಿದ್ದಾರೆ. ಇದಕ್ಕೆ ಪ್ರತಿಯಾಗಿ ಸಿದ್ದರಾಮಯ್ಯ ಅವರು, ನನ್ನ ಮಗ ಸತ್ತು 8 ವರ್ಷಗಳು ಕಳೆದಿವೆ. ಪ್ರಜ್ವಲ್ ರೇವಣ್ಣ ಕೇಸಿಗೂ, ರಾಕೇಶ್ ಸಾವಿನ ಕೇಸಿಗೂ ಹೋಲಿಕೆ ಮಾಡಿ ಮಾತನಾಡು ವುದು ಮುರ್ಖತನದ್ದು ಎಂದಿದ್ದಾರೆ.

ಸಿದ್ದರಾಮಯ್ಯ ಮತ್ತು ಕುಮಾರಸ್ವಾಮಿ ಅವರು ಒಂದೊಂದು ಪ್ರಬಲ ಸಮುದಾಯಗಳನ್ನು ಪ್ರತಿನಿಧಿಸುವ ನಾಯಕರು. ಇವರು ಸಾರ್ವಜನಿಕ ಜೀವನದಲ್ಲಿ ಇರುವವರು. ಇವರು ಇನ್ನೊಬ್ಬರ ಮನಸ್ಸಿಗೆ ನೋವಾಗುವಂತೆ ಮಾತನಾಡುವ ಮುನ್ನ ಸ್ವಲ್ಪ ಯೋಚಿಸಲಿ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.

■ ಕೆಸರೆ 3ನೇ ಹಂತದಲ್ಲಿ ಕಸ ತೆರವುಗೊಳಿಸಿ



ಮಾನ್ಯರೆ

ಮೈಸೂರಿನ ಕೆಸರೆ 3ನೇ ಹಂತದಲ್ಲಿ ಕಸದ ರಾಶಿ ಬಿದ್ದಿದ್ದು, ಇದುವರೆಗೂ ಪಾಲಿಕೆ ಪೌರಕಾರ್ಮಿಕರು ತೆರವುಗೊಳಿಸಿಲ್ಲ. ಇದರಿಂದ ದನ ಕರುಗಳು, ನಾಯಿಗಳು ಕಸವನ್ನು ಕೆರೆದು ರಸ್ತೆಗೆ ತಂದು ಹಾಕುತ್ತಿವೆ. ಅಲ್ಲದೆ ಇದರಿಂದ ಬರುವ ದುರ್ವಾಸನೆಯಿಂದ ಇಲ್ಲಿನ ನಿವಾಸಿಗಳು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಅಲ್ಲದೆ ಹಿರಿಯ ನಾಗರಿಕರು, ಮಕ್ಕಳು ಓಡಾಡಲು ತುಂಬಾ ಕಷ್ಟವಾಗಿದ್ದು, ಆರೋಗ್ಯದ ಮೇಲೆ ಪರಿಣಾಮ ಬೀರುವ ಆತಂಕದಲ್ಲಿದ್ದಾರೆ. ಈ ಕೂಡಲೆ ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳು ಕಸ ತೆರವುಗೊಳಿಸಬೇಕೆಂದು ಮನವಿ.

– ನೊಂದ ನಿವಾಸಿಗಳು, ಕೆಸರೆ 3ನೇ ಹಂತ, ಮೈಸೂರು.

■ ಅಧಃಪತನ!

ಮಾನ್ಯರೆ,

ಈ ಹೊತ್ತಿನ ದುರ್ದೈವವೆಂದರೆ ಅನೇಕ ಮಾತುಗಳು ತಮ್ಮ ಒಳ್ಳೆಯ ಮೂಲಾರ್ಥವನ್ನು ನೀಗಿಕೊಂಡು, ಅಪಾರ್ಥ ಪಡೆದುಕೊಂಡಿರುವುದು; ಅಧಃಪತನಕ್ಕೀಡಾಗಿರುವುದು. ಇದಕ್ಕೆ ಕಾರಣ ಮೌಲ್ಯಪತನ; ಸಮಾಜದಲ್ಲಿ ಆಗಿರುವ ಅವನತಿ!

ನಿದರ್ಶನಕ್ಕೆ, ಪ್ರಜಾಪ್ರಭುತ್ವ ಸಂಬಂಧವಾದ ಕೆಲವು ಉಕ್ತಿಗಳನ್ನು ಗಮನಿಸಬಹುದು. "Govt. of the people, by the people, for the people" ಎಂಬುದು ಪ್ರಸಿದ್ಧವಾದ ಅಬ್ರಹಾಂ ಲಿಂಕನ್ನನ ಪ್ರಜಾಪ್ರಭುತ್ವ ಲಕ್ಷಣೀಕರಣ. ಅದನ್ನು ಯಾರೋ ಹೀಗೆ ತಿರುಚಿದ್ದಾರೆ. "Govt. `Off' the people, `buy' the people, `far' the people". ಇದು ಶಬ್ದ ಚಮತ್ಕಾರ ನಿಜ; ಆದರೆ ಸತ್ಯವಲ್ಲವೆ, ಈಗ?

ಇನ್ನು ಇಂಥ ಚಮತ್ಕಾರವಿಲ್ಲದ ಗಂಭೀರ ಅರ್ಥ ಪ್ರಸಕ್ತಿಯನ್ನು ಲಕ್ಷಿಸಬಹುದು. ಡಾ. ಎಸ್. ರಾಧಾಕೃಷ್ಣನ್ ತಮ್ಮ 'ಧರ್ಮ ಮತ್ತು ಸಮಾಜ' ಎಂಬ ಪುಸ್ತಕದಲ್ಲಿ ಹೇಳುತ್ತಾರೆ : "ಸ್ವಾತಂತ್ರ್ಯ (Liberty) ಎಂದರೆ, ನನ್ನ ಮನಸ್ಸಿಗೆ ಬಂದಂತೆ ಮಾಡಬಲ್ಲೆ', ಸಮಾನತೆ (Equality) ಎಂದರೆ, 'ನನಗಿಂತ ನೀನು ಉತ್ತಮನಲ್ಲ', ಸೋದರತೆ (Fraternity) ಎಂದರೆ, 'ನಿನ್ನದು ನನ್ನದೇ, ನಾನದನ್ನು ಬಯಸಿದರೆ' – ಎಂದು 'ಸಿನಿಕ' ವ್ಯಕ್ತಿ ಫ್ರೆಂಚ್ ಕ್ರಾಂತಿ ಜನಪ್ರಿಯಗೊಳಿಸಿದ ತತ್ತ್ವಗಳನ್ನು ವ್ಯಾಖ್ಯಾನಿಸುತ್ತ ಹೇಳುತ್ತಾನೆ!"

ಹೀಗಾಗಬಾರದು; ತತ್ತ್ವಗಳು, ಆದರ್ಶಗಳು ಅರ್ಥ ಕಳೆದುಕೊಂಡು ಅನರ್ಥಕ್ಕೆಡೆಗೊಡಬಾರದು. ಶಬ್ದಾರ್ಥಗಳೆರಡೂ ಮೂಲಾರ್ಥದಲ್ಲಿ ಶುದ್ಧವಾಗಿ ಉಳಿಯಬೇಕು. ಅದು ಜನಜೀವನದ ಸಸ್ಥತೆಯ ಮತ್ತು ಸ್ವಚ್ಛತೆಯ ಪ್ರತೀಕ!

–ಸಿಪಿಕೆ, ಹಿರಿಯ ಸಾಹಿತಿಗಳು, ಮೈಸೂರು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ಆರೋಗ್ಯ ಎಲ್ಲಿದೆಯೋ ಅಲ್ಲಿದೆ ಆಯುಷ್ಯ...!!

ನಮ್ಮದು ಸೀಮಿತವಾದ ಜೀವನ. ಸಾಮಾನ್ಯವಾಗಿ ಹೇಳುವುದೇನೆಂದರೆ 'ಹುಟ್ಟು ಆಕಸ್ಮಿಕ; ಮರಣ ನಿಶ್ಚಿತ' ಎಂದು. ಹುಟ್ಟಿನ ಮುಂಚಿನ ಜೀವನ ನಮಗೆ ತಿಳಿಯದು ಹಾಗೆಯೇ ಮರಣದ ನಂತರವೂ ಏನಾಗುತ್ತದೆ ಎಂಬುದು ಯಾರಿಗೂ ತಿಳಿದಿಲ್ಲ. ನಾವು ಎಷ್ಟು ವರ್ಷ ಬದುಕಿರುತ್ತೇವೋ ಅದೂ ತಿಳಿಯದು. ಗಟ್ಟಿಮುಟ್ಟಾಗಿದ್ದವರೂ ಆಕಸ್ಮಿಕವಾಗಿ ತೀರಿ ಹೋಗುತ್ತಾರೆ, ನೋಡಲು ಬಹಳ ಆರೋಗ್ಯವಂತರಾಗೇ ಇದ್ದರು, ಆದರೂ ಇದ್ದಕ್ಕಿದ್ದಂತೆ ಮರಣ ಹೊಂದಿದರು ಎಂಬ ಮಾತುಗಳನ್ನು ಕೆಲವರ ಬಗ್ಗೆ ಕೇಳುತ್ತೇವೆ. ನಾವೂ ಹಲವು ಸಂದರ್ಭಗಳಲ್ಲಿ ಅದೇ ರೀತಿ ಹೇಳಿರುತ್ತೇವೆ. ಹಾಗೆಯೇ ಪತ್ರಿಕೆಗಳಲ್ಲಿ ಬರುವ ನಿಧನದ ವಾರ್ತೆಗಳಲ್ಲಿ ನಮಗಿಂತ ಕಿರಿಯರು ಸಾವನ್ನಪ್ಪಿರುವ ಬಗ್ಗೆಯೂ ಓದುತ್ತೇವೆ. ಇನ್ನು ಅಪಘಾತಗಳಲ್ಲಿ ಮರಣ ಹೊಂದಿದವರ ಸಮಾಚಾರ ಓದಿದಾಗ ಮನಸ್ಸು ದುಗುಡ ಹೊಂದುತ್ತದೆ. ಇವೆಲ್ಲವೂ ಮರಣ ಆಕಸ್ಮಿಕ, ಜೀವನ ಶಾಶ್ವತವಲ್ಲ ಎಂಬ ಸಂದೇಶಕ್ಕೆ ಇಂಬು ನೀಡುತ್ತದೆ.

ಇಂತಹ ಸುದ್ದಿಗಳನ್ನು ಓದಿದಾಗ ಅಥವಾ ನಮ್ಮವರೇ ಸಾವಿಗೀಡಾದಾಗ ಅಯ್ಯೋ! ಜೀವನ ಎಂದರೆ ಇಷ್ಟೆಯೇ? ಎಂಬ ಉದ್ಗಾರಗಳೂ ನಮ್ಮಿಂದ ಬಂದಿರುತ್ತವೆ. ಜೀವನ ಎಂಬುದು ನಾವು ಅಂದುಕೊಂಡಂತೆ ಇರುವುದಿಲ್ಲ. ಯಾವ ಘಳಿಗೆಯಲ್ಲಿ ಯಾರು ಇಲ್ಲವಾಗುತ್ತಾರೋ ಗೊತ್ತೇ ಆಗುವುದಿಲ್ಲ. ಆಗೆಲ್ಲಾ ಮನಸ್ಸು ನಾವೂ ಅಂತಿಮ ದಿನಕ್ಕೆ ಅಣಿಯಾಗಿಯೇ ಜೀವನ ಮಾಡಬೇಕು, ಯಾವಾಗ ಏನಾಗುವುದೋ ಗೊತ್ತಿಲ್ಲ ಎಂದೇ ಅಂದುಕೊಳ್ಳುತ್ತೇವೆ. ಆದರೆ ಈ ಅನಿಸಿಕೆಗಳು ಕ್ಷಣಿಕವಾದದ್ದು. ಹೊರಲೋಕದ ವ್ಯವಹಾರಕ್ಕೆ ಮರಳಿದಾಗ ಇದೆಲ್ಲಾ ಮರೆತುಹೋಗಿ, ನಮ್ಮ ದೈನಂದಿನ ಅನಿಸಿಕೆಗಳಿಗೆ ತಕ್ಕ ಹಾಗೆ ನಡೆದುಕೊಂಡು ಬಿಡುತ್ತೇವೆ. ಮತ್ತೆ ಅಂತಹ ಮರಣದ ಸಮಾಚಾರ ಕೇಳಿದಾಗಲೇ ಮನಸ್ಸು ಮತ್ತೆ ಹಿಂದಿನ ಯೋಚನೆಗಳಿಗೆ ಮರಳುತ್ತದೆ.

ಆದರೆ ಈ ಹಿನ್ನೆಲೆಯಲ್ಲಿ ಜೀವನ ಕುರಿತು ಯೋಚಿಸಿದಾಗ ನಮ್ಮ ಜೀವನ ಪದ್ಧತಿಯನ್ನು ಸುಧಾರಿಸಿಕೊಳ್ಳಬೇಕು ಎನ್ನಿಸುತ್ತದೆ. ನಮ್ಮ ಜೀವನ ಪಯಣ ಚಿಕ್ಕದೇ. ಅದನ್ನು ಸುಂದರವಾಗಿರುವಂತೆ ರೂಪಿಸಿಕೊಳ್ಳಬೇಕು. ಅನೇಕ ಸಲ ನಾವೇ ಮಾಡಿದ ತಪ್ಪಿನಿಂದಾಗಿ ನಮ್ಮ ಜೀವನವನ್ನು ಸಂದಿಗ್ಧ ಸ್ಥಿತಿಗೆ ತಂದುಕೊಂಡಿರುತ್ತೇವೆ ಹಾಗೂ ಅದರಿಂದ ಹೊರಬರಲಾಗದ ಚಡಪಡಿಕೆಯ ಜೀವನ ನಮ್ಮದಾಗಿರುತ್ತದೆ.

ನಾವು ಸಮಾಜ ಜೀವಿಗಳು. ಸಮಾಜದ ಹೊರಗೆ ಇದ್ದು ಜೀವನ ಸಾಗಿಸಲಾಗುವುದಿಲ್ಲ. ನೋವಿರಲಿ, ನಲಿವಿರಲಿ ಅದು ಈ ಸಮಾಜದ ಜೊತೆಗೇ ಆಗಬೇಕು. ಇದನ್ನು ಮನಸ್ಸಿನಲ್ಲಿ ಇಟ್ಟುಕೊಂಡು ನಲಿವಿನ ಜೀವನದ ಕಡೆಗೆ ಮನಸ್ಸು ಹರಿಸಬೇಕು. ಅದು ಅನಿವಾರ್ಯವೂ, ಅವಶ್ಯಕವೂ ಆಗಿದೆ.

ಈ ಹಿಂದೆ ನಮ್ಮಲ್ಲಿ ಕೂಡು ಕುಟುಂಬ ವ್ಯವಸ್ಥೆ ಇತ್ತು. ನೂರಾರು ಜನರು ಒಟ್ಟಿಗೆ ಇರುತ್ತಿದ್ದ ಮನೆಗಳಿದ್ದವು. ಅಲ್ಲಿ ಸಾಮಾನ್ಯವಾಗಿ ದುಗುಡದ ಜೀವನ ಇರುತ್ತಿರಲಿಲ್ಲ. ಮನೆಯಲ್ಲಿ ಯಾರಿಗಾದರೂ ತೊಂದರೆಯಾದರೆ ಅವರ ಕಷ್ಟಕ್ಕೆ ಇತರರು ಸ್ಪಂದಿಸುತ್ತಿದ್ದರು. ಯಾರಾದರೊಬ್ಬರಿಗೆ ಅನಾರೋಗ್ಯ ಕಾಡಿದರೆ ಅವರ ಶುಶ್ರೂಷೆಯನ್ನು ಎಲ್ಲರೂ ಸೇರಿ ಮಾಡುತ್ತಿದ್ದರು. ಮನೆಯಲ್ಲಿ ಹಬ್ಬ ಹರಿದಿನಗಳಲ್ಲಿ ಇರುವಂತಹ ಸಡಗರ ಇಡೀ ವರ್ಷ ಇರುತ್ತಿತ್ತು. ನೋವು, ನಲಿವಿಗೆ ಸ್ಪಂದಿಸುವ ಜನರಿರುವಾಗ ಹಾಗೂ ನಾನು ಒಬ್ಬನೇ ಅಲ್ಲ, ನನ್ನೊಂದಿಗೆ ಬಹಳ ಜನರಿದ್ದಾರೆ ಎಂಬ ಭಾವನೆಯೇ ಧೈರ್ಯ ನೀಡುತ್ತಿತ್ತು. ನನಗೆ ಕಷ್ಟ ಬಂದಾಗ ಇತರರು ಸ್ಪಂದಿಸುವ ರೀತಿಯಲ್ಲೇ ನಾನೂ ಸ್ಪಂದಿಸಬೇಕು ಎಂಬ ಮನೋಭಾವ ಇರುತ್ತಿತ್ತು. ತಾನು ಏನಾದರೂ ಸಾಧನೆ ಮಾಡಿದರೆ ಅದನ್ನು ಕಂಡು ತನ್ನ ಇಡೀ ಕುಟುಂಬ ಸಂತಸಪಡುತ್ತಿತ್ತು. ಹೀಗಾಗಿ ಜೀವನ ಸುಖಮಯವಾಗಿರುತ್ತಿತ್ತು, ಸಾಮಾನ್ಯವಾಗಿ ಅಂತಹ ಕಡೆಗಳಲ್ಲಿ ಯಾತನೆ ಕಡಿಮೆ ಇರುತ್ತಿತ್ತು. ಮನೆಯ ಹಿರಿಯರು ಹೇಳಿದಂತೆ ನಡೆದುಕೊಂಡರೆ ಸಾಕು ಎಂಬ ಮನಸ್ಥಿತಿ ಇರುತ್ತಿತ್ತು.

ಆದರೆ ಇಂದು ಅಂತಹ ಮನೆಗಳು ಅಪರೂಪವಾಗುತ್ತಿವೆ. ಇದ್ದರೂ ಅವು ಗ್ರಾಮೀಣ ಭಾಗದಲ್ಲಿ ಮಾತ್ರ ಎಂಬಂತಾಗಿದೆ. ಅಂತಹ ಕುಟುಂಬಗಳಲ್ಲಿ ಹಿಂದಿನಂತೆ ದೊಡ್ಡ ಜನಸಂಖ್ಯೆ ಕಾಣುತ್ತಿಲ್ಲ. ಓದು, ಉದ್ಯೋಗ ಇತ್ಯಾದಿ ಕಾರಣಗಳ ಜೊತೆಗೆ ಹೊಸದಾಗಿ ಮದುವೆಯಾಗಿ ಬರುವ ಸೊಸೆಯರು ಪ್ರತ್ಯೇಕವಾಗಿ ಬದುಕುವ ಒತ್ತಾಸೆಗೆ ಮಾರುಹೋಗಿ ಮನೆಗಳು ಒಡೆಯುತ್ತಿವೆ. ಆದರೆ ಹಿಂದಿನ ಅಂತಹ ಕುಟುಂಬಗಳನ್ನು ಕಂಡವರಿಗೆ, ಕೇಳಿದವರಿಗೆ ಹಾಗೆ ಒಟ್ಟಾಗಿದ್ದರೆ ಚೆನ್ನಾಗಿರುತ್ತದೆ ಎನ್ನಿಸುತ್ತದೆ.

ಈಗ ಪರಿಸ್ಥಿತಿ ಹಾಗಿಲ್ಲ. ನಾವು ಸಣ್ಣ ಕುಟುಂಬ ವ್ಯವಸ್ಥೆಗೆ ಹೊಂದಿಕೊಂಡಿದ್ದೇವೆ. ಈ ಹಿಂದಿನ ಘೋಷಣೆ 'ಒಂದು ಎರಡು ಬೇಕು, ಮೂರು ಮಕ್ಕಳು ಸಾಕು' ಎಂಬ ಕಾಲದಿಂದ 'ನಾವಿಬ್ಬರು, ನಮಗಿಬ್ಬರು' ಎಂಬ ಹಂತವನ್ನು ದಾಟಿ, 'ಗಂಡೋ ಹೆಣ್ಣೋ, ಒಂದೇ ಮಗು ಸಾಕು' ಎಂಬ ಸ್ಥಿತಿಗೆ ಬಂದು ತಲುಪಿ ನಮ್ಮದು ಈಗ ಮೈಕ್ರೋ ಸಂಸಾರಗಳಾಗುತ್ತಿದೆ. ಇಂತಹ ಚಿಕ್ಕ ಕುಟುಂಬಗಳೂ 'ಎಲ್ಲ ಇದ್ದರೂ ಏನೂ ಇಲ್ಲ' ಎಂಬಂತೆ ಯಾಂತ್ರಿಕ ಜೀವನಕ್ಕೆ ಹೊಂದಿಕೊಂಡುಬಿಡುತ್ತಿವೆ. ಕೈತುಂಬಾ ದುಡ್ಡಿದ್ದರೂ ನೆಮ್ಮದಿ ಇಲ್ಲ. ಜೊತೆಗೆ ಮಕ್ಕಳನ್ನೂ ಯಾರೊಟ್ಟಿಗೆ ಹೋಗಲು ಬಿಡದೆ ಅವರು ಯಾರನ್ನೂ ಇಷ್ಟಪಡದಂತಹ ಸ್ಥಿತಿ ಬಂದಿದೆ. ಈ ಹಿಂದೆ ಬೇಸಿಗೆ ರಜೆ ಬಂತೆಂದರೆ ಅಜ್ಜಿಯ ಮನೆಗೆ ಹೋಗಿ ಸಂಭ್ರಮಿಸುತ್ತಿದ್ದ ಮಕ್ಕಳು ಅಂತಹ ಸ್ಥಿತಿಯಿಂದ ಹೊರಬಂದು ಬೇಸಿಗೆ ರಜೆಯಲ್ಲಿ 'ಸಮ್ಮರ್ ಕ್ಯಾಂಪ್' ನೆಪದಲ್ಲಿ ಮತ್ತೆ ಶಾಲಾ ವಾತಾವರಣದಲ್ಲೇ ಮುಂದುವರೆಯುತ್ತವೆ. ಅದು ಮುಗಿಯುತ್ತಿದ್ದಂತೆ ಮತ್ತೆ ಶಾಲೆ. ಅವರಿಗೆ ಅಜ್ಜ–ಅಜ್ಜಿಯ ಪ್ರೀತಿ ಇರಲಿ, ತಂದೆ–ತಾಯಿಯ ಪ್ರೀತಿಯೂ ಸಿಗುವುದಿಲ್ಲ. ಹಣದ ಆಸೆಗೆ ಬಿದ್ದು ಇಲ್ಲವೇ ಅನಿವಾರ್ಯವಾಗಿ (ಅದಕ್ಕೆ ಅನಿವಾರ್ಯ ಎಂಬ ಸಮರ್ಥನೆ ಬೇರೆ) ತಂದೆತಾಯಿಯರು ಕೆಲಸಕ್ಕೆ ಹೋಗುವಾಗ ಮಕ್ಕಳನ್ನು ಪ್ರೀತಿಸಲು ಅವರಿಗೆ ಸಮಯವಿಲ್ಲ. ಮಕ್ಕಳು ತಮ್ಮ ಭಾವನೆಗಳನ್ನು ಯಾರೊಂದಿಗೂ ಹಂಚಿಕೊಳ್ಳಲಾಗದೆ ಏಕಾಂಗಿಯಾಗುತ್ತಿದ್ದಾರೆ. ಈ ಮನೋಭಾವದಿಂದಾಗಿ ಅವರು ನೆಂಟರ ಮನೆಗೂ ಹೋಗುವುದಿಲ್ಲ, ನೆಂಟರೂ ಇವರ ಮನೆಗೆ ಬರುವುದಿಲ್ಲ. ಇವರಿಗೆ ನೆಂಟರ ಪರಿಚಯವೂ ಇರುವುದಿಲ್ಲ. ಇಂತಹ ಕುಟುಂಬಗಳಲ್ಲಿ ಸುಖ–ಸಂತೋಷ ಎಂಬ ಪದಗಳಿಗೆ ಅರ್ಥವೇ ಇಲ್ಲ. ಈ ಹಿಂದೆ ಮನೆಗೆ ನೆಂಟರು ಬಂದರೆ ಸಡಗರ, ಹಾಗೆಯೇ ನೆಂಟರ ಮನೆಗೆ ಹೋಗುವುದಕ್ಕೂ ಸಡಗರವಿರುತ್ತಿತ್ತು. ಈಗಿನ ಮನೆಗಳಲ್ಲಿ ಆರೋಗ್ಯ, ನೆಮ್ಮದಿ ಬಯಸುವುದು ಮರೀಚಿಕೆ ಎನ್ನಿಸುತ್ತದೆ.

ನಾವು ಎಲ್ಲರೊಡನೆ ಬಾಳಬೇಕು, ನಮಗೆ ಸಂತೋಷ ಸಿಗುವುದು ಸಂಬಂಧಗಳಿಂದ. ಅದಕ್ಕೆ ಹೇಳುವುದು 'ಸಂತೋಷಕ್ಕೆ ಸಂಬಂಧ' ಎಂದು. ನಾವು ನಾಲ್ಕಾರು ಜನರ ನಡುವೆ ಇದ್ದಾಗಲೇ ನೆಮ್ಮದಿಯಾಗಿರಲು ಸಾಧ್ಯ. ಎಲ್ಲಿ ನೆಮ್ಮದಿ ಇದೆಯೋ ಅಲ್ಲಿ ಆರೋಗ್ಯವೂ ಇರುತ್ತದೆ. ಆದರೆ ಇಂದು ನಾನು, ನನ್ನ ಕುಟುಂಬ ಎಂಬ ಅಹಮಿಕೆಯಿಂದ ಜೀವನವನ್ನು ನೀರಸಗೊಳಿಸಿಕೊಳ್ಳುತ್ತಿದ್ದೇವೆ. ಈ ಅಹಮಿಕೆ ನಮ್ಮನ್ನು ಸುಳ್ಳುಗಾರರನ್ನಾಗಿ ಮಾಡುತ್ತಿದೆ. ನಾನು ನೆಮ್ಮದಿಯಾಗಿ ಚೆನ್ನಾಗಿದ್ದೇನೆ ಎಂದು ಹೇಳಿಕೊಳ್ಳುವುದೇ ಸುಳ್ಳು ಎಂಬಂತೆ ಕಂಡುಬರುತ್ತದೆ. ಯಾವಾಗ ಮನುಷ್ಯ ತನಗೆ ತಾನೇ ಸುಳ್ಳು ಹೇಳಿಕೊಳ್ಳುತ್ತಾನೆಯೋ ಅಂತಹವನು ಸತ್ಯವನ್ನು ಕಂಡುಕೊಳ್ಳಲಾಗದ ಸ್ಥಿತಿಗೆ ತಲುಪುತ್ತಾನೆ. ಅದು ತನ್ನ ಬಗೆಗೆ ಹಾಗೂ ಇತರರ ಬಗೆಯೂ ಸತ್ಯದ ವಲಯದಿಂದ ಆಚೆ ಹೋಗುವಂತೆ ಮಾಡಿಬಿಡುತ್ತದೆ. ಹೀಗಾದಾಗ ಅವನಿಗೆ ಸಿಗುವ ಗೌರವ ಕಡಿಮೆಯಾಗುತ್ತದೆ ಹಾಗೂ ಅವನು ಇತರರ ಬಗೆಗೆ ತೋರುವ ಗೌರವವೂ ಕಡಿಮೆಯಾಗುತ್ತದೆ. ಇಂತಹವರು ಸಂತೋಷಗಳಿಂದ ವಿಮುಖರಾಗಿಬಿಡುತ್ತಾರೆ. ಅವರ ಜೀವನ ಪಶುಗಳ ಜೀವನದಂತೆ ಆಗಿಬಿಡುತ್ತದೆ.

ಇದಕ್ಕೆ ಪರಿಹಾರ ಎಂದರೆ ನಾವು ಇತರರೊಡನೆ ಬೆರೆಯುವುದು ಹಾಗೂ ಇತರರನ್ನು ಪ್ರೀತಿಸುವುದು, ಗೌರವಿಸುವುದು. ನಮಗೆ ಯಾವುದೇ ರೀತಿಯ ಸಂತೋಷ ಸಿಗುವುದು ನಮ್ಮನ್ನು ಇಷ್ಟಪಡುವವರಿಂದ ಮಾತ್ರ ಎಂಬುದನ್ನು ಮೊದಲು ಅರಿಯಬೇಕು. ನಾನು ಎಂತಹುದೇ ಸಾಧನೆ ಮಾಡಿದರೂ ಅದನ್ನು ಗುರುತಿಸಿ ಸಂತೋಷಪಡುವವರು ಇಲ್ಲದಾದಾಗ ಸಾಧನೆಗೆ ಸಾರ್ಥಕತೆ ಸಿಗುವುದಿಲ್ಲ. ಜೀವನ ನಶ್ವರ ಎಂಬುದನ್ನು ಯಾವಾಗಲೂ ನೆನೆಸಿಕೊಂಡು ಇತರರೊಂದಿಗೆ ಸಂತೋಷ ಪಡುವಂತಹ ಮನೋಭಾವ ಬೆಳೆಸಿಕೊಳ್ಳಬೇಕು. ಸಂತೋಷ ಸಿಗುವುದು ಸಂತೋಷವನ್ನು ಹಂಚಿದಾಗ ಮಾತ್ರ. ಅದು ದ್ವಿಮುಖ ಸಂಚಾರ ಇದ್ದ ಹಾಗೆ. ಒಂದು ಕಡೆ ಬರಬೇಕು, ಮತ್ತೊಂದು ಕಡೆ ಹೋಗಬೇಕು. ಹಾಗಿರುವುದನ್ನು ಸುಗಮ ಸಂಚಾರ ಎನ್ನಲಾಗುತ್ತದೆ. ಜೀವನವೂ ಹಾಗೆಯೇ. ಒಂದು ರೀತಿ ಕೊಟ್ಟು ತೆಗೆದುಕೊಳ್ಳುವ ವ್ಯಾಪಾರ.

ಇದಕ್ಕಾಗಿ ನಾವು ಮಾನಸಿಕವಾಗಿ ಸಿದ್ಧರಾಗಬೇಕು. ತನ್ನ ಕುಟುಂಬದ ಜೊತೆಗೆ ಅಕ್ಕಪಕ್ಕದವರೊಡನೆ ಉತ್ತಮ ಸಂಬಂಧ, ತನ್ನ ನೆಂಟರೊಡನೆ ಸಂಬಂಧ ತನ್ನ ಕಚೇರಿಯ ಸಹೋದ್ಯೋಗಿಗಳೊಡನೆ ಸಂಬಂಧ ಚೆನ್ನಾಗಿದ್ದವನು ಸಂತೋಷವಾಗೇ ಇರುತ್ತಾರೆ. ಹೆಚ್ಚು ಸಂತೋಷವಾಗಿದ್ದರೆ ಆಯಸ್ಸು ವೃದ್ಧಿಯಾಗುತ್ತದೆ. ನಮ್ಮಲ್ಲಿ ಅನೇಕ ಸಾವುಗಳ ಕಾರಣ ಏಕಾಂಗಿತನ ಹಾಗೂ ಅಹಮಿಕೆ. 'ನೀ ನನಗಿದ್ದರೆ ನಾ ನಿನಗೆ' ಎಂಬ ಸೂತ್ರವನ್ನು ಯಾವಾಗಲೂ ನಾವು ನೆನಪಿಸಿಕೊಳ್ಳುತ್ತಿರಬೇಕು. ಸಂಬಂಧಗಳನ್ನು ವೃದ್ಧಿಗೊಳಿಸಿಕೊಳ್ಳಬೇಕು. ಸಂಬಂಧ ಎಂದಾಗ ಕೇವಲ ಮನೆಯವರೊಡನೆ ಮಾತ್ರವಲ್ಲ, ನಮ್ಮೊಡನೆ ಸಂಪರ್ಕಕ್ಕೆ ಬರುವ ಎಲ್ಲರೊಡನೆಯೂ ಉತ್ತಮ ಸಂಬಂಧ ಸಾಧ್ಯವಾಗುತ್ತದೆ. ಮೊದಲನೆಯದಾಗಿ ನಮ್ಮ ನೆಂಟರು ಹಾಗೂ ಇಷ್ಟದವರೊಡನೆ ಸಂಬಂಧ ಚೆನ್ನಾಗಿರಬೇಕು. ನಮಗಿಂತ ಕಡಿಮೆ ಹಣಕಾಸು ಸ್ಥಿತಿ ಹೊಂದಿದವರು ನಮ್ಮಿಂದ ಹಣದ ಅಪೇಕ್ಷೆ ಪಡುತ್ತಾರೆ ಎಂಬ ಮನೋಭಾವವನ್ನು ಮೊದಲು ಬಿಡಬೇಕು. ಹಾಗೆ ನೋಡಿದರೆ ಸ್ವಾಭಿಮಾನ ಬಡತನದಲ್ಲಿಯೇ ಜಾಸ್ತಿ. ಸುಮ್ಮನೆ ಯಾರಿಗಾದರೂ ದುಡ್ಡು ಕೊಡಲು ಹೋದರೆ ಅವರು ಸ್ವೀಕರಿಸುವುದಿಲ್ಲ. ಬದಲಾಗಿ ನಾನು ಏನು ಮಾಡಿದೆ ಎಂದು ನನಗೆ ಹಣ ಕೊಡುತ್ತಿದ್ದೀರಿ? ಎಂದೇ ಕೇಳುತ್ತಾರೆ. ಹಾಗಾಗಿ ಆರ್ಥಿಕವಾಗಿ ನಮಗಿಂತ ದುರ್ಬಲರಾದವರನ್ನು ಮಾತನಾಡಿಸಿದರೆ ಅವರು ನಮ್ಮಿಂದ ಹಣವನ್ನು ಅಪೇಕ್ಷಿಸುತ್ತಾರೆ ಎಂಬ ಮನಸ್ಥಿತಿಯಿಂದ ಹೊರಬರಬೇಕು. ನಮ್ಮ ನೆಮ್ಮದಿಗೆ ಎಂದೂ ಹಣದ ಅಳತೆ ಇರಬಾರದು. ನಾವು ದಿನಸಿ ಖರೀದಿಸುವ ಅಂಗಡಿಯವರಿರಬಹುದು, ನಮ್ಮ ಮನೆಗೆ ಕೆಲಸಕ್ಕೆ ಬರುವವರಿರಬಹುದು, ನಮ್ಮ ಮನೆಗೆ ಹಾಲು ನೀಡುವವರಿರಬಹುದು, ಪತ್ರಿಕೆ ಹಾಕುವವರಿರಬಹುದು, ಹೂವು ಕೊಡುವವರಿರ ಬಹುದು ಇವರೆಲ್ಲಾ ನಾವು ಅವರೊಡನೆ ಉತ್ತಮ ಸಂಬಂಧ ಇರಿಸಿಕೊಂಡಾಗ ನಮಗಾಗಿ ಏನು ಮಾಡಲೂ ಸಿದ್ಧರಾಗುತ್ತಾರೆ. ಅವರೇನೂ ನಮ್ಮ ಹಂಗಿನಲ್ಲಿ ಇರುವುದಿಲ್ಲ. ನಾವು ಹಣ ಕೊಡುತ್ತೇವೆ, ಅವರು ವಸ್ತು ಕೊಡುತ್ತಾರೆ. ನಾವು ಹಣ ಕೊಡುತ್ತೇವೆ, ಅವರು ಅದಕ್ಕೆ ತಕ್ಕ ಕೆಲಸ ಮಾಡುತ್ತಾರೆ. ಇದರಲ್ಲಿ ನಮ್ಮ ಹೆಚ್ಚುಗಾರಿಕೆ ಏನೂ ಇರುವು ದಿಲ್ಲ. ಬದಲಾಗಿ ಅವರು ನನಗೆ ಸಹಾಯ ಮಾಡುತ್ತಿದ್ದಾರೆ ಎಂಬುದನ್ನು ಮೊದಲು ಮನಸ್ಸಿನಲ್ಲಿ ಮೂಡಿಸಿಕೊಳ್ಳಬೇಕು. ಇಲ್ಲಿ ಸಹಕಾರ ತತ್ವ ಕಾಣಬೇಕು. ಇಂತಹವರು ನಮ್ಮಿಂದ ಹೆಚ್ಚಿನ ಹಣವನ್ನು ಖಂಡಿತಾ ನಿರೀಕ್ಷಿಸುವುದಿಲ್ಲ. ಬದಲಾಗಿ ಅವರಿಗೆ ಕೊಡಬೇಕಾದ ಹಣಕ್ಕಿಂತ ನಾವು ಹೆಚ್ಚಾಗಿ ಕೊಟ್ಟರೆ ಅದನ್ನು ನಮಗೇ ಹಿಂದಿರುಗಿಸುತ್ತಾರೆ.

ನಮ್ಮ ಜೀವನ ಚೆನ್ನಾಗಿರಬೇಕಾದರೆ ನಾವು ನಮ್ಮ ಸಂಬಂಧಗಳನ್ನು ವೃದ್ಧಿಸಿಕೊಳ್ಳಬೇಕು. ಅದು ಖುಷಿ ನೀಡುತ್ತದೆ. ಎಲ್ಲಿ ಸಂತೋಷ ಇರುತ್ತದೋ, ಅಲ್ಲಿ ನೆಮ್ಮದಿ ಇರುತ್ತದೆ, ಎಲ್ಲಿ ನೆಮ್ಮದಿ ಇರುತ್ತದೋ ಅಲ್ಲಿ ಆರೋಗ್ಯ ಇರುತ್ತದೆ, ಎಲ್ಲಿ ಆರೋಗ್ಯ ಇರುತ್ತದೋ ಅಲ್ಲಿ ಆಯಸ್ಸು ವೃದ್ಧಿಯಾಗುತ್ತದೆ. ನಾವು ಹೆಚ್ಚು ದಿನ ನೆಮ್ಮದಿಯಾಗಿ ಬದುಕಬೇಕು ಎಂದರೆ ನಮ್ಮ ಜೀವನವನ್ನು ಈ ರೀತಿ ವಿಸ್ತರಿಸಿಕೊಳ್ಳಬೇಕು. ಇದಕ್ಕೆ ಹಣ ಖರ್ಚಾಗುವುದಿಲ್ಲ, ಬದಲಾಗಿ ನಮ್ಮ ನಗುಮೊಗ ಹಾಗೂ ಇತರರನ್ನು ಸೌಹಾರ್ದವಾಗಿ ಮಾತನಾಡಿಸುವ ಸ್ವಭಾವ ಸಾಕಾಗುತ್ತದೆ. ನಮ್ಮ ಜೀವನವನ್ನು ಈ ರೀತಿ ವಿಸ್ತರಿಸಿಕೊಳ್ಳಬಹುದು. ■



> "ನಾವು ಇತರರೊಡನೆ ಬೆರೆಯುವುದು ಹಾಗೂ ಇತರರನ್ನು ಪ್ರೀತಿಸುವುದು, ಗೌರವಿಸುವುದು, ನಮಗೆ ಯಾವುದೇ ರೀತಿಯ ಸಂತೋಷ ಸಿಗುವುದು ನಮ್ಮನ್ನು ಇಷ್ಟಪಡುವವರಿಂದ ಮಾತ್ರ ಎಂಬುದನ್ನು ಮೊದಲು ಅರಿಯಬೇಕು. ನಾನು ಎಂತಹುದೇ ಸಾಧನೆ ಮಾಡಿದರೂ ಅದನ್ನು ಗುರುತಿಸಿ ಸಂತೋಷಪಡುವವರು ಇಲ್ಲದಾದಾಗ ಸಾಧನೆಗೆ ಸಾರ್ಥಕತೆ ಸಿಗುವುದಿಲ್ಲ. ಜೀವನ ನಶ್ವರ ಎಂಬುದನ್ನು ಯಾವಾಗಲೂ ನೆನಸಿಕೊಂಡು ಇತರರೊಂದಿಗೆ ಸಂತೋಷ ಪಡುವಂತಹ ಮನೋಭಾವ ಬೆಳೆಸಿಕೊಳ್ಳಬೇಕು. ಸಂತೋಷ ಸಿಗುವುದು ಸಂತೋಷವನ್ನು ಹಂಚಿದಾಗ ಮಾತ್ರ

ಮನಸೂರೆಗೊಳ್ಳುವ
ಜಲವರ್ಣ ಕಲಾಕೃತಿ!



ಅನೇಕ ಕಲಾವಿದರು ನಿಸರ್ಗದ ಮಡಿಲಿನಲ್ಲಿ ಇದ್ದುಕೊಂಡು, ತಮ್ಮ ಕಲಾ ಪ್ರೌಢಿಮೆಯನ್ನು ಮೆರೆಯುತ್ತಾರೆ. ನಿಸರ್ಗವನ್ನು ಮೀರಿಸುವ ಕಲಾಕೃತಿಗಳು ಅವರ ಕುಂಚದಿಂದ ನಮ್ಮೆದುರು ದರ್ಶನವಾಗುತ್ತವೆ! ಆದರೆ ಅಂತಹ ಕಲಾಕೃತಿಗಳು ಮೈದಳೆಯಲು ಒಂದು ದಿನ ಸಾಲದು. ಅವರ ನಿರಂತರ ಪ್ರಯತ್ನದಿಂದಾಗಿ ಸೃಷ್ಟಿಯ ಸೊಬಗಿನ ಚಿತ್ತಾರ, ರಮಣೀಯ ದೃಶ್ಯಗಳು ನೋಡುಗರ ಕಣ್ಮನ ಸೆಳೆಯುತ್ತವೆ!

ಮೈಸೂರಿನ ಖ್ಯಾತ ನಿಸರ್ಗ ಚಿತ್ರ ಕಲಾವಿದರಾದ ಹಾ.ಪು.ರಂಗಸ್ವಾಮಿ ಅವರು ಈ ಕ್ಷಣದಲ್ಲಿ ನೆನಪಾಗುತ್ತಾರೆ. ಮೈಸೂರಿನ ವಿವೇಕಾನಂದ ಸರ್ಕಲ್ ಬಳಿಯ 'ಭರಣಿ ಆರ್ಟ್ ಗ್ಯಾಲರಿ'ಯಲ್ಲಿ ಉಚಿತವಾಗಿ (ಏಕೈಕ ಬಾಡಿಗೆ ರಹಿತ ಕಲಾ ಗ್ಯಾಲರಿ ಇದಾಗಿದೆ) 'ನಿಸರ್ಗ ಲಾಲಿತ್ಯ' ಆಕರ್ಷಕ ಶೀರ್ಷಿಕೆಯ ದೃಶ್ಯಕಲಾ ಪ್ರದರ್ಶನ ಏರ್ಪಡಿಸಿತ್ತು. ಖ್ಯಾತ ನಿಸರ್ಗ ಚಿತ್ರ ಕಲಾವಿದ ಹಾ.ಪು.ರಂಗಸ್ವಾಮಿ ಅವರ ಜಲವರ್ಣ ಕಲಾಕೃತಿಗಳ ಪ್ರದರ್ಶನ ನಿಜಕ್ಕೂ ಹೃದಯಸ್ಪರ್ಶಿ.

ಜಲವರ್ಣ ಚಿತ್ರ ಮೂಡಿಸುವುದರಲ್ಲಿ ಪ್ರಸಿದ್ಧಿ ಪಡೆದಿರುವ ಇವರು ತಮ್ಮ ಸುತ್ತಮುತ್ತ ಕಾಣುವ ಸೃಷ್ಟಿಯ ಸೊಬಗು, ವೃತ್ತ, ಪ್ರತಿಮೆ, ರಸ್ತೆ, ವ್ಯಕ್ತಿಗಳು ಎಲ್ಲವನ್ನು ಕಣ್ಮನ ಸೆಳೆಯುವಂತೆ ಚಿತ್ರಿಸುತ್ತಾರೆ. ಆ ಚಿತ್ರಗಳನ್ನು ನಾವು ಸೂಕ್ಷ್ಮವಾಗಿ ಗಮನಿಸುತ್ತಾ ಹೋದರೆ ಒಂದು ರೀತಿಯಲ್ಲಿ ನೈಜವಾಗಿ, ಜೀವಂತ ಅನುಭವ ಸಾರುತ್ತವೆ. ನಿಜವಾಗಿಯೂ





ನಾವು ಕೆ.ಆರ್.ಸರ್ಕಲ್‌ನಲ್ಲಿ ಇದ್ದೇವೆಯೋ ಅಥವಾ ನಿಸರ್ಗದ ಮಡಿಲಿನಲ್ಲಿ ಹೋಗಿ ಆನೆಗಳ, ಸುಂದರ ಪರಿಸರವನ್ನು ವೀಕ್ಷಣೆ ಮಾಡುತ್ತಿದ್ದೇವೆಯೋ ಎನ್ನುವಂತೆ ನಮ್ಮ ಮನಸ್ಸಿನಲ್ಲಿ ಭಾವನೆ ಮೂಡದೆ ಇರದು.

ಮನುಷ್ಯ ಮೊದಲು ನಿಸರ್ಗವನ್ನು ಪ್ರೀತಿಸಬೇಕು. ಅಲ್ಲಿನ ಸೌಂದರ್ಯವನ್ನು ಸವಿಯಬೇಕು. ನಿಸರ್ಗ ನಮಗೆ ಎಲ್ಲವನ್ನೂ ನೀಡಿದೆ. ಅದು ಗಿಡಗಳ ಮೂಲಕ, ಜೀವ ವೈವಿಧ್ಯತೆಯ ಮೂಲಕ ನಮಗೆಲ್ಲ ಒಳ್ಳೆಯ ವಾತಾವರಣ, ಗಾಳಿ, ನೀರು, ಬೆಳಕು, ಎಲ್ಲವನ್ನು ನೀಡಿದೆ. ಆದರೆ ಮಾನವ ತನ್ನ ದುರಾಸೆಯಿಂದ ನಾಗರಿಕತೆಯ ನಾಗಾಲೋಟದಲ್ಲಿ, ಆಧುನಿಕತೆ ನೆಪದಲ್ಲಿ ಈ ಪರಿಸರವನ್ನು ಕಡಿದು ಅನೇಕ ಸಮಸ್ಯೆಗಳ ಮೇಲೆ ಸಮಸ್ಯೆಯನ್ನು ತಂದುಕೊಳ್ಳುತ್ತಿದ್ದಾನೆ.

ರಂಗಸ್ವಾಮಿಯವರ ಇಂತಹ ಕಲಾ ಪ್ರದರ್ಶನ ನಿಜಕ್ಕೂ ಸ್ಫೂರ್ತಿಯ ಸೆಲೆಯ ಜೊತೆಗೆ ಪರಿಣಾಮಕಾರಿಯಾಗಿ ಜಾಗೃತಿ ಮೂಡಿಸುತ್ತದೆ. ಎಲ್ಲಾ ಪ್ರಸಿದ್ಧ ಸ್ಥಳಗಳಿಗೆ ಭೇಟಿಕೊಟ್ಟು, ಅಲ್ಲೇ ಕುಳಿತು ನಿಸರ್ಗ ಜೊತೆಗೆ ಒಂದಾಗಿ ಜಲವರ್ಣ ಚಿತ್ರಗಳನ್ನು ರಚಿಸುವುದೇ ಇವರ ನಿತ್ಯ ಕಾಯಕವಾಗಿದೆ. 1996ರಿಂದ ಸತತವಾಗಿ ಇವರು ದಸರಾ ಕಲಾ ಪ್ರದರ್ಶನದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಮೈಸೂರು ದಸರಾ ಕಲಾ ಪ್ರದರ್ಶನದಲ್ಲಿ ಪ್ರಥಮ ಬಹುಮಾನ ಪಡೆದಿರುವ ಇವರು ಪ್ರಥಮ ಏಕವ್ಯಕ್ತಿ ಕಲಾ ಪ್ರದರ್ಶನವನ್ನು ಮೈಸೂರಿನ ವೆಲ್ಲಿಂಗ್ಟನ್ ಆರ್ಟ್ ಗ್ಯಾಲರಿಯಲ್ಲಿ ನಡೆಸಿದ್ದಾರೆ. ಈ ಹಿಂದೆಯೂ ಕೂಡ ಭರಣಿ ಆರ್ಟ್ ಗ್ಯಾಲರಿಯಲ್ಲಿ ಕಲಾ ಪ್ರದರ್ಶನ ನಡೆದಿದೆ.


ಅದೇ ರೀತಿ ನಟನ ರಂಗಮಂದಿರದಲ್ಲಿ, ಕಲಾನಿಕೇತನ ಆರ್ಟ್ ಗ್ಯಾಲರಿಯಲ್ಲಿ, ಮೈಸೂರು ಸೇರಿದಂತೆ ರಾಜ್ಯದ ಅನೇಕ ಸ್ಥಳಗಳಲ್ಲೂ ಪ್ರದರ್ಶನಗೊಂಡಿವೆ. 22020ರಿಂದ ಇವರ ನಿಸರ್ಗ ಜಲವರ್ಣ ಕಲಾಕೃತಿಗಳನ್ನು ದಕ್ಷಿಣ ರೈಲ್ವೆಯವರು ಮೈಸೂರು ರೈಲು ನಿಲ್ದಾಣದ ಒಳಗಡೆ ಪ್ರದರ್ಶಿಸಿರುತ್ತಾರೆ.

ಇವರು ಹೆಚ್ಚಾಗಿ ಜಲವರ್ಣ ಚಿತ್ರಗಳಿಗೆ ತಮ್ಮ ಕುಂಚವನ್ನು ಮೀಸಲಿಟ್ಟಿದ್ದಾರೆ. ಈ ಚಿತ್ರ ಬರೆಯುವವರು ಅತ್ಯಂತ ಕಡಿಮೆ ಜನ. ಜೊತೆಗೆ ಇಲ್ಲಿ ಬಣ್ಣಗಳ ನಿಯಂತ್ರಣ ಮುಖ್ಯವಾಗುತ್ತದೆ. ವಿಶೇಷವಾಗಿ ಏಕಾಗ್ರತೆ ಬೇಕಾಗುತ್ತದೆ. ಜೊತೆಗೆ ತಾಳ್ಮೆ ಕೂಡ ಬೇಕು. ಅಕ್ರಾಲಿಕ್ ಮಾಧ್ಯಮದಲ್ಲಿ ನಾವು ಚಿತ್ರಗಳನ್ನು ಬರೆಯುವಾಗ ಬೇರೆ ಬೇರೆ ಬಣ್ಣಗಳನ್ನು ಬಳಸಿ ತಿದ್ದುಪಡಿ ಮಾಡಬಹುದು. ಆದರೆ ಜಲವರ್ಣದ ಚಿತ್ರಗಳನ್ನು ಬರೆಯುವಾಗ ನಾವು ಮೊದಲು ಯಾವ ಬಣ್ಣ ಹಾಕಬೇಕು ಎಂದು ನಿರ್ಧಾರ ಮಾಡಲೇಬೇಕು. ನಂತರ ಬಣ್ಣ ಬದಲಿಸಿದರೆ ಆ ಜಲವರ್ಣ ಚಿತ್ರ ಅಂದವಾಗಿ ಮೂಡುವುದಿಲ್ಲ. ಕೇವಲ ಜಲವರ್ಣ ಚಿತ್ರಗಳಲ್ಲದೆ ಭಾವಚಿತ್ರಗಳು ಮೂಡಿವೆ. ಇವುಗಳಲ್ಲಿ ಹಲವು ಸಾಹಿತಿಗಳು, ಕಲಾ



ವಿದರು, ವ್ಯಕ್ತಿಗಳು ಸೇರಿದ್ದಾರೆ. ಇವರ ಸಾಧನೆಗೆ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಸೇರಿದಂತೆ ಅನೇಕ ಸಂಘ–ಸಂಸ್ಥೆಗಳು ಸನ್ಮಾನಿಸಿವೆ ಮುಂದಿನ ವಿಶೇಷ ಯೋಜನೆ ಎಂದರೆ ಏಕಕಾಲದಲ್ಲಿ 1101 ಕಲಾಚಿತ್ರಗಳನ್ನು ರಚಿಸಿ, ಗಿನ್ನಿಸ್ ದಾಖಲೆ ಮಾಡುವುದು! ಇದಕ್ಕೆ ಸ್ಫೂರ್ತಿ ಎಂದರೆ ಮೈಸೂರಿನ ಪ್ರಸಿದ್ಧ ಚಾಮುಂಡಿಬೆಟ್ಟದ ಮೆಟ್ಟಿಲುಗಳು!.

ಅವರ ಕಲಾ ಪ್ರದರ್ಶನದಲ್ಲಿ...... ಅರಸರ ಪ್ರತಿಮೆಗಳು, ನದಿ, ತೊರೆ, ಬೆಟ್ಟ, ಗುಡ್ಡ, ಪ್ರಾಣಿ, ಪಕ್ಷಿಗಳು, ಅಲ್ಲಿನ ನಿಸರ್ಗ ನಿರ್ಮಿತ ಸಹಜ ಚಿತ್ರಗಳು, ಕೋಟೆ–ಕೊತ್ತಲಗಳ ಚಿತ್ರಪಟಗಳು, ಗ್ರಾಮೀಣ ಭಾಗದ ಜನರ ಜೀವನ ಕ್ರಮ ಅಡಗಿವೆ. **ಅವರ ಸಂಪರ್ಕ ಸಂಖ್ಯೆ: 9110699487**.



■ **ಕಾಳಿಹುಂಡಿ ಶಿವಕುಮಾರ್, ಲೇಖಕ, ವಿಮರ್ಶಕ, ಮೈಸೂರು.**

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಶಿಕ್ಷಕರು, ಪದವೀಧರರ ಕಲ್ಯಾಣಕ್ಕಾಗಿ ಕಾಂಗ್ರೆಸ್ ಗೆಲ್ಲಿಸಿ

ಕೆಪಿಸಿಸಿ ಶಿಕ್ಷಕರ ಘಟಕದ ಅಧ್ಯಕ್ಷ ಮನವಿ

ಮೈಸೂರು, ಮೇ 29(ಜಿಎ)–ರಾಜ್ಯದ ಶಿಕ್ಷಕರು ಹಾಗೂ ಪದವೀಧರರ ಕಲ್ಯಾಣಕ್ಕಾಗಿ ದಕ್ಷಿಣ ಶಿಕ್ಷಕರ ಮತ್ತು ಪದವೀಧರರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳಿಗೆ ಪ್ರಥಮ ಪ್ರಾಶಸ್ತ್ಯದ ಮತ ನೀಡುವಂತೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಶಿಕ್ಷಕರ ಘಟಕದ ಅಧ್ಯಕ್ಷ ಬಸವರಾಜ ಗುರಿಕಾರ ಮನವಿ ಮಾಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಧಾನಪರಿಷತ್‌ನ 6 ಸ್ಥಾನಗಳಿಗೆ ಜೂ.3ರಂದು ಚುನಾವಣೆ ನಡೆಯಲಿದ್ದು, ಕಾಂಗ್ರೆಸ್ ಮೊದಲೆ ಅಭ್ಯರ್ಥಿಗಳ ಘೋಷಿಸಿದ್ದು, ಬಹಳಷ್ಟು ಅನುಕೂಲವಾಗಿದೆ. ರಾಜ್ಯದ ಪದವೀಧರ ಮತದಾರರು, ಶಿಕ್ಷಕರು ಸರ್ಕಾರದ ಉತ್ತಮ ಆಡಳಿತವನ್ನು ಪರಿಗಣಿಸಿ ಅಭ್ಯರ್ಥಿಗಳನ್ನು ಬೆಂಬಲಿಸಿದ್ದಾರೆ. ಕಾಂಗ್ರೆಸ್ ಪಕ್ಷ 6 ಸ್ಥಾನಗಳನ್ನು ಗೆಲ್ಲುವ ಸಂಪೂರ್ಣ ವಿಶ್ವಾಸವಿದೆ ಎಂದರು.

ರಾಜ್ಯ ಸರ್ಕಾರದ 5 ಗ್ಯಾರಂಟಿಗಳಲ್ಲಿ ಪದವೀಧರರಿಗೆ ನೀಡುತ್ತಿರುವ ಯುವ ನಿಧಿಯು ಒಂದಾಗಿದ್ದು, ಪದವೀಧರರಿಗೆ ಆಶಾಕಿರಣವಾಗಿದೆ. ಮತ್ತೊಂದೆಡೆ 11,494 ಸರ್ಕಾರಿ ಶಾಲೆಗಳಿಗೆ 35 ಸಾವಿರ ಅತಿಥಿ ಶಿಕ್ಷಕರನ್ನು ನೇಮಕ ಮಾಡಲಾಗಿದೆ. ಸರ್ಕಾರಿ ಶಾಲೆಗಳ ದುರಸ್ತಿಗೆ 70 ಕೋಟಿ ರೂ ಅನುದಾನ ನೀಡಲಾಗಿದೆ. 280 ಕೋಟಿ ವೆಚ್ಚದಲ್ಲಿ 58 ಲಕ್ಷ ವಿದ್ಯಾರ್ಥಿಗಳಿಗೆ ಪೌಷ್ಟಿಕ ಆಹಾರ ವಿತರಣೆ ಮಾಡಲಾಗಿದೆ ಎಂದು ತಿಳಿಸಿದರು.

ಎನ್‌ಪಿಎಸ್ ಯೋಜನೆಯಲ್ಲಿದ್ದ 19 ಸಾವಿರ ನೌಕರರನ್ನು ಓಪಿಎಸ್‌ಗೆ ಒಳಪಡಿಸಲಾಗಿದೆ. ಕೋರಿಕೆ ಮೇರೆಗೆ 29 ಸಾವಿರ ಶಿಕ್ಷಕರಿಗೆ ಅವರು ಬಯಸಿದ ಸ್ಥಳಕ್ಕೆ ವರ್ಗಾವಣೆ ಮಾಡಲಾಗಿದೆ. ಎನ್‌ಇಪಿ ಬದಲು ಎಸ್‌ಇಪಿ ಜಾರಿಗೆ ತರಲು ಸಮಿತಿ ರಚಿಸಲಾಗಿದ್ದು, ಮತ್ತಷ್ಟು ಯೋಜನೆಗಳ ಜಾರಿಗಾಗಿ ಶಿಕ್ಷಕರು ಕಾಂಗ್ರೆಸ್ ಅಭ್ಯರ್ಥಿಗಳಿಗೆ ಮತ ನೀಡಬೇಕೆಂದು ಬಸವರಾಜ ಗುರಿಕಾರ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಗುರುಮಲ್ಲಪ್ಪ, ಬಸವಣ್ಣ, ಆರ್.ರಂಗದಾಸಯ್ಯ, ಮೋಹನ್ ಕುಮಾರ್, ಪರಶುರಾಮ, ಮೋಹನ್ ರಾಜ್, ಕೆಂಚಪ್ಪ ಮತ್ತಿತರರಿದ್ದರು.

ಕ್ಷುಲ್ಲಕ ಕಾರಣಕ್ಕೆ ಯುವಕನ ಕೊಲೆ: ವರುಣ ನಾಲೆಯಲ್ಲಿ ದೇಹ ಪತ್ತೆ

- ಮಾವಿನಹಳ್ಳಿ ಯುವಕನ ಅದೇ ಗ್ರಾಮದ ಇಬ್ಬರು ಯುವಕರಿಂದ ಹತ್ಯೆ
- ಗ್ರಾಮಾಂತರ ಠಾಣೆಯ ಪೊಲೀಸರಿಗೆ ಶರಣಾದ ಕೊಲೆ ಆರೋಪಿಗಳು

ಮೈಸೂರು, ಮೇ 29(ಎಂಟಿವೈ)– ಹಳೇ ವೈಷಮ್ಯದಿಂದ ಯುವಕನೊಬ್ಬನನ್ನು ಬರ್ಬರವಾಗಿ ಹತ್ಯೆಗೈದ್ಯು ಶವವನ್ನು ನಾಲೆಗೆಸೆದಿರುವ ಘಟನೆ ಮೈಸೂರು ತಾಲೂಕಿನ ಜಯಪುರ ಹೋಬಳಿಯ ಮಾವಿನಹಳ್ಳಿಯಲ್ಲಿ ನಡೆದಿದೆ.

ಗ್ರಾಮದ ನಿವಾಸಿ ದಿವಂಗತ ಚೋಟಯ್ಯ ಎಂಬುವರ ಮಗ ರಾಘವೇಂದ್ರ(33) ಹತ್ಯೆಗೀಡಾದ ಯುವಕನಾಗಿದ್ದು, ಅದೇ ಗ್ರಾಮದ ಇಬ್ಬರು ಯುವಕರು ಕುಡಿದ ಮತ್ತಿನಲ್ಲಿ ಹತ್ಯೆ ಮಾಡಿ ಶವವನ್ನು ಮೈಸೂರಿನ ಜೆ.ಪಿ.ನಗರದಿಂದ ದಡದಹಳ್ಳಿಗೆ ಹೋಗುವ ಮಾರ್ಗದಲ್ಲಿರುವ ವರುಣ ನಾಲೆಗೆ ಎಸೆದಿದ್ದಾರೆ.

ತಾಯಿ ಪುಟ್ಟಮ್ಮ ಅವರೊಂದಿಗೆ ಮಾವಿನಹಳ್ಳಿಯಲ್ಲಿ ವಾಸವಿದ್ದ ರಾಘವೇಂದ್ರ ಕೂಲಿ ಕೆಲಸ ಮಾಡಿಕೊಂಡಿದ್ದರು. ಕಳೆದ 3–4 ತಿಂಗಳಿಂದ ಮಾವಿನಹಳ್ಳಿ ಗ್ರಾಮದ ಇಬ್ಬರು ಯುವಕರೊಂದಿಗೆ ಕುಡಿಯುವ ವಿಚಾರದಲ್ಲಿ ಗಲಾಟೆ ಮಾಡಿಕೊಂಡಿದ್ದ. ಪೊಲೀಸ್ ಠಾಣೆ ಮೆಟ್ಟಿಲೇರಿದ್ದ ಗಲಾಟೆ ಪ್ರಕರಣ ರಾಜೀ ಮೂಲಕ ಇತ್ಯರ್ಥವಾಗಿತ್ತು. ಆದರೆ, ಅಂದಿನಿಂದ ಒಳಗೊಳಗೆ ದ್ವೇಷ ಕಾರುತ್ತಿದ್ದ ಇಬ್ಬರು ಯುವಕರು, ಕಳೆದ ರಾತ್ರಿ 8 ಗಂಟೆವರೆಗೂ ಮನೆಯಲ್ಲಿಯೇ ಇದ್ದ ರಾಘವೇಂದ್ರನನ್ನು ಪುಸಲಾಯಿಸಿ ಮನೆಯಿಂದ ಹೊರಗೆ ಕರೆದುಕೊಂಡು ಹೋಗಿ ಕೊಲೆ ಮಾಡಿದ್ದಾರೆ. ಅಲ್ಲದೆ, ಶವವನ್ನು ಮೈಸೂರಿನ ಹೊರವಲಯದ ಜೆ.ಪಿ.ನಗರದ ಬಳಿ ವರುಣ ನಾಲೆಗೆ ಎಸೆದಿದ್ದಾರೆ ಎಂದು ಮೃತ ಯುವಕನ ಸಂಬಂಧಿಯೊಬ್ಬರು ದೂರಿದ್ದಾರೆ.

ಠಾಣೆಯಲ್ಲಿ ಶರಣು: ರಾತ್ರಿ ಕೊಲೆ ಮಾಡಿ, ಶವವನ್ನು ನಾಲೆಗೆಸೆದಿದ್ದ ಆರೋಪಿಗಳು ಭಯದಿಂದ ಬುಧವಾರ ಮಧ್ಯಾಹ್ನ ದಕ್ಷಿಣ ಗ್ರಾಮಾಂತರ ಠಾಣೆಗೆ ಬಂದು ತಾವೇ ಕೊಲೆ ಮಾಡಿರುವುದಾಗಿ ಹೇಳಿ ಶರಣಾಗಿದ್ದಾರೆ. ಆರೋಪಿಗಳು ನೀಡಿದ ಸುಳಿವಿನ ಮೇರೆಗೆ ಅವರನ್ನೂ ಕರೆತಂದು ನಾಲೆ ಬಳಿ ಪರಿಶೀಲಿಸಿದ ಪೊಲೀಸರಿಗೆ ರಾಘವೇಂದ್ರನ ದೇಹ ಪತ್ತೆಯಾಗಿದೆ. ಕೂಡಲೇ ರಾಘವೇಂದ್ರನ ಸಂಬಂಧಿಗಳನ್ನು ಸ್ಥಳಕ್ಕೆ ಕರೆಸಿ, ಮಹಜರು ಮಾಡಿ ದೇಹವನ್ನು ನಾಲೆಯಿಂದ ಮೇಲೆತ್ತಿ ಮರಣೋತ್ತರ ಪರೀಕ್ಷೆಗಾಗಿ ಮೈಸೂರು ಮೆಡಿಕಲ್ ಕಾಲೇಜು ಶವಾಗಾರಕ್ಕೆ ಸಾಗಿಸಿದ್ದಾರೆ.

ಈ ಕೊಲೆಯಿಂದ ಮಾವಿನಹಳ್ಳಿ ಗ್ರಾಮದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿದೆ. ದೇಹ ಸಿಕ್ಕಿದ ಸ್ಥಳದಲ್ಲಿ ಮಹಜರು ವೇಳೆ ಮೃತ ಯುವಕನ ಪೋಷಕರು ಹಿಡಿಶಾಪ ಹಾಕುತ್ತಿದ್ದರು. ಈ ಸಂಬಂಧ ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

ವೈದ್ಯ ವಿದ್ಯಾರ್ಥಿಯಿಂದ 25,000 ದೋಚಿದ್ದ ಓರ್ವನ ಸೆರೆ

ತಲೆಮರೆಸಿಕೊಂಡಿರುವ ಮತ್ತೊಬ್ಬನಿಗಾಗಿ ಶೋಧ



ಮೈಸೂರು, ಮೇ 29 (ಆರ್‌ಕೆ)– ವೈದ್ಯಕೀಯ ವಿದ್ಯಾರ್ಥಿಯಿಂದ 25,000 ರೂ ದೋಚಿದ್ದ ಓರ್ವನನ್ನು ಬಂಧಿಸಿರುವ ಎನ್‌ಆರ್ ಠಾಣೆ ಪೊಲೀಸರು, ತಲೆಮರೆಸಿಕೊಂಡಿರುವ ಮತ್ತೊರ್ವನಿಗಾಗಿ ಶೋಧ ನಡೆಸುತ್ತಿದ್ದಾರೆ.

ಮೈಸೂರಿನ ಶಿವರಾತ್ರೀಶ್ವರ ನಗರದ ಜೆಎಸ್‌ಎಸ್ ಮೆಡಿಕಲ್ ಕಾಲೇಜಿನಲ್ಲಿ ಎಂಬಿಬಿಎಸ್ ವ್ಯಾಸಂಗ ಮಾಡುತ್ತಿರುವ ಆರ್ಯನ್ ಪಂಡಿತ್, ಎಂದಿನಂತೆ ಕಾಲೇಜಿಗೆ ನಡೆದುಕೊಂಡು ಹೋಗುತ್ತಿದ್ದಾಗ ಮೇ 27ರಂದು ಬೆಳಿಗ್ಗೆ ಬೈಕಿನಲ್ಲಿ ಬಂದ ಯುವಕರಿಬ್ಬರು ಆತನನ್ನು ಸಮೀಪದ ಪಾರ್ಕ್‌ವೊಂದರ ಬಳಿ ಎಳೆದೊಯ್ದು ಬೆದರಿಸಿದ್ದಾರೆ. ನೀನು ಕಾಲೇಜಿನ ವಿದ್ಯಾರ್ಥಿನಿಯರನ್ನು ನಿಂದಿಸುತ್ತಿದ್ದಿಯ, ಅಲ್ಲದೆ ವಿದ್ಯಾರ್ಥಿಗಳಿಗೆ ಡ್ರಗ್ಸ್ ಪೂರೈಸುತ್ತಿರುವ ಬಗ್ಗೆ ನಮಗೆ ಮಾಹಿತಿ ಇದೆ ಎಂದು ಧಮ್ಕಿ ಹಾಕಿದ್ದಾರೆ ಅಲ್ಲದೆ 25,000 ರೂ. ನೀಡಿದರೆ ನಿನ್ನ ಬಿಡುತ್ತೇವೆ ಎಂದು ಬೇಡಿಕೆ ಇಟ್ಟಿದ್ದರು. ನನ್ನ ಬಳಿ ಅಷ್ಟು ಮೊತ್ತದ ಹಣ ಇಲ್ಲ ಎಂದು ಹೇಳಿದ ಆರ್ಯನ್‌ನಿಂದ ಮೊಬೈಲ್ ಕಿತ್ತುಕೊಂಡ ಓರ್ವ, ಮೊಬೈಲ್ ಆ್ಯಪ್ ಮೂಲಕ ತನ್ನ ಖಾತೆಗೆ 25,000 ರೂ. ಹಣ ವರ್ಗಾಯಿಸಿಕೊಂಡಿದ್ದ. ಈ ವಿಷಯವನ್ನು ಪೊಲೀಸರಿಗೆ ತಿಳಿಸಿದರೆ ಮುಗಿಸಿ ಬಿಡುತ್ತೇವೆಂದು ಬೆದರಿಕೆ ಹಾಕಿದ್ದ.

ಘಟನೆಯ ಆಘಾತದಿಂದ ಹೊರಬಂದ ಆರ್ಯನ್ ಅಂದು ಮಧ್ಯಾಹ್ನ ಎನ್‌ಆರ್ ಠಾಣೆಗೆ ತೆರಳಿ ನೀಡಿದ ದೂರಿನನ್ವಯ ಪ್ರಕರಣ ದಾಖಲಿಸಿಕೊಂಡ ಪೊಲೀಸರು, ತನಿಖೆ ನಡೆಸಿದಾಗ ಮೂಲತಃ ಹಾಸನ ಜಿಲ್ಲೆ, ಆಲೂರಿನವನಾದ ಮೈಸೂರಿನ ಶಿವರಾತ್ರೀಶ್ವರ ನಗರ ನಿವಾಸಿ ಮೊಹಮದ್ ಅಸ್ಸೆನ್ ಎಂಬಾತನನ್ನು ಬಂಧಿಸಿದ್ದಾರೆ.

ತನ್ನ ಬ್ಯಾಂಕ್ ಖಾತೆಗೆ ಹಣ ವರ್ಗಾಯಿಸಿಕೊಂಡು ತಲೆಮರೆಸಿಕೊಂಡಿರುವ ಶಾಲಿದ್ ಪತ್ತೆಗಾಗಿ ಪೊಲೀಸರು ಶೋಧ ನಡೆಸುತ್ತಿದ್ದಾರೆ.

ಮರಿತಿಬ್ಬೇಗೌಡರ ಪರ ಎಂಕೆಎಸ್ ಮತಯಾಚನೆ



ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರ ಪರ ಕೆ.ಆರ್. ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮೈಸೂರಿನ ಮಹಾರಾಜ ಜೂನಿಯರ್ ಕಾಲೇಜು, ಪ್ರೌಢಶಾಲೆ, ಮಹಾರಾಣಿ ವಿಜ್ಞಾನ ಮತ್ತು ಕಲಾ ಕಾಲೇಜು, ಸ್ನಾತಕೋತ್ತರ ವಿಭಾಗಗಳಿಗೆ ಭೇಟಿ ನೀಡಿ ಮತಯಾಚಿಸಿದರು. ಈ ವೇಳೆ ಮುಖಂಡರಾದ ಶೇಖರ್, ರಾಮಸ್ವಾಮಿ, ವಿಶ್ವನಾಥ್ (ವಿಶ್ವ), ಮಹ್ಮದ್ ಫಾರೂಖ್, ರಾಮನ್, ನಾಗ ಮಹದೇವು, ಕುಮಾರ್ (ಕುಮ್ಮಿ) ಮತ್ತಿತರರಿದ್ದರು.

ಎಸ್‌ಎಸ್‌ಎಲ್‌ಸಿಯಲ್ಲಿ ಅತ್ಯುನ್ನತ ಶ್ರೇಣಿ



ಮೈಸೂರು, ಮೇ 29– ಮೈಸೂರು ಭಾರತೀಯ ವಿದ್ಯಾಭವನ ಶಾಲೆಯ ವಿದ್ಯಾರ್ಥಿ ಎಸ್.ಆರ್. ಚಿರಂತ್ ಕಳೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 610 (ಶೇ.97.6) ಅಂಕಗಳೊಂದಿಗೆ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾನೆ. ಈತ ದೈಹಿಕ ಶಿಕ್ಷಣ ಶಿಕ್ಷಕ ಡಿ.ಎಸ್. ರಾಘವೇಂದ್ರ ಹಾಗೂ ರಸಾಯನಶಾಸ್ತ್ರ ಉಪನ್ಯಾಸಕಿ ಶ್ರೀಮತಿ ಸ್ಮಿತಾ ಬಿ.ಆರ್. ಅವರ ಪುತ್ರ.


ವಿಧಾನಪರಿಷತ್‌ಗೆ ಡಾ.ಯತೀಂದ್ರ ಅವರಿಗೆ ಟಿಕೆಟ್ ನೀಡಲು ಮನವಿ

ಮೈಸೂರು, ಮೇ 29(ಜಿಎ)–ವಿಧಾನ ಪರಿಷತ್‌ಗೆ ಮಾಜಿ ಶಾಸಕ ಡಾ.ಯತೀಂದ್ರ ಅವರನ್ನು ಆಯ್ಕೆ ಮಾಡುವಂತೆ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಲ್ಪಸಂಖ್ಯಾತರ ಘಟಕ ಮನವಿ ಮಾಡಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಘಟಕದ ಜಿಲ್ಲಾಧ್ಯಕ್ಷ ಮೋಸಿನ್ ಖಾನ್ ಮಾತನಾಡಿ, ಯತೀಂದ್ರ ಅವರು ಪಕ್ಷ ನೀಡಿದ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಮುಖ್ಯಮಂತ್ರಿ ಪುತ್ರ ಎಂದು ಯಾವುದೇ ಭಾವ ತೋರದೇ ಪಕ್ಷದ ಕಾರ್ಯಕರ್ತನಾಗಿ ಉತ್ತಮವಾಗಿ ಕೆಲಸ ಮಾಡಿದ್ದಾರೆ. ವಿಧಾನಸಭೆ ಮತ್ತು ಲೋಕಸಭಾ ಚುನಾವಣೆ ಸಂದರ್ಭದಲ್ಲಿ ರಾಜ್ಯದ ವಿವಿಧ ಭಾಗಗಳಿಗೆ ತೆರಳಿ ಪಕ್ಷದ ಗೆಲುವಿಗೆ ಶ್ರಮಿಸಿದ್ದಾರೆ. ವಿಧಾನಪರಿಷತ್‌ಗೆ ಆಯ್ಕೆ ಮಾಡಿ, ಮತ್ತಷ್ಟು ಅಧಿಕಾರ ನೀಡಿದರೆ ಹಳೆ ಮೈಸೂರಿನ ಭಾಗದಲ್ಲಿ ಪಕ್ಷವನ್ನು ಸದೃಢಗೊಳಿಸಲು ಸಹಕಾರಿ ಯಾಗಲಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಉಪಾಧ್ಯಕ್ಷರಾದ ನಾಸೀರ್ ಖಾನ್, ಶೇಕ್ ಅಸ್ಲಾಂ, ಆರಿಫ್ ಪಾಷ ಅಂಜ್ಜದ್ ಖಾನ್, ರಫೀಕ್ ಪಾಷ, ಇಮ್ರಾನ್ ಉಪಸ್ಥಿತರಿದ್ದರು.

ವಾರಣಾಸಿ ಕನ್ನಡ ಬಳಗದಿಂದ ದಕ್ಷಿಣ ಭಾರತ ಪ್ರತಿನಿಧಿಗಳಿಗೆ ಅಭಿನಂದನೆ



ವಾರಣಾಸಿ ಲೋಕಸಭಾ ಕ್ಷೇತ್ರದಲ್ಲಿ ಪ್ರಧಾನಿ ಮೋದಿ ಪರ ಪ್ರಚಾರದಲ್ಲಿ ತೊಡಗಿದ್ದ ಕರ್ನಾಟಕ, ತೆಲಂಗಾಣ, ತಮಿಳುನಾಡು ಹಾಗೂ ಮಹಾರಾಷ್ಟ್ರ ಪ್ರತಿನಿಧಿಗಳನ್ನು ಕಂಚಿ ಮಠದ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಭಿನಂದಿಸಲಾಯಿತು. ಈ ಕಾರ್ಯಕ್ರಮವನ್ನು ವಾರಣಾಸಿ ಕನ್ನಡ ಬಳಗ ಏರ್ಪಡಿಸಿತ್ತು. ಕರ್ನಾಟಕದ ಮಾಜಿ ಸಚಿವ ಎಸ್.ಎ. ರಾಮದಾಸ್, ಮಹೇಶ್ ಟೆಂಗಿನಕಾಯಿ ಕೇಶವಪ್ರಸಾದ್, ನವೀನ್, ಆಂಧ್ರಪ್ರದೇಶದ ನಿವೃತ್ತ ಐಎಎಸ್ ಅಧಿಕಾರಿ ವರಪ್ರಸಾದ್ ರಾವ್, ತೆಲಂಗಾಣದ ನಿವೃತ್ತ ಡಿಜಿ ಕೃಷ್ಣ ಪ್ರಸಾದ್, ತಮಿಳುನಾಡು ಹಿಂದೂ ಮಹಾ ಸಭಾ ರಾಜ್ಯಾಧ್ಯಕ್ಷ ಅರ್ಜುನ್ ಸಂಪತ್, ಮಹಾರಾಷ್ಟ್ರದ ಅನಿಲ್ ಸಿಂಗ್ರಿ, ಜೋಳನ್ ಪಳನಿ ಶೆಟ್ಟಿ, ಮಹಮ್ಮದ್ ನಾಸೀರ್ ಜೀ ಇತರರನ್ನು ಅಭಿನಂದಿಸಲಾಯಿತು. ಈ ವೇಳೆ ಕನ್ನಡ ಬಳಗದ ಬಾವು ಆಚಾರ್ಯ ಕೋಪಾನಿ ಇತರರು ಉಪಸ್ಥಿತರಿದ್ದರು.

ಡಾ.ಯತೀಂದ್ರರನ್ನು ವಿಧಾನಪರಿಷತ್‌ಗೆ ಆಯ್ಕೆ ಮಾಡಿ

ಅಖಿಲ ಕರ್ನಾಟಕ ಸಿದ್ದರಾಮಯ್ಯ ಅಭಿಮಾನಿಗಳ ಬ್ರಿಗೇಡ್ ಆಗ್ರಹ



ಡಾ.ಯತೀಂದ್ರ

ಮೈಸೂರು, ಮೇ 29(ಜಿಎ)–ವಿಧಾನ ಪರಿಷತ್‌ಗೆ ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಅವರನ್ನು ಆಯ್ಕೆ ಮಾಡುವಂತೆ ಅಖಿಲ ಕರ್ನಾಟಕ ಸಿದ್ದರಾಮಯ್ಯನವರ ಅಭಿಮಾನಿಗಳ ಬ್ರಿಗೇಡ್‌ನ ರಾಜ್ಯಾಧ್ಯಕ್ಷ ಹಿನಕಲ್ ಉದಯ್ ಮನವಿ ಮಾಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯತೀಂದ್ರ ಅವರು ವರುಣ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿ, ಕಾರ್ಯಕರ್ತರು ಮತ್ತು ಕ್ಷೇತ್ರದ ಜನರೊಂದಿಗೆ ಉತ್ತಮ ಒಡನಾಟ ಇಟ್ಟುಕೊಂಡು ಪಕ್ಷ ಸಂಘಟಿಸಿದ್ದಾರೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ತಂದೆಗಾಗಿ ಕ್ಷೇತ್ರವನ್ನು ಬಿಟ್ಟು ಕೊಟ್ಟು ಅವರ ಗೆಲುವಿಗೆ ಶ್ರಮಿಸಿದ್ದಾರೆ ಎಂದು ಹೇಳಿದರು.

ಕಾರ್ಯಕರ್ತರು ಮತ್ತು ಜನ ಮನ್ನಣೆಗಳಿಸಿರುವ ಯತೀಂದ್ರ ಅವರಿಗೆ ವಿಧಾನ ಪರಿಷತ್ ಸ್ಥಾನ ನೀಡಿದರೆ, ವರುಣ ಮತ್ತು ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಪಕ್ಷ ಬಲವರ್ಧನೆಗೆ ಸಹಕಾರಿಯಾಗಲಿದೆ. ಆದ್ದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಯತೀಂದ್ರ ಅವರನ್ನು ವಿಧಾನಪರಿಷತ್‌ಗೆ ಆಯ್ಕೆ ಮಾಡಿ ಎರಡು ಕ್ಷೇತ್ರದ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಜೆ.ಮಹದೇವ, ಮಾಕನಹುಂಡಿ ಶಿವು, ಮೋಹನ್‌ರಾಜ್, ರಾಯನಹುಂಡಿ ನಾಗರಾಜ್ ಇದ್ದರು.

ವಿಧಾನಪರಿಷತ್ ಅಭ್ಯರ್ಥಿ ಆಯ್ಕೆಯಲ್ಲಿ ಅವಕಾಶ ವಂಚಿತ ಸಮುದಾಯಗಳಿಗೆ ಆದ್ಯತೆ ನೀಡಲು ಆಗ್ರಹ

ಮೈಸೂರು, ಮೇ 29(ಜಿಎ)–ಮೂರೂ ಪ್ರಮುಖ ಪಕ್ಷಗಳು ವಿಧಾನಪರಿಷತ್‌ಗೆ ಅಭ್ಯರ್ಥಿ ಆಯ್ಕೆ ವೇಳೆ ಅವಕಾಶ ವಂಚಿತ ಸಮುದಾಯಗಳಿಗೆ ಆದ್ಯತೆ ನೀಡಬೇಕೆಂದು ಕರ್ನಾಟಕ ರಾಜ್ಯ ಅತಿ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ಜಿಲ್ಲಾಧ್ಯಕ್ಷ ಡಿ.ನಾಗಭೂಷಣ್ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೂನ್ ತಿಂಗಳಲ್ಲಿ 11 ಮಂದಿ ಪರಿಷತ್‌ನಿಂದ ನಿವೃತ್ತರಾಗುತ್ತಿದ್ದಾರೆ. ಇವರಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಏಳು ಸ್ಥಾನ ಖಚಿತವಾಗಿದೆ. ಆದರೆ ಪ್ರಮುಖವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಹಿಂದುಳಿದ ವರ್ಗಗಳಲ್ಲಿನ ಮುಂದುವರಿದ ಸಮುದಾಯಗಳೇ ಈ ಸ್ಥಾನ ಪಡೆಯಲು ಹವಣಿಸುತ್ತಿವೆ. ಹೀಗಾಗಿ ಸ್ಪರ್ಧಿಸಿ ಗೆಲ್ಲಲು ಅಸಾಧ್ಯವಾದ ಪರಿಸ್ಥಿತಿ ಎದುರಿಸುತ್ತಿರುವ ಸಮುದಾಯಗಳಿಗೆ ಮೂರೂ ಪ್ರಮುಖ ಪಕ್ಷಗಳು ಆದ್ಯತೆ ನೀಡುವಂತೆ ಕೋರಿದರು.

ಡಾ.ಯತೀಂದ್ರ ಸಿದ್ದರಾಮಯ್ಯ ಕಳೆದ ವಿಧಾನಸಭಾ ಚುನಾವಣೆ ವೇಳೆ ತಮ್ಮ ತಂದೆಗೆ ಕ್ಷೇತ್ರ ಬಿಟ್ಟುಕೊಟ್ಟು ಅವರು ಸಿಎಂ ಆಗಲು ಸಹಕರಿಸಿದ್ದರು. ಅಲ್ಲದೆ, ಈಗಲೂ ಸಹ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಎಂ.ಸಿ.ವೇಣುಗೋಪಾಲ್ ಅವರು ಸಹಾ ಅವಕಾಶ ವಂಚಿತ ಸಮುದಾಯಕ್ಕೆ ಸೇರಿದ್ದು, ಈ ರೀತಿಯ ತಳಮಟ್ಟಗಳ ಸಮುದಾಯಕ್ಕೆ ಸೇರಿದ ಈ ಇಬ್ಬರನ್ನೂ ಪರಿಷತ್‌ಗೆ ಕಳುಹಿಸಲು ಪಕ್ಷಗಳು ಆದ್ಯತೆ ನೀಡಬೇಕು ಎಂದು ಒತ್ತಾಯಿಸಿದರು.

ಕಾಂಗ್ರೆಸ್ ಹಿಂದುಳಿದ ವರ್ಗದ ಅಧ್ಯಕ್ಷ ಎನ್.ಆರ್.ನಾಗೇಶ್ ಮಾತನಾಡಿ, ಹಿಂದುಳಿದ ಸಮುದಾಯಗಳಿಗೆ ವಿಧಾನಪರಿಷತ್ ಸೇರಿದಂತೆ ರಾಜ್ಯದ ವಿವಿಧ ನಿಗಮ ಮಂಡಳಿಗಳ ಅಧ್ಯಕ್ಷರಾಗಿ ಆಯ್ಕೆ ಮಾಡಬೇಕು. ಇದರಿಂದ ಸಮುದಾಯದ ಏಳಿಗೆಗೆ ಶ್ರಮಿಸಲು ಮತ್ತಷ್ಟು ಸಹಕಾರಿಯಾಗಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ಹಿಂದುಳಿದ ವೇದಿಕೆ ಅಧ್ಯಕ್ಷ ಕೆ.ಎಸ್. ಶಿವರಾಮು, ರವಿನಂದನ್, ಯೋಗೇಶ್, ಉಪ್ಪಾರ್, ಎಚ್.ಎಸ್.ಪ್ರಕಾಶ್ ಇದ್ದರು.

ಬ್ಯೂಟಿಷಿಯನ್ ತರಬೇತಿ

ಮೈಸೂರು, ಮೇ 29–ಭಾರತ ಸರ್ಕಾರದ ಪ್ರಾಯೋಜಿತ ಸಂಸ್ಥೆಯಾದ ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆಯು ಮೈಸೂರಿನ ಸಮೃದ್ಧಿ ಟ್ರಸ್ಟ್ ಸಹಯೋಗದೊಂದಿಗೆ ಮೂರೂವರೆ ತಿಂಗಳ ಅವಧಿಯ ಬ್ಯೂಟಿಷಿಯನ್ ತರಬೇತಿ ಹಾಗೂ ಜೂಟ್ ಪ್ರಾಡಕ್ಟ್ಸ್ ಮೇಕಿಂಗ್ ಕೌಶಲ್ಯ ತರಬೇತಿಗಳನ್ನು ಪ್ರಾರಂಭಿಸಲಾಗುತ್ತಿದೆ. 18–44 ವಯೋಮಾನದ ಪಿಯುಸಿ ಶಿಕ್ಷಣಕ್ಕಿಂತ ಕಡಿಮೆ ವಿದ್ಯಾರ್ಹತೆಯುಳ್ಳವರು ದಾಖಲಾಗಬಹುದು. ಹೆಚ್ಚಿನ ಮಾಹಿತಿಗೆ ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆಯ ಸಹಾಯಕ ಕಾರ್ಯಕ್ರಮ ಅಧಿಕಾರಿ ಸುರೇಶ್ ಕುಮಾರ್ (9535571613) ಅಥವಾ ಸಮೃದ್ಧಿ ಟ್ರಸ್ಟ್‌ನ ಮುಖ್ಯಸ್ಥರಾದ ಶ್ರೀಮತಿ ಉಮಾ ಗಿರಿಜಾ (9738743781) ಅವರನ್ನು ಸಂಪರ್ಕಿಸಬಹುದು.

ಖಡ್ಗ ಹಿಡಿಯದೇ ಸ್ವಾತಂತ್ರ್ಯ ಬರಲಿಲ್ಲ

ಸಾವರ್ಕರ್ ಜಯಂತಿ ಕಾರ್ಯಕ್ರಮದಲ್ಲಿ ನಿವೃತ್ತ ಎಎಸ್‌ಐ ರಂಗನಾಥ್ ಅಭಿಮತ



ಮೈಸೂರಿನ ರೂಪಾನಗರದಲ್ಲಿ ಜನಸೇವಕ ಯುವ ಬ್ರಿಗೇಡ್ ವತಿಯಿಂದ ವಿನಾಯಕ ದಾಮೋದರ್ ಸಾವರ್ಕರ್ ಜಯಂತಿ ಆಚರಿಸಲಾಯಿತು.

ಮೈಸೂರು, ಮೇ 29–ಭಾರತಕ್ಕೆ ಕೇವಲ ಸತ್ಯಾಗ್ರಹ ಹಾಗೂ ಅಹಿಂಸೆಯ ಮಾರ್ಗದಿಂದ ಸ್ವಾತಂತ್ರ್ಯ ದೊರಕಲಿಲ್ಲ. ಬದಲಾಗಿ ಸಾಕಷ್ಟು ಕ್ರಾಂತಿಗಳಾಗಿ ರಕ್ತ ಚೆಲ್ಲಿ, ಬಲಿದಾನದ ಮೂಲಕವೂ ಮಹನೀಯರು ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟರು' ಎಂದು ನಿವೃತ್ತ ಎಎಸ್‌ಐ ರಂಗನಾಥ್ ಹೇಳಿದರು.

ಮೈಸೂರಿನ ರೂಪಾನಗರದಲ್ಲಿ ಜನಸೇವಕ ಯುವ ಬ್ರಿಗೇಡ್ ವತಿಯಿಂದ ವಿನಾಯಕ ದಾಮೋದರ್ ಸಾವರ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಅವರು ಮಾತನಾಡಿದರು.

ಖಡ್ಗ ಹಿಡಿಯದೇ ಸ್ವಾತಂತ್ರ್ಯ ಬರಲಿಲ್ಲ. ಸಾಕಷ್ಟು ಸಂಘರ್ಷಗಳು ನಡೆದವು. ಸಾವರ್ಕರ್ ಬಾಲ್ಯದಿಂದ ದೇಶದ ಬಗ್ಗೆ ಅಪಾರ ಪ್ರೀತಿ ಇರಿಸಿಕೊಂಡಿದ್ದರು. ಹೀಗಾಗಿ, ಅವರಲ್ಲಿ ಕ್ರಾಂತಿಕಾರಿ ಮನೋಭಾವ ಬೆಳೆಯಿತು ಎಂದರು. ಅಭಿನವ ಭಾರತ ಕಟ್ಟುವ ಮೂಲಕ ದೇಶದ ಯುವಕರಲ್ಲಿ ಸ್ವಾತಂತ್ರ್ಯದ ಕಿಚ್ಚು ಹೊತ್ತಿಸಿದರು. ದೇಶಕ್ಕಾಗಿ ಸೇವೆ ಸಲ್ಲಿಸುವಂತೆ ಯುವಕರಲ್ಲಿ ಪ್ರೇರೇಪಣೆ ಮಾಡಿದರು. ಅವರ ಮಾತುಗಳು ಯುವಕರ ಮೇಲೆ ಭಾರಿ ಪ್ರಭಾವ ಬೀರಿ, ದೇಶಸೇವೆಗೆ ಮುಂದಾದರು. ಸ್ಪರ್ಶಮಣಿಯಂತೆ ಕೆಲಸ ಮಾಡುತ್ತಿದ್ದ ಸಾವರ್ಕರ್, ಯಾವುದೇ ರೀತಿಯ ತ್ಯಾಗಕ್ಕೂ ಸಿದ್ಧರಾಗಿದ್ದರು ಎಂದು ಹೇಳಿದರು.

ಈ ಸಂದರ್ಭದಲ್ಲಿ ಜನಸೇವಕ ಯುವ ಬ್ರಿಗೇಡ್ ಅಧ್ಯಕ್ಷ ಡಿ.ರಾಘವೇಂದ್ರ, ಭಾಸ್ಕರ್, ಮಲ್ಲೇಶ್, ಮಂಜು, ಶ್ರೀನಿವಾಸ್, ಯೋಗ ಮಾಸ್ಟರ್ ನಾಗರಾಜ್, ಮಾಯಾ ಶಾನಭಾಗ್, ಯೋಗ ನರಸಿಂಹ ಇನ್ನಿತರರಿದ್ದರು.

ಮರಿತಿಬ್ಬೇಗೌಡರ ಪರ ಮುಖಂಡರಿಂದ ಮತಯಾಚನೆ



ಚಾಮರಾಜ ಕ್ಷೇತ್ರದ ವಿವಿಧ ಕಾಲೇಜು ಮತ್ತು ಪ್ರೌಢಶಾಲೆಯಲ್ಲಿ ಮೈಸೂರು ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್.ಮೂರ್ತಿ, ಇಂದಿರಾಗಾಂಧಿ ಬ್ಲಾಕ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು ನೇತೃತ್ವದಲ್ಲಿ ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರ ಪರ ಮತ ಯಾಚಿಸಲಾಯಿತು. ಈ ವೇಳೆ ಮಾಜಿ ಮೇಯರ್ ಬಿ.ಕೆ.ಪ್ರಕಾಶ್, ಮಾಜಿ ಉಪಮೇಯರ್ ಪುಷ್ಪವಲ್ಲಿ, ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಮಾದೇಶ್, ಪಾಲಿಕೆ ಮಾಜಿ ಸದಸ್ಯ ರಮೇಶ್, ಇಂದಿರಾಗಾಂಧಿ ಬ್ಲಾಕಿನ ಪ್ರಧಾನ ಕಾರ್ಯದರ್ಶಿ ರಾಮಚಂದ್ರು, ಪುಟ್ಟಸ್ವಾಮಿ, ಪಡುವಾರಹಳ್ಳಿ ವಾರ್ಡ್ ಅಧ್ಯಕ್ಷ ಕುಮಾರ, ಯೋಗೇಶ್, ಜಗದೀಶ್, ಹಿರಿಯರಾದ ಇಮಾಮ್ಸು, ಅಕ್ಕಿ ರಾಜ ಇದ್ದರು.

ಸೆರೆಬ್ರಲ್ ಪಾಲ್ಸಿ ತೊಂದರೆಗೆ ಉಚಿತ ಚಿಕಿತ್ಸಾ ಶಿಬಿರ

ಮೈಸೂರು, ಮೇ 29–ಮೈಸೂರಿನ ದೇವೇಗೌಡ ಸರ್ಕಲ್ ಹತ್ತಿರದ ಕಾವೇರಿ ಆಯುರ್ವೇದ ಆಸ್ಪತ್ರೆಯಲ್ಲಿ ಜೂ.1ರಿಂದ 7 ದಿನಗಳ ಮಕ್ಕಳ ಕುಂಠಿತ ಬೆಳವಣಿಗೆ ಮತ್ತು ಸೆರೆಬ್ರಲ್ ಪಾಲ್ಸಿ ತೊಂದರೆಗೆ ಉಚಿತ ಚಿಕಿತ್ಸಾ ಶಿಬಿರ ಏರ್ಪಡಿಸಲಾಗಿದೆ.

ಮಹಿಳೆಯರು ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಅವಶ್ಯ

ಶಾಂತವೇರಿ ಮೆಮೋರಿಯಲ್ ಆಸ್ಪತ್ರೆ ಮುಖ್ಯ ವೈದ್ಯಾಧಿಕಾರಿ ಶುಶ್ರುತ್‌ಗೌಡ ಕಿವಿಮಾತು



ಮೈಸೂರು, ಮೇ 29–ಪ್ರತಿಯೊಬ್ಬರೂ ಖಾಯಿಲೆಗಳ ಬಗ್ಗೆ ಉದಾಸೀನ ಮನೋಭಾವ ತಾಳದೆ ಆಗಿಂದಾಗ್ಗೆ ಆರೋಗ್ಯ ಪರೀಕ್ಷೆಗೆ ಒಳಗಾಗಿ ಚಿಕಿತ್ಸೆ ಪಡೆಯುವುದು ಅಗತ್ಯವಾಗಿದೆ ಎಂದು ಶಾಂತವೇರಿ ಮೆಮೋರಿಯಲ್ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಶುಶ್ರುತ್‌ಗೌಡ ಹೇಳಿದರು.

ಮೈಸೂರಿನ ವಿಜಯನಗರದಲ್ಲಿರುವ ಕನ್ನಡ ಸಾಹಿತ್ಯ ಭವನದಲ್ಲಿ ಸನ್ಮತಿ ಮಹಿಳಾ ಫೌಂಡೇಶನ್ ವತಿಯಿಂದ ಮಹಿಳೆಯರಿಗೆ ಉಚಿತ ಆರೋಗ್ಯ ತಪಾಸಣೆ, ನರಗಳ ದೌರ್ಬಲ್ಯದ ಬಗ್ಗೆ ಚಿಕಿತ್ಸೆ ಹಾಗೂ ಆರೋಗ್ಯ ಜಾಗೃತಿ ನೀಡಿ ಮಾತನಾಡಿದ ಅವರು, ಎಲ್ಲರಿಗೂ ಆರೋಗ್ಯವೇ ಮಹಾಭಾಗ್ಯವಾಗಿದ್ದು, ಮಹಿಳೆಯರು ಆರೋಗ್ಯವಂತರಾಗಿದ್ದರೆ ತಮ್ಮ ಕುಟುಂಬವನ್ನೇ ಆರೋಗ್ಯವಂತ ಕುಟುಂಬವನ್ನಾಗಿ ಕಾಪಾಡಿಕೊಳ್ಳಬಹುದು ಎಂದರು.

ಮೂಢನಂಬಿಕೆಗಳಿಗೆ ಒಳಗಾಗಿ ಆಸ್ಪತ್ರೆಗೆ ತೋರಿಸದೇ ಅನಾರೋಗ್ಯದಿಂದ ಬಳಲುವುದು ಸರಿಯಲ್ಲ. ವೈದ್ಯರನ್ನು ಸಂಪರ್ಕಿಸಿ ಎಂದು ಕಿವಿಮಾತು ಹೇಳಿದರು.

100ಕ್ಕೂ ಹೆಚ್ಚು ಮಹಿಳೆಯರು ಆರೋಗ್ಯ ತಪಾಸಣೆ ಶಿಬಿರವನ್ನು ಸದುಪಯೋಗಪಡಿಸಿಕೊಂಡರು. ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷೆ ಸವಿತಾ ಗೋವಿಂದೇಗೌಡ, ಉಪಾಧ್ಯಕ್ಷೆ ಜ್ಯೋತಿ ಸೀತಾರಾಮ್, ರಾಣಿ, ಪ್ರೇಮ ಗೋವಿಂದೇಗೌಡ, ಮಮತಾ ಶ್ರೀಧರ್, ರಾಜೇಶ್ವರಿ ನಾಗರಾಜ್, ಸುಜಾತಾ, ಹೇಮಾ ರಮೇಶ್ ಮತ್ತಿತರರಿದ್ದರು.

ರಾಮಾಯಣ, ಮಹಾಭಾರತ ಹಳ್ಳಿ ಜನರ ನಾಲಿಗೆ ಮೇಲೆ ನಲಿಯಲು ಹರಿಕಥಾ ಮಾಧ್ಯಮ ಕಾರಣ

ಶ್ರೀಲಲಿತಾ ಉಳಿಯಾರು ಅವರ 501ನೇ ಹರಿಕಥೆಗೆ ವ್ಯಾಸನಕೆರೆ ಪ್ರಭಂಜನಾಚಾರ್ಯ ಚಾಲನೆ



ಶ್ರೀಲಲಿತಾ ಉಳಿಯಾರು ಅವರ 501ನೇ ಶಾಸ್ತ್ರೀಯ ಹರಿಕಥೆ ಕಾರ್ಯಕ್ರಮವನ್ನು ವ್ಯಾಸನಕೆರೆ ಪ್ರಭುಂಜನಾಚಾರ್ಯ ಉದ್ಘಾಟಿಸಿದರು. ಅಂಶಿ ಪ್ರಸನ್ನಕುಮಾರ್, ಆರ್.ವಾಸುದೇವ ಭಟ್, ಎಂ.ಡಿ. ಗೋಪಿನಾಥ್, ಗಿರೀಶ ಕುಲಕರ್ಣಿ, ವಾಸುದೇವ, ವೀಣಾ ಹಾಗೂ ಶ್ರೀಹರಿ ಉಳಿಯಾರು ಇದ್ದಾರೆ.

ಮೈಸೂರು, ಮೇ 29–ರಾಮಾಯಣ, ಮಹಾಭಾರತ ಹಳ್ಳಿಗಳಲ್ಲಿ ಮನೆ ಮನೆ ಮುಟ್ಟಲು ಹರಿಕಥಾ ಮಾಧ್ಯಮ ಕಾರಣ ಎಂದು ಹಿರಿಯ ವಿದ್ವಾಂಸ ವ್ಯಾಸನಕೆರೆ ಪ್ರಭಂಜನಾಚಾರ್ಯ ಹೇಳಿದರು.

ಕೃಷ್ಣಮೂರ್ತಿಪುರಂನ ಶ್ರೀ ರಾಘವೇಂದ್ರ ಆರಾಧನಾ ಸಭಾಂಗಣದಲ್ಲಿ ಮಂಗಳವಾರ ಶ್ರೀಲಲಿತಾ ಉಳಿಯಾರು ಅವರ 501ನೇ ಶಾಸ್ತ್ರೀಯ ಹರಿಕಥೆಗೆ ಚಾಲನೆ ನೀಡಿ ಮಾತನಾಡಿದ ಅವರು, ಹಳ್ಳಿಯ ಜನರ ನಾಲಿಗೆ ಮೇಲೆ ರಾಮಾಯಣ, ಮಹಾಭಾರತದ ಪಾತ್ರಗಳು ಹರಿದಾಡುತ್ತಿವೆ. ಎಂದರೆ ಅದಕ್ಕೆ ಹರಿಕಥೆ ಕಾರಣ. ಹಳ್ಳಿಗಳಲ್ಲಿ ವ್ಯಾಜ್ಯಗಳಾದರೆ ಪಂಚಾಯ್ತಿಯಲ್ಲಿಯೇ ತೀರ್ಪು ಕೊಡುತ್ತಿದ್ದರು. ಇದಕ್ಕೆ ಮಹಾಭಾರತ, ರಾಮಾಯಣ ಕಥೆಗಳು ಸ್ಫೂರ್ತಿ ನೀಡುತ್ತಿದ್ದವು ಎಂದರು.

ಆದರೆ, ಪ್ರಸ್ತುತ ಹರಿಕಥೆಗಳಿಗೆ ಕಿವಿಗೊಡದ ಪರಿಸ್ಥಿತಿ ಇದೆ. ನಮ್ಮ ಧರ್ಮ ಉಳಿಯಬೇಕಾದರೆ ಹರಿಕಥಾ ಮಾಧ್ಯಮವನ್ನು ಉಳಿಸಿ, ಬೆಳೆಸಬೇಕು. ನಮ್ಮ ದೇಶ ಇಡೀ ವಿಶ್ವದಲ್ಲಿಯೇ ಸಂಸ್ಕೃತಿಗೆ ಹೆಸರಾದುದು. ಅದು ಬಂದಿರುವುದು ಸನಾತನ ಧರ್ಮದಿಂದ. ಈಗ ಅದು ಕೂಡ ಹೋಗುತ್ತಿದೆ. ನಮ್ಮ ಸಂಸ್ಕೃತಿ ಹೋದರೆ ನಮ್ಮ ಅಸ್ತಿತ್ವವೇ ಹೋದಂತೆ ಎಂದು ಎಚ್ಚರಿಸಿದರು.

ನಮ್ಮ ಮೇಲೆ ದೇವರು, ಜನರು ಹಾಗೂ ಸಮಾಜದ ಋಣ ಇದೆ ಎಂಬುದನ್ನು ಯಾರೂ ಮರೆಯಬಾರದು. ಎಷ್ಟೇ ದೀಪ ಹಚ್ಚಿದರೂ ಸೂರ್ಯನಿಲ್ಲದೆ ಹಗಲಾಗದು. ಸೂರ್ಯನಿಲ್ಲದೆ ಮಳೆ– ಬೆಳೆ ಕೂಡ ಆಗದು. ಮಳೆ ಬರುವುದು, ನಿಲ್ಲುವುದು ಯಾರಿಂದ ಎಂಬುದನ್ನು ಜನ ಅರಿತಿಲ್ಲ. ಅವರಿಗೆಲ್ಲಾ ಲಕ್ಷ್ಮೀ ಬೇಕು, ಲಕ್ಷ್ಮೀಪತಿ ಬೇಡ, ನವಕೋಟಿ ಬೇಕು ನಾರಾಯಣ ಬೇಡ ಎಂಬ ಪರಿಸ್ಥಿತಿ ಇದೆ ಎಂದ ಅವರು, ಜನರನ್ನು ಎಚ್ಚರಿಸಬೇಕೇ ಹೊರತು ಪ್ರಚೋದಿಸಬಾರದು ಎಂದು ಸಲಹೆ ಮಾಡಿದರು.

ಹರಿಕಥಾ ಮಾಧ್ಯಮ ಮುಚ್ಚುತ್ತಿರುವ ಸಂದರ್ಭದಲ್ಲಿ ಶ್ರೀಲಲಿತಾ ಉಳಿಯಾರು ಎರಡು ವರ್ಷದ ಬಾಲೆಯಾಗಿದ್ದಾಗಿನಿಂದಲೇ ಕಲಿತು ಈವರೆಗೆ ಐದು ನೂರು ಹರಿಕಥೆಗಳನ್ನು ಮಾಡಿರುವುದು ಶ್ಲಾಘನೀಯ. ಮುಂದೆ ಕೂಡ ಹೆಚ್ಚು ಹೆಚ್ಚು ಅಧ್ಯಯನ ಮಾಡಿ, ಭಾಷಾ ಶುದ್ಧತೆಯಿಂದ ಈ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಸಾಧನೆ ಮಾಡಬೇಕು ಎಂದರು.

ವಿಜಯವಿಠಲ ವಿದ್ಯಾಸಂಸ್ಥೆ, ಬಿಎಸ್‌ಎಸ್ ವಿದ್ಯೋದಯ ಶಾಲೆಯ ಗೌರವ ಕಾರ್ಯದರ್ಶಿ ಆರ್. ವಾಸುದೇವಭಟ್, ಸದ್ವಿದ್ಯಾ ಶಿಕ್ಷಣ ಸಂಸ್ಥೆ ನಿರ್ದೇಶಕ ಎಂ.ಡಿ.ಗೋಪಿನಾಥ್, ಮಲ್ಟಿ ಲಿಂಕ್ ಪ್ಲಾಂಟ್ ಹೆಡ್ ಗಿರೀಶ ಕುಲಕರ್ಣಿ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮುಖ್ಯ ಅತಿಥಿಗಳಾಗಿದ್ದರು. ಶ್ರೀಹರಿ ಆಚಾರ್ಯ ಉಳಿಯಾರು ಪ್ರಾರ್ಥಿಸಿ, ವಾಸುದೇವ ಉಳಿಯಾರು ಸ್ವಾಗತಿಸಿದರು. ಶ್ರೀಲಲಿತಾ ಉಳಿಯಾರು ನಿರೂಪಿಸಿದರು. ವೀಣಾ ಉಳಿಯಾರು ವಂದಿಸಿದರು.

ಸುಂದರಕಾಂಡ–ಹನುಮದ್ವಿಲಾಸ ಹರಿಕಥೆ

ಶ್ರೀಲಲಿತಾ ಉಳಿಯಾರು ಅವರು ಸುಂದರ ಕಾಂಡ–ಹನುಮದ್ವಿಲಾಸ ಹರಿಕಥೆ ನಡೆಸಿಕೊಟ್ಟರು. ಅವರ ಸಹೋದರ ಶ್ರೀಹರಿ ಆಚಾರ್ಯ ಉಳಿಯಾರು–ತಬಲ, ಗಣೇಶ್ ಭಟ್–ಕೀಬೋರ್ಡ್, ಚಂದನಕುಮಾರ್–ಪಿಟೀಲು, ಮನ್ಸೂರ್ ಮೂರ್ತಿ–ತಾಳ ಸಹಕಾರ ನೀಡಿದರು.

ಮೈಸೂರು ಮಿತ್ರ

ಅಂಬರೀಷ್ ಹೆಸರಿನಲ್ಲಿ ಫೌಂಡೇಷನ್ ಸ್ಥಾಪನೆ

ವಿದ್ಯಾರ್ಥಿಗಳನ್ನು ದತ್ತು ಪಡೆದು ಉನ್ನತ ಶಿಕ್ಷಣ ಕೊಡಿಸುವ ಕಾರ್ಯ



ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಸುಮಲತಾ ಅಂಬರೀಶ್, ಅಭಿಷೇಕ್ ಮತ್ತಿತರರು.

ನಾನು ಸಂಸತ್ ಚುನಾವಣೆಯ ಫಲಿತಾಂಶದ ನಿರೀಕ್ಷೆಗಳ ಬಗ್ಗೆ ತಲೆ ಕೆಡಿಸಿಕೊಳ್ಳಲ್ಲ. ನನ್ನ ಚುನಾವಣೆಯಲ್ಲಿಯೇ ನಾನು ತಲೆ ಕೆಡಿಸಿಕೊಂಡಿರಲಿಲ್ಲ. ನಾನು ಈಗ ಬಿಜೆಪಿಗೆ ಸೇರಿದ್ದೇನೆ. ಬಿಜೆಪಿ ರಾಜ್ಯದಲ್ಲಿ ಹೆಚ್ಚು ಸ್ಥಾನಗಳು ಗೆಲ್ಲುತ್ತೆ. ರಾಜ್ಯದಲ್ಲಿ 20ಕ್ಕೂ ಅಧಿಕ ಸೀಟ್‌ಗಳು ಎನ್‌ಡಿಎ ಗೆಲ್ಲುತ್ತದೆ. ಶಿಕ್ಷಕರ ಕ್ಷೇತ್ರದ ಚುನಾವಣೆಗೆ ಯಾರೂ ನನ್ನ ಕೇಳಿಲ್ಲ. ಈ ಚುನಾವಣೆ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ಟಿಕೆಟ್ ಕೈತಪ್ಪಿದ್ದರಿಂದ ನನಗೆ ಆ ಸ್ಥಾನ ಕೊಡಿ ಎಂದು ಈಗ ನಾನು ಕೇಳಲ್ಲ. ಜೆ.ಪಿ.ನಡ್ಡಾ, ರಾಜಮೋಹನ್ ದಾಸ್ ಅವರು ಒಳ್ಳೆಯ ಭವಿಷ್ಯ ಇದೆ ಎಂದು ಹೇಳಿದ್ದಾರೆ. ಕಾಲ ಎಲ್ಲದಕ್ಕೂ ಉತ್ತರ ನೀಡುತ್ತದೆ. ಸದ್ಯಕ್ಕೆ ನನಗೆ ರಾಜ್ಯ ರಾಜಕಾರಣದ ಬಗ್ಗೆ ಆಸಕ್ತಿ ಇಲ್ಲ. ರಾಜ್ಯದಲ್ಲಿ ಚುನಾವಣೆಗೆ ಇನ್ನೂ ನಾಲ್ಕು ವರ್ಷಗಳು ಕಾಯಬೇಕು. ನಾನು ಕೇಂದ್ರ ರಾಜಕೀಯದ ಕಡೆ ಗಮನ ಕೊಡಬೇಕು ಎಂದುಕೊಂಡಿದ್ದೇನೆ.

– ಸುಮಲತಾ ಅಂಬರೀಷ್, ಸಂಸದೆ.

ಮಂಡ್ಯ, ಮೇ 29– ಕನ್ನಡ ಚಿತ್ರರಂಗ ಕಂಡ ಮೇರುನಟ ಹಾಗೂ ಮಂಡ್ಯ ಜಿಲ್ಲೆಯ ಜನರ ಬಗ್ಗೆ ಸದಾ ಮಿಡಿಯುತ್ತಿದ್ದ ಮಾಜಿ ಸಚಿವ ದಿ.ಅಂಬರೀಷ್ ಅವರ ಹೆಸರನ್ನು ಸಮಾಜಮುಖಿ ಮಾಡುವ ಸಲುವಾಗಿ ಅವರ ಹೆಸರಲ್ಲಿ ಫೌಂಡೇಷನ್ ಸ್ಥಾಪಿಸಿದ್ದು, ಅದರ ಅಡಿಯಲ್ಲಿ ವಿದ್ಯಾರ್ಥಿಗಳನ್ನು ದತ್ತು ಪಡೆದು ಅವರಿಗೆ ಉನ್ನತ ಶಿಕ್ಷಣ ಕೊಡಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳುವುದಾಗಿ ಸಂಸದೆ ಸುಮಲತಾ ಅಂಬರೀಷ್ ತಿಳಿಸಿದರು.

ಬುಧವಾರ ನಗರದ ರೈತ ಸಭಾಂಗಣದಲ್ಲಿ ನಡೆದ ಡಾ.ಎಂ.ಎಚ್.ಅಂಬರೀಷ್ ಜನ್ಮದಿನಾಚರಣೆ ಹಾಗೂ ಅವರ ಹೆಸರಿನ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಕುಟುಂಬಕ್ಕೆ ಅಧಿಕಾರ ಶಾಶ್ವತ ಅಲ್ಲ. ಮಂಡ್ಯ ಜನರ ಪ್ರೀತಿ ಶಾಶ್ವತವಾಗಿದ್ದು, ಮನೆ ಮನೆಯಲ್ಲಿ ವ್ಯಕ್ತಿ ಜನಿಸೋದು ಸಾಮಾನ್ಯ. ಆದರೆ ವ್ಯಕ್ತಿತ್ವ ಇರುವ ವ್ಯಕ್ತಿ ಜನಿಸುವುದು ಅಪರೂಪ. ಅಂಬರೀಷ್ ಅದನ್ನು ಪಡೆದುಕೊಂಡು ಬಂದವರು ಎಂದು ಸ್ಮರಿಸಿದರು.

ನನಗಿಂತ ಅಂಬರೀಷ್ ಬಗ್ಗೆ ಮಂಡ್ಯ ಜಿಲ್ಲೆಯ ಜನರಿಗೆ ಗೊತ್ತಿದೆ. ಡಾ.ಅಂಬರೀಶ್ ಫೌಂಡೇಶನ್ ಸ್ಥಾಪನೆ ಮಾಡಿದ್ದೇವೆ. ಅವರ ಸಾಧನೆಗಳನ್ನು ಮುಂದುವರಿಸುವ ಉದ್ದೇಶದಿಂದ ಈ ಕಾರ್ಯಕ್ರಮ ಮಾಡುತ್ತಿದ್ದು, ಮಂಡ್ಯ ಜಿಲ್ಲೆಯ ಸಂಸದೆ ಎನ್ನುವುದಕ್ಕಿಂತ ಜಿಲ್ಲೆಯ ಸೊಸೆಯಾಗಿರುವುದು ಹೆಮ್ಮೆಯ ವಿಷಯ ಎಂದರು.

ಜಿಲ್ಲೆಯಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧಕರು ಸಾಧನೆ ಮಾಡಿದ್ದಾರೆ. ವಿದ್ಯಾರ್ಥಿಗಳು ಸಹ ಸಾಧನೆ ಮಾಡಿದ್ದಾರೆ. ಮುಂದೆ ಜಿಲ್ಲೆಯಲ್ಲಿ ಉತ್ತಮ ಹೆಸರು ಬರುತ್ತದೆ. ವಿದ್ಯಾರ್ಥಿಗಳನ್ನು ದತ್ತು ತೆಗೆದುಕೊಂಡು ವಿದ್ಯಾಭ್ಯಾಸ ಕೊಡಿಸುವ ಕೆಲಸ ಮಾಡುವೆ. ನಮ್ಮ ಫೌಂಡೇಶನ್ ವತಿಯಿಂದ ಈ ಕಾರ್ಯಕ್ರಮ ನಡೆಯಲಿದ್ದು, ಶೀಘ್ರದಲ್ಲೇ ಈ ಕಾರ್ಯಕ್ರಮ ಆರಂಭವಾಗಲಿದೆ ಎಂದರು.

ಜಿಲ್ಲೆಯ ಜನತೆ ಅಂಬರೀಷ್ ಅವರನ್ನು ಪ್ರೀತಿ ಅಭಿಮಾನ ಕೊಟ್ಟು ಬೆಳೆಸಿದವರು. ಅಂಬರೀಷ್ ಅವರನ್ನ ರಾಜ್ಯದ ಜನರು ಆಸೆ ಪಡೋರು. ಆದರೆ ಮಂಡ್ಯದವರನ್ನು ನೋಡಲು ಅಂಬರೀಷ್ ಇಷ್ಟ ಪಡುತ್ತಿದ್ದರು. ಅವರ ಹುಟ್ಟುಹಬ್ಬದ ದಿನ ಜನರು ನೋಡೋಕೆ ಬರುತ್ತಿದ್ದರು. ಅವರ ಅಗಲಿಕೆ ಬಳಿಕ ಮಂಡ್ಯದಲ್ಲೇ ಹುಟ್ಟುಹಬ್ಬ ಕಾರ್ಯಕ್ರಮ ನಡೆಯುತ್ತಿರುವುದು ಸಂತಸದ ವಿಚಾರ. ನಿಮ್ಮ ಜೊತೆ ನಾವು ಹುಟ್ಟುಹಬ್ಬ ಆಚರಣೆ ಮಾಡ್ತಿದ್ದೇವೆ. ಅಖಿಲ ಅಂಬರೀಶ್ ಅಭಿಮಾನಿಗಳ ಸಂಘದ ವತಿಯಿಂದ ಒಳ್ಳೆಯ ಕಾರ್ಯಕ್ರಮ ನಡೆಯುತ್ತಿದೆ. ನಿಮ್ಮೆಲ್ಲರಿಗೆ ನನ್ನ ಧನ್ಯವಾದ ಹೇಳುವೆ ಎಂದು ಹೇಳಿದರು.

ನಾನು ರಾಜಕಾರಣದಲ್ಲಿ ಏನೋ ಆಗಬೇಕು ಅಂತ ರಾಜಕಾರಣಕ್ಕೆ ಬಂದಿಲ್ಲ. ಜನರ ಸೇವೆ ಮಾಡಲು ರಾಜಕಾರಣಕ್ಕೆ ಬಂದೆ. ರಾಜಕಾರಣದಲ್ಲಿ ಇಲ್ಲದಿದ್ದರೂ ಮಂಡ್ಯ ಜಿಲ್ಲೆಯ ಜನರ ಸಂಬಂಧ ನಿರಂತರ. ಅಧಿಕಾರ ಶಾಶ್ವತ ಅಲ್ಲ ಪ್ರೀತಿ ಶಾಶ್ವತವಾಗಿದ್ದು, ನಿಮ್ಮ ಸಹಕಾರ ಆಶೀರ್ವಾದ ಎಂದೆಂದಿಗೂ ಇರಲಿ. ಫೌಂಡೇಶನ್ ಮೂಲಕ ಸಮಾಜಮುಖಿ ಕಾರ್ಯಕ್ರಮ ಆಗುತ್ತೆ. ಕಷ್ಟದಲ್ಲಿರುವವರಿಗೆ ಸಹಾಯವಾಗುತ್ತದೆ ಎಂದು ತಿಳಿಸಿದರು.

ಅಂಬರೀಷ್ ಅವರು ಸಿನಿಮಾ ರಂಗದಲ್ಲಿ ನಾಯಕರಾಗಿದ್ದರು. ಯಾವತ್ತು ಅವರಲ್ಲಿ ನಾನು ಅನ್ನೋ ಅಹಂ ಇರಲಿಲ್ಲ. ರಾಜಕಾರಣದಲ್ಲಿ ಬಂದು ಅಧಿಕಾರಕ್ಕೆ ಆಸೆ ಪಟ್ಟವರಲ್ಲ. ಅನ್ಯಾಯ ಮಾಡಿಲ್ಲ, ಸಮಾಜಮುಖಿ ಕಾರ್ಯಗಳನ್ನು ಮಾಡಿದ್ದರು. ಯಾವತ್ತು ಅವರು ಪಬ್ಲಿಸಿಟಿ ಮಾಡಿಕೊಂಡಿಲ್ಲ. ಅವರು ಮಾಡಿರುವ ಕೆಲಸ ಎಲ್ಲರಿಗೂ ಗೊತ್ತಾಗಬೇಕು ಅವರ ಸಾಧನೆ ಎಲ್ಲರು ನೆನಪಿಟ್ಟುಕೊಳ್ಳಬೇಕು. ಅಂಬರೀಷ್ ಅವರು ಜೀವನ ಎಲ್ಲರ ಸ್ಫೂರ್ತಿಯಾಗಬೇಕು ಎಂದು ಅಭಿಪ್ರಾಯಿಸಿದರು.

ವೇದಿಕೆಯಲ್ಲಿ ನಟ ಅಭಿಷೇಕ್ ಅಂಬರೀಷ್, ಪ್ರಾಧ್ಯಾಪಕ ಡಾ.ಶಂಕರೇಗೌಡ, ಹನಕೆರೆ ಶಶಿಕುಮಾರ್, ಬೇಲೂರು ಸೋಮಶೇಖರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಹಿಂದೂ ಯುವಕನ ಮೇಲೆ ಹಲ್ಲೆ ಪ್ರಕರಣ

ದೂರು ಸ್ವೀಕರಿಸಲು ನಿರಾಕರಿಸಿದ್ದ ಬೆಳ್ಳೂರು ಪಿಎಸ್ಐ ಅಮಾನತು



ಮಂಡ್ಯ, ಮೇ29– ನಾಗಮಂಗಲ ತಾಲೂಕಿನ ಬೆಳ್ಳೂರು ಪಟ್ಟಣದಲ್ಲಿ ಹಿಂದೂ ಯುವಕನ ಮೇಲೆ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ದೂರು ಸ್ವೀಕರಿಸಲು ನಿರಾಕರಿಸಿದ್ದ ಬೆಳ್ಳೂರು ಠಾಣೆಯ ಪಿಎಸ್ಐ ಬಸವರಾಜ ಚಿಂಚೋಳಿ ಅವರನ್ನು ಕರ್ತವ್ಯದಿಂದ ಅಮಾನತು ಮಾಡಲಾಗಿದೆ. ಕರ್ತವ್ಯಲೋಪ ಕಾರಣ ನೀಡಿ ಅಮಾನತು ಮಾಡಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್ ಆದೇಶ ಹೊರಡಿಸಿದ್ದಾರೆ.

ಕಾರು ಓವರ್‌ಟೇಕ್ ವಿಚಾರವಾಗಿ ಗಲಾಟೆ ನಡೆದು ಹಿಂದೂ ಯುವಕ ಅಭಿಲಾಷ್ ಮೇಲೆ ಅನ್ಯ ಕೋಮಿನ ಯುವಕರ ಗುಂಪು ಹಲ್ಲೆ ನಡೆಸಿತ್ತು. ಅಭಿಲಾಷ್ ಎಂಬುವವನ ಮೇಲೆ ಹಲ್ಲೆ ನಡೆದಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ ದೂರು ಸ್ವೀಕರಿಸದೆ ನಿರ್ಲಕ್ಷ್ಯ ಮಾಡಿದ್ದ ಪಿಎಸ್ಐ ಬಸವರಾಜ ಚಿಂಚೋಳಿಯನ್ನು ಕರ್ತವ್ಯ ಲೋಪದ ಆರೋಪದಡಿ ಇದೀಗ ಅಮಾನತು ಮಾಡಲಾಗಿದೆ.

ಅನ್ಯ ಕೋಮಿನ ಗುಂಪು ಯುವಕನ ಮೇಲೆ ದಾಳಿ ಮಾಡಿದ್ದಲ್ಲದೇ ಆತನ ಮನೆಗೆ ನುಗ್ಗಿ ದಾಂಧಲೆ ಮಾಡಿತ್ತು. ಅಭಿಲಾಷ್ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ, ಕೆಲ ಮನೆಗಳಿಗೆ ನುಗ್ಗಿ ಬೆದರಿಕೆ ಹಾಕಿದ್ದರಿಂದ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿ ಬೆಳ್ಳೂರು ಪಟ್ಟಣದಲ್ಲಿ ಪ್ರತಿಭಟನೆ ಸಹ ನಡೆದಿತ್ತು. ಕಡೆಗೆ ಪ್ರಕರಣದ ಗಂಭೀರತೆ ಅರಿತು ಪೊಲೀಸರು ದೂರು ಪಡೆದಿದ್ದರು.

ಘಟನೆ ಸಂಬಂಧ 3 ಪ್ರತ್ಯೇಕ ದೂರು ದಾಖಲಾಗಿತ್ತು. ಈ ಹಿಂದೆ ದೂರು ಸ್ವೀಕರಿಸದ ಪಿಎಸ್ಐ ವಿರುದ್ಧವೂ ದೂರು ದಾಖಲಾಗಿತ್ತು. ದೂರು ಬೆನ್ನಲ್ಲೇ ಚಿಂಚೋಳಿರನ್ನು ಅಮಾನತು ಮಾಡಿ ಎಸ್ಪಿ ಆದೇಶಿಸಿದ್ದಾರೆ.

ಬಹಿರಂಗ ಹರಾಜು

ಮಂಡ್ಯ, ಮೇ 29 – ಮಂಡ್ಯ ವಿ.ಸಿ.ಫಾರಂನಲ್ಲಿರುವ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ವ್ಯಾಪ್ತಿಯಲ್ಲಿ ಬರುವ 23 ಸಪೋಟಾ ಮರಗಳ ಫಸಲನ್ನು ಒಂದು ವರ್ಷದ ಅವಧಿಗೆ ಮಾತ್ರ ಸೀಮಿತಗೊಳಿಸಿ ಹರಾಜನ್ನು ಜೂನ್ 10 ಮಧ್ಯಾಹ್ನ 12 ಗಂಟೆಗೆ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಆವರಣದಲ್ಲಿ ಬಹಿರಂಗ ಹರಾಜು ಮಾಡಲಾಗುವುದು. ಆಸಕ್ತಿ ಉಳ್ಳವರು ಹರಾಜಿನಲ್ಲಿ ಭಾಗವಹಿಸಿ ಬಿಡ್ ಮಾಡಬಹುದು ಎಂದು ಮಂಡ್ಯ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಸಹಾಯಕ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರೀರಂಗಪಟ್ಟಣದಲ್ಲಿ ಅಂಬಿ ಜನ್ಮದಿನ ಆಚರಣೆ



ಶ್ರೀರಂಗಪಟ್ಟಣ, ಮೇ 29– ನಟ ರೆಬಲ್ ಸ್ಟಾರ್ ಡಾ.ಅಂಬರೀಶ್ ಅವರ ಹುಟ್ಟುಹಬ್ಬದ ಅಂಗವಾಗಿ ಅಂಬರೀಶ್ ಅಭಿಮಾನಿಗಳು ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಿದರು.

ಅಂಬರೀಶ್ ಅಭಿಮಾನಿ ಸಂಘದ ಗೌರವಾಧ್ಯಕ್ಷ ಎಸ್.ಎಲ್.ಲಿಂಗರಾಜು ನೇತೃತ್ವದಲ್ಲಿ ಮೊದಲಿಗೆ ಪಟ್ಟಣದ ಮೈಸೂರು–ಬೆಂಗಳೂರು ಹೆದ್ದಾರಿಯ ಕುವೆಂಪು ವೃತ್ತದ ಬಳಿ ಅಂಬರೀಶ್ ಭಾವಚಿತ್ರ ಇರಿಸಿ ಅಭಿಮಾನಿಗಳು ವಿಶೇಷ ಪೂಜೆ ಸಲ್ಲಿಸಿದ ನಂತರ ಹಾಲಿನ ಅಭಿಷೇಕ ಮಾಡಿ ಸಾರ್ವಜನಿಕರಿಗೆ ಸಿಹಿ ಹಂಚಿದರು.

ನಂತರ ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ತೆರಳಿ ಅಲ್ಲಿನ ಒಳರೋಗಿಗಳಿಗೆ ಹಣ್ಣು ಬ್ರೆಡ್ ವಿತರಣೆ ಕಾರ್ಯ ನಡೆಸಿದರು.

ಅಂಬರೀಶ್ ಅಭಿಮಾನಿ ಸಂಘದ ಗೌರವಾಧ್ಯಕ್ಷ ಎಸ್.ಎಲ್.ಲಿಂಗರಾಜು ಮಾತನಾಡಿದರು. ಅಂಬರೀಶ್ ಅಭಿಮಾನಿ ಸಂಘದ ಮುಖಂಡರಾದ ಎನ್.ಗಂಗಾಧರ್, ಟಿ.ಎಂ.ಹೊಸೂರು ಮಹೇಶ್, ನಾಗರಾಜು, ಪುರಸಭೆ ಮಾಜಿ ಸದಸ್ಯ ಸುನೀಲ್, ಗೋಪಾಲ್, ಒಕ್ಕಲಿಗರ ಸಂಘದ ಅಧ್ಯಕ್ಷ ಗೌಡಹಳ್ಳಿ ದೇವರಾಜು, ನಗುವನಹಳ್ಳಿ ಮಹದೇವಸ್ವಾಮಿ, ವೆಂಕಟೇಶ್, ಕೃಷ್ಣಕುಮಾರ್, ನಾಗರಾಜು, ಮೋಹನ್, ನೆಲಮನೆ ಹರೀಶ, ರವಿಚಂದ್ರ ಸೇರಿದಂತೆ ನೂರಾರು ಅಂಬರೀಶ್ ಅಭಿಮಾನಿಗಳು ಇದ್ದರು.

ದಕ್ಷಿಣ ಶಿಕ್ಷಕರ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕೆ.ವಿವೇಕಾನಂದ ಬೆಂಬಲಿಸಿ

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮನವಿ



ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು

ಮಂಡ್ಯ, ಮೇ 29– ಜೂನ್ 3ರಂದು ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಗೆ ಸ್ಪರ್ಧಿಸಿರುವ ಎನ್‌ಡಿಎ ಅಭ್ಯರ್ಥಿ ಕೆ.ವಿವೇಕಾನಂದ ಅವರನ್ನು ಹೆಚ್ಚಿನ ಮತಗಳಿಂದ ಗೆಲ್ಲಿಸಿಕೊಡುವಂತೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮತದಾರರಲ್ಲಿ ಮನವಿ ಮಾಡಿದರು.

ಬುಧವಾರ ನಗರದ ಖಾಸಗಿ ಹೋಟೆಲ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೊಸ ಮುಖಕ್ಕೆ ಬಿಜೆಪಿ–ಜೆಡಿಎಸ್ ಅವಕಾಶ ಕೊಟ್ಟಿದೆ. ಟಿಕೆಟ್ ಆಕಾಂಕ್ಷಿಯಾಗಿದ್ದ ಮಾಜಿ ಎಂಎಲ್‌ಸಿ ಕೆ.ಟಿ.ಶ್ರೀಕಂಠೇಗೌಡ ಅವರನ್ನು ಮುಂದೆ ಕೈ ಬಿಡುವ ಮಾತಿಲ್ಲ. ಮುಂದಿನ ದಿನಗಳಲ್ಲಿ ಅವರಿಗೆ ಉನ್ನತ ಸ್ಥಾನವನ್ನು ಪಕ್ಷ ಕೊಡುತ್ತದೆ. ನಮ್ಮ ಪಕ್ಷದ ವರಿಷ್ಠರ ಸೂಚನೆ ಮೇರೆಗೆ ಅವರು ವಿವೇಕಾನಂದ ಗೆಲುವಿಗೆ ಶ್ರಮಿಸುತ್ತಿದ್ದಾರೆ. ನಮ್ಮಲ್ಲಿ ಯಾವುದೇ ಗೊಂದಲ ಇಲ್ಲ, ಒಗ್ಗಟ್ಟಿನಿಂದ ಚುನಾವಣೆ ಮಾಡುತ್ತಿದ್ದು, ಶ್ರೀಕಂಠೇಗೌಡ ಸೇರಿದಂತೆ ಜಿಲ್ಲೆಯ ಎಲ್ಲಾ ಜೆಡಿಎಸ್ ಹಾಲಿ, ಮಾಜಿ ಶಾಸಕರು ವಿವೇಕಾನಂದ ಗೆಲುವಿಗೆ ದುಡಿಯುತ್ತಿದ್ದಾರೆ ಎಂದರು.

ಹಾಸನ ಪೆನ್‌ಡ್ರೈವ್ ಪ್ರಕರಣದ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆ ಮೇಲೆ ಈ ಪ್ರಕರಣ ಪ್ರಭಾವ ಬೀರಲ್ಲ. ಅದಕ್ಕೂ ಪಕ್ಷಕ್ಕೂ ಸಂಬಂಧ ಇಲ್ಲ. ಈಗಾಗಲೇ ಪ್ರಜ್ವಲ್‌ರನ್ನು ಪಕ್ಷದಿಂದ ಉಚ್ಚಾಟಿಸಲಾಗಿದೆ. ಈ ಪ್ರಕರಣ ಎಸ್‌ಐಟಿ ಮುಂದೆ ಇದೆ. ತನಿಖೆಯಾಗುತ್ತದೆ. ಈ ಕೃತ್ಯದ ಬಗ್ಗೆ ತನಿಖೆ ನಂತರ ಸತ್ಯಾಸತ್ಯತೆ ಹೊರಬೀಳಲಿದೆ. ದಯವಿಟ್ಟು ಈ ವಿಚಾರದ ಬಗ್ಗೆ ಹೆಚ್ಚಿನ ಚರ್ಚೆ ಬೇಡ ಎಂದರು.

ವಿಧಾನಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಮಾತನಾಡಿ, ಶಿಕ್ಷಕರ ಪರ ಹೆಚ್ಚು ಹೋರಾಟ ಮಾಡಿ ದ್ದೇನೆ. ಅವರ ಸಮಸ್ಯೆಗಳಿಗೆ ಹೋರಾಟ ಮೂಲಕ ಯಶಸ್ಸು ಕಂಡಿದ್ದೆ. ನಾನು ಕೂಡ ಆಕಾಂಕ್ಷಿತನಾಗಿದ್ದೆ. ಜೆಡಿಎಸ್–ಬಿಜೆಪಿಯಿಂದ ಚುನಾವಣಾ ಪ್ರಚಾರ ಸಹ ನಡೆಸುತ್ತಿದೆ. ಆದರೆ ಟಿಕೆಟ್ ಸಿಗಲಿಲ್ಲ. ನಾನು ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿದ್ದು, ಎಲ್ಲಾ ಶಿಕ್ಷಕರು ಎನ್‌ಡಿಎ ಅಭ್ಯರ್ಥಿ ಕೆ.ವಿವೇಕಾನಂದ ಅವರಿಗೆ ಮೊದಲ ಪ್ರಾಶಸ್ತ್ಯ ಮತ ನೀಡಿ ಗೆಲ್ಲಿಸಬೇಕೆಂದು ಮನವಿ ಮಾಡಿದರು.

ಜೆಡಿಎಸ್ ಶಿಕ್ಷಕರ ಪರ ನಿಂತ ಪಕ್ಷ. ಕಾಂಗ್ರೆಸ್ ಪಕ್ಷ ಶಿಕ್ಷಕರ ಪರ ಯಾವತ್ತು ನಿಂತಿಲ್ಲ. ಈ ಭಾಗದಲ್ಲಿ ಎರಡೂ ಪಕ್ಷದ ಬೆಂಬಲಿತ ಅಭ್ಯರ್ಥಿ ವಿವೇಕಾನಂದ ಗೆಲ್ಲುತ್ತಾರೆ. ನಾನು ಹೋರಾಟದ ಮೂಲಕ ಈ ಭಾಗದ ಶಿಕ್ಷಕರಿಗೆ ಬಡ್ತಿ ಕೊಡಿಸಿದ್ದೇನೆ. ನಮ್ಮ ಅಭ್ಯರ್ಥಿ ಗೆಲುವು ಕಷ್ಟವಾಗಲ್ಲ. ಶಿಕ್ಷಕರು ಸಹ ಬದಲಾವಣೆ ಬಯಸುತ್ತಿದ್ದಾರೆ. ಎಲ್ಲಾ ಕಡೆ ಚುನಾವಣಾ ಪ್ರವಾಸ ಮಾಡಿದ್ದೇನೆ ಜನ ಹೊಸ ಮುಖ ಬಯಸಿದ್ದಾರೆ. ಎಲ್ಲಾ ಮತದಾರರು ಬೆಂಬಲ ಎನ್‌ಡಿಎ ಅಭ್ಯರ್ಥಿಗೆ ಮೊದಲ ಪ್ರಾಶಸ್ತ್ಯ ಮತ ಕೊಟ್ಟು ಆಶೀರ್ವಾದ ಮಾಡಿ ಎಂದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಸಚಿವ ಡಿ.ಸಿ.ತಮ್ಮಣ್ಣ, ಮಾಜಿ ಶಾಸಕರಾದ ಡಾ.ಕೆ.ಅನ್ನದಾನಿ, ಕೆ.ಸುರೇಶ್‌ಗೌಡ, ರವೀಂದ್ರ ಶ್ರೀಕಂಠಯ್ಯ, ಜೆಡಿಎಸ್ ಮುಖಂಡ ಬಿ.ಆರ್.ರಾಮಚಂದ್ರ ಜಿಲ್ಲಾಧ್ಯಕ್ಷ ಡಿ.ರಮೇಶ್ ಉಪಸ್ಥಿತರಿದ್ದರು.

ಹಣ ಬಿಡುಗಡೆ ಸಮಿತಿ ಸಭೆ

ಮಂಡ್ಯ, ಮೇ 29– ಕರ್ನಾಟಕ ಲೋಕಸಭಾ ಚುನಾವಣೆ –2024ರ ಮಾದರಿ ನೀತಿ ಸಂಹಿತೆ ಜಾರಿಯಲ್ಲಿದ್ದ ಸಂದರ್ಭದಲ್ಲಿ ಜಪ್ತಿಯಾಗಿರುವ ನಗದು ಹಣವನ್ನು ಬಿಡುಗಡೆ ಮಾಡಲು ಮಂಡ್ಯ ಜಿಲ್ಲಾ ಚುನಾವಣಾ ಅಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು ಹಣ ಬಿಡುಗಡೆ ಸಮಿತಿಯನ್ನು ರಚಿಸಿದ್ದಾರೆ. ಹಣ ಬಿಡುಗಡೆ ಸಮಿತಿ ಸಭೆಯನ್ನು ಮೇ 30 ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯತ್‌ನಲ್ಲಿ ಆಯೋಜಿಸಲಾಗಿದೆ.

ಕರ್ನಾಟಕ ಲೋಕಸಭಾ ಚುನಾವಣೆ –2024 ಮಾದರಿ ನೀತಿ ಸಂಹಿತೆ ಜಾರಿಯಲ್ಲಿದ್ದ ಸಂದರ್ಭದಲ್ಲಿ ಕ್ಷಿಪ್ರ ಸಂಚಾರಿದಳ (FST) ಮತ್ತು ಸ್ಥಾಯಿ ಕಣ್ಗಾವಲು ತಂಡ (SST), ಪೊಲೀಸ್ ತಂಡದವರು ತಪಾಸಣೆ ನಡೆಸಿದ ಸಂದರ್ಭದಲ್ಲಿ ವಶಪಡಿಸಿಕೊಂಡಿರುವ ಹಣವನ್ನು ಆಯಾ ಕ್ಷೇತ್ರ ವ್ಯಾಪ್ತಿಯ ಜಿಲ್ಲಾ/ತಾಲೂಕು ಉಪಖಜಾನೆಯ ವಶದಲ್ಲಿರಿಸಲಾಗಿರುತ್ತದೆ. ಸದರಿ ಹಣವು ರಾಜಕೀಯ ಉದ್ದೇಶಕ್ಕಾಗಿ ಬಳಕೆಯಾಗದೆ ಇರುವ ಬಗ್ಗೆ ಸಂಬಂಧಿಸಿದವರಿಂದ ದಾಖಲಾತಿಗಳನ್ನು ಪರಿಶೀಲಿಸಿ ಖಾತ್ರಿಪಡಿಸಿಕೊಂಡ ನಂತರ ಹಣ ಬಿಡುಗಡೆಗೊಳಿಸಲಾಗುವುದು.

ನಾಂದಿ ನಾಟಕೋತ್ಸವಕ್ಕೆ ಚಾಲನೆ

ರಂಗಭೂಮಿ ಸೇರಿದಂತೆ ಪ್ರದರ್ಶಕ ಕಲೆಗಳಿಗೆ ಶೈಕ್ಷಣಿಕ ಹಿನ್ನೆಲೆ ಅಗತ್ಯ

ಸಂಗೀತ ವಿವಿ ಕುಲಪತಿ ಡಾ.ನಾಗೇಶ್ ವಿ.ಬೆಟ್ಟಕೋಟೆ ಅಭಿಮತ





ರಂಗಾಯಣದ ಭೂಮಿಗೀತದಲ್ಲಿ ಬುಧವಾರ 'ನಾಂದಿ' ನಾಟಕೋತ್ಸವಕ್ಕೆ ಚಾಲನೆ ನೀಡಲಾಯಿತು. ಮತ್ತೊಂದು ಚಿತ್ರದಲ್ಲಿ 'ವೃಕ್ಷರಾಜ' ನಾಟಕ ಪ್ರದರ್ಶನದ ಒಂದು ದೃಶ್ಯ ಕಾಣಬಹುದು.

ಭೂಮಿಗೀತದಲ್ಲಿ ಬುಧವಾರ ಮಣಿಪುರ ಜನಪದ ಕಥೆಯಾಧಾರಿತ 'ವೃಕ್ಷರಾಜ' ನಾಟಕ ಪ್ರದರ್ಶನ ಕಂಡಿತು. ಅಂತೆಯೇ ಮೇ 31ರವರೆಗೆ ಸಂಜೆ 6.30ಕ್ಕೆ ಭೂಮಿಗೀತದಲ್ಲಿ ನಾಟಕಗಳ ಪ್ರದರ್ಶನ ನಡೆಯಲಿವೆ. ಅಂತೆಯೇ ಮೇ 30ರಂದು ವಿಲಿಯಂ ಶೇಕ್ಸ್‌ಪಿಯರ್ ವಿರಚಿತ 'ವೆನಿಸ್ಸಿನ ವ್ಯಾಪಾರ' ಹಾಗೂ ಮೇ 31ರಂದು ಮಾಸ್ತಿ ವೆಂಕಟೇಶ ಅಯ್ಯಂಗಾರ್ ವಿರಚಿತ 'ಕಾಕನಕೋಟೆ' ನಾಟಕಗಳ ಪ್ರದರ್ಶನ ನಡೆಯಲಿವೆ.

ಮೈಸೂರು,ಮೇ 29(ಪಿಎಂ)– ರಂಗಭೂಮಿ ಸೇರಿದಂತೆ ಯಾವುದೇ ಪ್ರದರ್ಶಕ ಕಲೆಗಳಿಗೆ ಶೈಕ್ಷಣಿಕ ಹಿನ್ನೆಲೆ ಅಗತ್ಯ. ಇದರಿಂದ ಅವುಗಳು ಮುಂದಿನ ಪೀಳಿಗೆಗೆ ತಲುಪಲು ಮತ್ತು ಉದ್ದೇಶಿತ ಸಂದೇಶವನ್ನು ಜನ ಸಮುದಾಯಕ್ಕೆ ತಲುಪಿಸುವಲ್ಲಿ ಹೆಚ್ಚು ಪರಿಣಾಮಕಾರಿ ಆಗಲು ಸಾಧ್ಯವಾಗಲಿದೆ ಎಂದು ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದ ಕುಲಪತಿ ಡಾ.ನಾಗೇಶ್ ವಿ.ಬೆಟ್ಟಕೋಟೆ ಹೇಳಿದರು.

ಮೈಸೂರು ರಂಗಾಯಣದ ಭೂಮಿಗೀತದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ರಂಗಾಯಣದ ಭಾರತೀಯ ರಂಗಶಿಕ್ಷಣ ಕೇಂದ್ರದ ನಾಟಕೋತ್ಸವ 'ನಾಂದಿ'ಗೆ (ಕೇಂದ್ರದ ವಿದ್ಯಾರ್ಥಿಗಳಿಂದ ಪ್ರದರ್ಶನ) ಚಾಲನೆ ನೀಡಿ ಅವರು ಮಾತನಾಡಿದರು.

ಈ ಕಲೆಗಳು ಉಳಿದು ಬೆಳೆಯಲು ಸಹ ಶೈಕ್ಷಣಿಕ ವ್ಯವಸ್ಥೆ ಕಲ್ಪಿಸುವುದು ಅತ್ಯಗತ್ಯವಾಗಿದೆ. ಯಾವುದೇ ಇತಿಹಾಸ ಅಥವಾ ಹೋರಾಟ ತೆಗೆದುಕೊಂಡರೂ ಅವುಗಳು ಯಶಸ್ಸು ಗಳಿಸುವಲ್ಲಿ ರಂಗಭೂಮಿ ಮಹತ್ವದ ಪಾತ್ರ ವಹಿಸಿರುವುದನ್ನು ಕಾಣಬಹುದು. ಅಂತೆಯೇ ಶೈಕ್ಷಣಿಕವಾಗಿ ಯಾವುದೇ ವಿಷಯವನ್ನು ಪರಿಣಾಮಕಾರಿಯಾಗಿ ಕಲಿಯಬೇಕಾದರೆ ಪ್ರಾಯೋಗಿಕ ವಿಧಾನ ಹೆಚ್ಚು ಪ್ರಯೋಜನಕಾರಿ ಆಗಲಿದೆ. ಈ ನಾಟಕೋತ್ಸವವು ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಕಲಿತ ವಿಷಯಗಳನ್ನು ಮನನ ಮಾಡಿಕೊಳ್ಳಲು ಅನುಕೂಲವಾಗಲಿದೆ ಎಂದು ಹೇಳಿದರು.

ಭಾರತೀಯ ರಂಗಶಿಕ್ಷಣ ಕೇಂದ್ರದ ಮುಖ್ಯಸ್ಥ ಎಸ್.ರಾಮನಾಥ ಮಾತನಾಡಿ, ಕೇಂದ್ರದ 2023–24ನೇ ಸಾಲಿನ ವಿದ್ಯಾರ್ಥಿಗಳ ನಾಟಕೋತ್ಸವ ಇದಾಗಿದ್ದು, ಒಂದು ವರ್ಷದ ಕೋರ್ಸ್ ಅನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ವಿದ್ಯಾರ್ಥಿಗಳು ಇದೀಗ ನಾಟಕೋತ್ಸವದಲ್ಲಿ ತಾವು ಕಲಿತ ರಂಗ ಪ್ರಯೋಗ ಮಾಡಲು ಹೊರಟಿದ್ದಾರೆ ಎಂದು ಶುಭ ಕೋರಿದರು.

ಈ ವಿದ್ಯಾರ್ಥಿಗಳಿಗೆ ನಾನು ಹಾಗೂ ಅಮಿತ್ ಜೆ.ರೆಡ್ಡಿ ಮಾತ್ರವಲ್ಲದೆ, 20 ಮಂದಿ ಸಂಪನ್ಮೂಲ ವ್ಯಕ್ತಿಗಳು ತರಬೇತಿ ನೀಡಿದ್ದೇವೆ. ನಾಲ್ಕು ನಾಟಕಗಳನ್ನು ನಿರ್ದೇಶನ ಮಾಡಿದ್ದು, ಈ ನಾಲ್ಕು ನಾಟಕಗಳ 40 ಪ್ರದರ್ಶನ ಕೂಡ ಕೇಂದ್ರದಿಂದ ಯಶಸ್ವಿಯಾಗಿ ಆಗಿದೆ. ಇದು ನಮ್ಮ ಕೇಂದ್ರದ ಹೆಗ್ಗಳಿಕೆ. ಏಕೆಂದರೆ ಯಾವ ರಂಗಶಿಕ್ಷಣ ಕೇಂದ್ರವೂ ಅಷ್ಟು ಪ್ರದರ್ಶನ ನೀಡಿಲ್ಲ ಎಂದರು.

ರಂಗಭೂಮಿ ವಿದ್ಯಾರ್ಥಿ ಬೆಳೆಯುವುದೇ ಪ್ರೇಕ್ಷಕರ ಮುಂದೆಯಾಗಿದೆ. ಹಾಗಾಗಿ ಪ್ರದರ್ಶನಕ್ಕೆ ಹೆಚ್ಚು ಒತ್ತು ನೀಡಲಾಯಿತು. ಈ ಸಾಲಿನಲ್ಲಿ 14 ವಿದ್ಯಾರ್ಥಿಗಳು ಹಾಗೂ 4 ವಿದ್ಯಾರ್ಥಿನಿಯರು ಕೋರ್ಸ್ ಪೂರ್ಣಗೊಳಿಸಿದ್ದಾರೆ. ಪ್ರತಿವರ್ಷ 15ರಿಂದ 20 ಮಂದಿಯನ್ನು ಕೇಂದ್ರದ ವಿದ್ಯಾರ್ಥಿಗಳಾಗಿ ಆಯ್ಕೆ ಮಾಡಲಾಗುತ್ತದೆ. ಸದರಿ ಸಾಲಿನಲ್ಲಿ 120 ಮಂದಿ ಅರ್ಜಿಗಳನ್ನು ಸಲ್ಲಿಸಿದ್ದರು ಎಂದು ವಿವರಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ ಅಧ್ಯಕ್ಷತೆ ವಹಿಸಿದ್ದರು.

ರೈತರ ಕುಂದು–ಕೊರತೆ ಸಭೆ



ಮೈಸೂರು, ಮೇ 29–ಮೈಸೂರಿನ ತಾಲೂಕು ಕಚೇರಿಯ ನ್ಯಾಯಾಲಯ ಸಭಾಂಗಣದಲ್ಲಿ ತಾಲೂಕು ಮಟ್ಟದ ರೈತರ ಕುಂದು–ಕೊರತೆ ಸಭೆ ಏರ್ಪಡಿಸಲಾಗಿತ್ತು.

ಸಭೆಯಲ್ಲಿ ಪ್ರಮುಖವಾಗಿ ಕೃಷಿ ಇಲಾಖೆಯಿಂದ ಬಿತ್ತನೆ ಬೀಜ ವಿತರಣೆ, ರಸಗೊಬ್ಬರ ವಿತರಣೆ, ಬರ ಪರಿಹಾರ, ಸರ್ಕಾರಿ ಜಮೀನು ಒತ್ತುವರಿ ತೆರವು, ನಿರಂತರ ವಿದ್ಯುತ್ ಸಂಪರ್ಕ, ನಾಲೆಗಳ ಸ್ವಚ್ಛತೆ, ನಾಲಾ ಏರಿಗಳ ಆಧುನೀಕರಣ, ತೋಟಗಾರಿಕೆ ಬೆಳೆಗಳ ಮಾಹಿತಿ, ಪಶು ಸಂಗೋಪನೆ ಇಲಾಖೆಗಳ ಯೋಜನೆಗಳು, ಅರಣ್ಯ ಇಲಾಖೆಯ ಯೋಜನೆ, ಗ್ರಾಮೀಣ ಭಾಗಗಳಿಗೆ ಸೂಕ್ತ ಸಾರಿಗೆ ವ್ಯವಸ್ಥೆ, ರಸ್ತೆಗಳ ಆಧುನೀಕರಣ, ಪೋಡಿ ದುರಸ್ತಿ ಗ್ರಾಮೀಣ ಭಾಗದ ಬ್ಯಾಂಕ್‌ಗಳಲ್ಲಿ ಬೆಳೆ ಸಾಲ–ಸೌಲಭ್ಯ ವ್ಯವಸ್ಥೆ, ಬೆಳೆ ವಿಮೆ, ನರೇಗಾ ಯೋಜನೆ, ಇತ್ಯಾದಿ ವಿಷಯಗಳ ಕುರಿತು ವಿವರವಾಗಿ ಚರ್ಚೆ ಮಾಡಲಾಯಿತು.

ಈ ಸಭೆಯು ರೈತರಿಗೆ, ರೈತ ಮುಖಂಡರಿಗೆ ಸಹಕಾರಿಯಾಗಿದೆ. ರೈತರ ಸಮಸ್ಯೆಗಳನ್ನು ತ್ವರಿತವಾಗಿ ಬಗೆಹರಿಸಲು ಹಾಗೂ ಇನ್ನು ಮುಂದೆಯೂ ಸಹ ರೈತರಿಗೆ ಮತ್ತು ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಹಸೀಲ್ದಾರರು ಸೂಚನೆ ನೀಡಿದರು.

ಕರ್ನಾಟಕ ರಾಜ್ಯ ರೈತ ಸಂಘ, ಅಖಿಲ ಭಾರತ ಕಬ್ಬು ಬೆಳೆಗಾರರ ಸಂಘ, ಸಾಮೂಹಿಕ ನಾಯಕತ್ವದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ, ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘ, ಕರ್ನಾಟಕ ರಾಜ್ಯ ರೈತಸಂಘ, ರೈತ ಬಣದ ಪದಾಧಿಕಾರಿಗಳು, ರೈತ ಮುಖಂಡರು, ರೈತರು, ಸಾರ್ವಜನಿಕ ಬಂಧುಗಳು ಹಾಗೂ ಮೈಸೂರು ತಾಲೂಕು ಮಟ್ಟದ ಅಧಿಕಾರಿಗಳು ಹಾಜರಿದ್ದರು.

ಪ್ರಾಂಶುಪಾಲರಿಗೆ ಅಭಿನಂದನೆ



ಕದಂಬ ರಂಗವೇದಿಕೆ ವತಿಯಿಂದ ವಿಜಯವಿಠಲ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಪ್ರೊ. ಸತ್ಯ ಪ್ರಸಾದ್ ಅವರನ್ನು ವೇದಿಕೆ ಅಧ್ಯಕ್ಷ ರಾಜಶೇಖರ ಕದಂಬ ಗೌರವಿಸಿದರು. ಕಲಾವಿದರಾದ ರಾಮಣ್ಣ, ಅಶ್ವಥ್ ಕದಂಬ ಚಿತ್ರದಲ್ಲಿದ್ದಾರೆ.

ಕೆ.ಪಿ. ಸುಕ್ರುತಾಗೆ ಪಿಎಚ್.ಡಿ



ಮೈಸೂರು: ಡಾ.ಎಂ.ಪಿ. ಸದಾಶಿವ ಅವರ ಮಾರ್ಗದರ್ಶನದಲ್ಲಿ ಕೆ.ಪಿ. ಸುಕ್ರುತಾ ಅವರು ರಸಾಯನಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಬಿಟ್‌ಕಾಯಿನ್ ಹಗರಣ: ಪೊಲೀಸ್ ಇನ್ಸ್‌ಪೆಕ್ಟರ್ ಚಂದ್ರಾಧರ್ ಬಂಧನ

ಬೆಂಗಳೂರು: ರಾಜ್ಯದಲ್ಲಿ ಭಾರಿ ಸದ್ದು ಮಾಡಿದ್ದ ಬಿಟ್‌ಕಾಯಿನ್ ಹಗರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ(ಎಸ್‌ಐಟಿ)ದ ಅಧಿಕಾರಿಗಳು ಬುಧವಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೊಬ್ಬ ಪೊಲೀಸ್ ಅಧಿಕಾರಿಯನ್ನು ಬಂಧಿಸಿದ್ದಾರೆ.

ಅಧಿಕಾರ ದುರ್ಬಳಕೆ ಹಾಗೂ ಸಾಕ್ಷ್ಯನಾಶ ಆರೋಪದಡಿ ಇನ್ಸ್‌ಪೆಕ್ಟರ್ ಚಂದ್ರಾಧರ್ ಅವರನ್ನು ಎಸ್‌ಐಟಿ ಪೊಲೀಸರು ಸುದೀರ್ಘ ವಿಚಾರಣೆ ನಡೆಸಿ ಇಂದು ಬಂಧಿಸಿದ್ದಾರೆ.

ಸೈಬರ್ ಕ್ರೈಂ ಠಾಣೆ ಇನ್ಸ್‌ಪೆಕ್ಟರ್ ಆಗಿದ್ದ ಚಂದ್ರಾಧರ್, ಈ ಹಿಂದೆ ಬಿಟ್ ಕಾಯಿನ್ ಪ್ರಕರಣದ ತನಿಖೆ ನಡೆಸಿದ್ದರು. ಈ ಪ್ರಕರಣದಲ್ಲಿ ರಾಜಕಾರಣಿಗಳು, ಹಿರಿಯ ಪೊಲೀಸ್ ಅಧಿಕಾರಿಗಳು ಭಾಗಿಯಾಗಿರುವ ಆರೋಪ ಕೇಳಿಬಂದಿತ್ತು. ಈ ಹಿನ್ನೆಲೆಯಲ್ಲಿ ಪ್ರಕರಣದಲ್ಲಿ ಮೂವರು ಪೊಲೀಸರು ಸೇರಿದಂತೆ ಒಟ್ಟು ನಾಲ್ವರನ್ನು ಬಂಧಿಸಲಾಗಿದೆ. ಪ್ರಕರಣ ಸಂಬಂಧ ಅಂತಾರಾಷ್ಟ್ರೀಯ ಮಟ್ಟದ ಹ್ಯಾಕರ್ ಆಗಿರುವ ಶ್ರೀಕೃಷ್ಣ ಆಲಿಯಾಸ್ ಶ್ರೀಕಿಯನ್ನು 2020ರಲ್ಲಿ ಸಿಸಿಬಿ ಪೊಲೀಸರು ಬಂಧಿಸಿದ್ದರು. ಈತನ ವಿರುದ್ಧ ಕೆಂಪೇಗೌಡನಗರ, ಅಶೋಕನಗರ ಹಾಗೂ ಸೈಬರ್ ಕ್ರೈಂ ಪೊಲೀಸ್ ಠಾಣೆ ಸೇರಿದಂತೆ ನಗರದ ವಿವಿಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದವು. ಸೈಬರ್ ಕ್ರೈಂ ಠಾಣೆಯ ಇನ್ಸ್‌ಪೆಕ್ಟರ್ ಆಗಿದ್ದ ಚಂದ್ರಾಧರ್ ಅವರು ಶ್ರೀಕಿಯನ್ನು ಬಂಧಿಸಿ ವಿಚಾರಣೆಗೊಳಪಡಿಸಿದ್ದರು.

ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ವಿರುದ್ಧ ಮಾಜಿ ಕಾರ್ಪೊರೇಟರ್ ಲೋಕೇಶ್ ಪಿಯಾ ನೇತೃತ್ವದಲ್ಲಿ ನಾಯಕ ಸಮುದಾಯ ಪ್ರತಿಭಟನೆ



ಮೈಸೂರು: ಕ್ರೀಡಾ ಮತ್ತು ಯುವ ಸಬಲೀಕರಣ ಸಚಿವ ಬಿ.ನಾಗೇಂದ್ರ ರಾಜೀನಾಮೆಗೆ ಒತ್ತಾಯಿಸಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿರುದ್ಧ ನಾಯಕ ಸಮುದಾಯವು ಮೈಸೂರಿನ ಸುಣ್ಣದಕೇರಿ ಮಹದೇಶ್ವರ ಸ್ವಾಮಿ ದೇವಾಲಯದಲ್ಲಿ ಮಾಜಿ ಕಾರ್ಪೊರೇಟರ್ ಲೋಕೇಶ್ ಪಿಯಾ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿತು.

ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಬಹುಕೋಟಿ ಅಕ್ರಮ ನಡೆದಿದೆ ಎಂದು ಡೆತ್‌ನೋಟ್ ಬರೆದು ಆತ್ಮಹತ್ಯೆ ಮಾಡಿಕೊಂಡ ಅಧಿಕಾರಿ ಚಂದ್ರಶೇಖರ್ ಪ್ರಕರಣ ಸಂಬಂಧ ಬಿಜೆಪಿ ನಾಯಕರು ವಾಗ್ದಾಳಿ ನಡೆಸುತ್ತಿದ್ದು, ಸಚಿವ ಬಿ. ನಾಗೇಂದ್ರ ರಾಜೀನಾಮೆ ನೀಡಬೇಕೆಂದು ಬಿ.ವೈ. ವಿಜಯೇಂದ್ರ ಒತ್ತಾಯಿಸುತ್ತಿರುವುದು ಖಂಡನೀಯ ಎಂದು ಪ್ರತಿಭಟನಾಕಾರರು ವಿಜಯೇಂದ್ರ ವಿರುದ್ಧ ಧಿಕ್ಕಾರ ಕೂಗಿದರು.

ಸರ್ಕಾರ ತಪ್ಪು ಮಾಡಿರುವವರ ವಿರುದ್ಧ ತನಿಖೆ ನಡೆಸಿ ಶಿಕ್ಷೆ ನೀಡುತ್ತದೆ ಎಂದು ನಾಗೇಂದ್ರ ಹೇಳಿದ್ದರೂ ಕೂಡ ಉದ್ದೇಶಪೂರ್ವಕವಾಗಿ ಅವರನ್ನು ವಿಜಯೇಂದ್ರ ಟಾರ್ಗೆಟ್ ಮಾಡುತ್ತಿದ್ದಾರೆ, ಇದು ಖಂಡನೀಯ. ನಾಯಕ ಸಮುದಾಯವನ್ನು ಹತ್ತಿಕ್ಕುವ ಪ್ರಯತ್ನ ಮಾಡುತ್ತಿರುವ ಬಿ.ವೈ. ವಿಜಯೇಂದ್ರ ರಾಜೀನಾಮೆ ನೀಡಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಕಾರಿನ ಕಿಟಕಿ ಗಾಜು ಒಡೆದು ಚಿನ್ನಾಭರಣ, ಪರ್ಸ್ ಕಳವು

ಮೈಸೂರು, ಮೇ 29– ಕಾರ್‌ನ ಗಾಜು ಒಡೆದು ಚಿನ್ನಾಭರಣ ಹಾಗೂ ನಗದು ಇದ್ದ ಪರ್ಸ್ ಅನ್ನು ಕಳವು ಮಾಡಿರುವ ಘಟನೆ ಮೈಸೂರಿನ ರಾಮಕೃಷ್ಣನಗರ ಇ ಅಂಡ್ ಎಫ್ ಬ್ಲಾಕ್‌ನಲ್ಲಿರುವ ಸಾಯಿಬಾಬಾ ದೇವಸ್ಥಾನದ ಮುಂಭಾಗ ನಡೆದಿದೆ.

ರಾಮಕೃಷ್ಣನಗರ ಇ ಅಂಡ್ ಎಫ್ ಬ್ಲಾಕ್ ನಿವಾಸಿ ವೀರೇಶ್ ನಾಗಡಗೌಡರ್ (34) ಚಿನ್ನಾಭರಣ ಕಳೆದುಕೊಂಡವರಾಗಿದ್ದು, ಇವರು ಮೇ 25ರಂದು ರಾತ್ರಿ 8 ಗಂಟೆ ಸುಮಾರಿನಲ್ಲಿ ಸಾಯಿಬಾಬಾ ದೇವಸ್ಥಾನದ ಎದುರಿಗಿರುವ ಖಾಲಿ ಜಾಗದಲ್ಲಿ ಮಾರುತಿ ಸ್ವಿಫ್ಟ್ ಕಾರನ್ನು (ಕೆಎ 35–ಎನ್ 0189) ನಿಲ್ಲಿಸಿ ಮನೆಗೆ ಹೋಗಿದ್ದರು. ಮರುದಿನ ಬೆಳಗ್ಗೆ 7.30ರ ಸುಮಾರಿನಲ್ಲಿ ನೋಡಿದಾಗ ಅವರ ಕಾರಿನ ಕಿಟಕಿ ಗಾಜನ್ನು ಒಡೆದು 7.5 ಗ್ರಾಂ ತೂಕದ ಚಿನ್ನಾಭರಣ ಹಾಗೂ ಸಾವಿರ ರೂ. ನಗದು ಇದ್ದ ಪರ್ಸ್ ಅನ್ನು ಕಳವು ಮಾಡಿರುವುದು ಗೊತ್ತಾಗಿದೆ. ಅವರು ಮೇ 28ರಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಕುವೆಂಪುನಗರ ಠಾಣೆ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ವಿದ್ಯಾರಣ್ಯಪುರಂನಲ್ಲಿ ಘನತ್ಯಾಜ್ಯ ವಿಲೇವಾರಿ ವಿಚಾರ

ಟೆಂಡರ್ ಪ್ರಕ್ರಿಯೆ ವಿರುದ್ಧ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ

ವರದಿ ಸಲ್ಲಿಸಲು ಅಧಿಕಾರಿ ನಿಯೋಜಿಸುವಂತೆ ಪಾಲಿಕೆ ಆಯುಕ್ತರಿಗೆ ನಿರ್ದೇಶನ

ಮೈಸೂರು, ಮೇ 29(ಆರ್‌ಕೆ)- ವಿದ್ಯಾರಣ್ಯಪುರಂನಲ್ಲಿರುವ ಘನತ್ಯಾಜ್ಯ ವಿಲೇವಾರಿಗೆ ಕೈಗೊಂಡಿರುವ ಟೆಂಡರ್ ಪ್ರಕ್ರಿಯೆ ಸಂಬಂಧ ದಾಖಲೆ ಸಮೇತ ಮಾಹಿತಿ ಒದಗಿಸಲು ಅನುಭವವುಳ್ಳ ಅಧಿಕಾರಿ ನಿಯೋಜಿಸುವಂತೆ ನಗರಾಭಿವೃದ್ಧಿ ಇಲಾಖೆ ಸ್ವಚ್ಛ ಭಾರತ ಮಿಷನ್ ನಿರ್ದೇಶಕರು, ಮೈಸೂರು ನಗರಪಾಲಿಕೆ ಆಯುಕ್ತರಿಗೆ ನಿರ್ದೇಶನ ನೀಡಿದ್ದಾರೆ.

ಬೆಂಗಳೂರಿನ ಮೆ. ಎಂ.ಎಸ್. ಜಾತಿನ ಇನ್‌ಫ್ರಾ ಪ್ರೈ ಲಿ. ಅವರು ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ಹಾಗೂ ಇತರರ ವಿರುದ್ಧ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿರುವ ಹಿನ್ನೆಲೆಯಲ್ಲಿ ಸ್ವಚ್ಛ ಭಾರತ ಮಿಷನ್ ರಾಜ್ಯ ನಿರ್ದೇಶಕರು 2024ರ ಏಪ್ರಿಲ್ 20 ರಂದು ಮೈಸೂರು ಮಹಾನಗರಪಾಲಿಕೆ ಆಯುಕ್ತರಿಗೆ ಪತ್ರ ಬರೆದಿದ್ದಾರೆ.

ಘನತ್ಯಾಜ್ಯ ವಿಂಗಡಣೆ, ವಿಲೇವಾರಿ, ಮರು ಬಳಕೆ ಸಂಬಂಧ ಟೆಂಡರ್ ಕರೆದಿರುವ ಬಗ್ಗೆ ದಾಖಲೆ ಸಮೇತ ಮಾಹಿತಿ ಒದಗಿಸಲು ಓರ್ವ ಅನುಭವಿ ಅಧಿಕಾರಿ ನೇಮಿಸುವಂತೆ ಮೈಸೂರು ನಗರಪಾಲಿಕೆ ಆಯುಕ್ತರಿಗೆ ಬರೆದಿರುವ ಪತ್ರದಲ್ಲಿ ತಿಳಿಸಲಾಗಿದೆ. ನಿಯೋಜಿತ ಅಧಿಕಾರಿಯು ಅಗತ್ಯ ದಾಖಲೆ ಪತ್ರಗಳೊಂದಿಗೆ ಸಮಗ್ರ ವರದಿಯನ್ನು ಸಲ್ಲಿಸಬೇಕೆಂದು ಸ್ವಚ್ಛ ಭಾರತ ಮಿಷನ್ ರಾಜ್ಯ ನಿರ್ದೇಶಕರು ನಿರ್ದೇಶನ ನೀಡಿದ್ದಾರೆ.

ಕೇರಳದಲ್ಲಿ ಮೇಘ ಸ್ಫೋಟ: 1 ಗಂಟೆಯಲ್ಲೇ 103 ಮಿ.ಮೀ. ಮಳೆ; 6 ಸಾವು!

ಮುಂದಿನ 24 ಗಂಟೆಯಲ್ಲಿ ಮುಂಗಾರು ಆರ್ಭಟ



ಕೊಚ್ಚಿ, ಮೇ 29- ಕೇರಳದಲ್ಲಿ ಮುಂಗಾರು ಪ್ರವೇಶಕ್ಕೆ ಕ್ಷಣಗಣನೆ ಆರಂಭವಾಗಿರುವಂತೆಯೇ ಕೊಚ್ಚಿಯಲ್ಲಿ ಮೇಘ ಸ್ಫೋಟ ಸಂಭವಿಸಿದ್ದು, ಕೇವಲ 1 ಗಂಟೆ ಅವಧಿಯಲ್ಲಿ ಬರೊಬ್ಬರಿ 103 ಮಿ.ಮೀ ಮಳೆ ಸುರಿದ ಪರಿಣಾಮ ಭಾರಿ ಪ್ರವಾಹ ಪರಿಸ್ಥಿತಿ ಏರ್ಪಟ್ಟಿದೆ.

ಮುಂದಿನ 24 ಗಂಟೆಗಳಲ್ಲಿ ಕೇರಳದ ಮೇಲೆ ಮಾನ್ಸೂನ್ ಆರಂಭಕ್ಕೆ ಪರಿಸ್ಥಿತಿಗಳು ಅನುಕೂಲಕರವಾಗಿ ಮುಂದುವರಿಯುತ್ತದೆ ಮತ್ತು ಅದೇ ಅವಧಿಯಲ್ಲಿ ಈಶಾನ್ಯ ರಾಜ್ಯಗಳ ಕೆಲವು ಭಾಗಗಳಲ್ಲಿ ಮಾನ್ಸೂನ್ ಮಳೆ ಮುಂದುವರಿಯುತ್ತದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.

ಈ ನಡುವೆ ಕೇರಳದ ಕೊಚ್ಚಿಯಲ್ಲಿ ಮೇಘ ಸ್ಫೋಟ ಸಂಭವಿಸಿದ್ದು, ಇಲ್ಲಿ ಕೇವಲ 1 ಗಂಟೆ ಅವಧಿಯಲ್ಲಿ ಬರೊಬ್ಬರಿ 103 ಮಿ.ಮೀ ಮಳೆ ಸುರಿದ ಪರಿಣಾಮ ಭಾರಿ ಪ್ರವಾಹ ಪರಿಸ್ಥಿತಿ ಏರ್ಪಟ್ಟಿದೆ. ಕೊಚ್ಚಿನ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದ ಮಳೆ ಮಾಪಕದಲ್ಲಿ ಮಂಗಳವಾರ ಬೆಳಗ್ಗೆ ಕೇವಲ ಒಂದು ಗಂಟೆಯಲ್ಲಿ ಸುಮಾರು 103 ಮಿಮೀ ಮಳೆ ದಾಖಲಾಗಿದೆ. ಈ ಪರಿ ಮಳೆಗೆ ಮೇಘ ಸ್ಫೋಟವೇ ಕಾರಣ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಅಂತೆಯೇ ರಾಜ್ಯದಲ್ಲಿ ಯಾವುದೇ ಮೇಘ ಸ್ಫೋಟವನ್ನು ಹವಾಮಾನ ಇಲಾಖೆ ದೃಢಪಡಿಸಿಲ್ಲವಾದರೂ ಒಂದು ಗಂಟೆಯಲ್ಲಿ 103 ಮಿಮೀ ಮಳೆಯನ್ನು ದಾಖಲಿಸುವುದು ಸಾಮಾನ್ಯವಾಗಿ ಮೇಘ ಸ್ಫೋಟದ ಘಟನೆ ಎಂದು ವರ್ಗೀಕರಿಸುತ್ತದೆ ಎಂದು ಹೇಳಿದೆ.

6 ಮಂದಿ ಸಾವು: ಕೊಚ್ಚಿ ಸೇರಿದಂತೆ ಕೇರಳದ ಹಲವು ಜಿಲ್ಲೆಗಳಲ್ಲಿ ಭಾರೀ ಮಳೆಯಿಂದಾಗಿ ಪ್ರವಾಹ ಏರ್ಪಟ್ಟಿದ್ದು, ಜನಜೀವನ ಅಸ್ತವ್ಯಸ್ತಗೊಂಡಿದೆ. ಕೋಟಾಯಂ ಜಿಲ್ಲೆಯ ಭರಣಂಜಾನಂ ಬಳಿ ಭೂಕುಸಿತ ಸಂಭವಿಸಿದ್ದು, ಇಲ್ಲಿ ಜೀವ ಹಾನಿ ಕುರಿತು ವರದಿಯಾಗಿಲ್ಲ. ಇಲ್ಲಿ ಹಲವು ಮನೆಗಳು ಸಂಪೂರ್ಣವಾಗಿ ನಾಶಗೊಂಡಿವೆ.

ಕೇರಳದಾದ್ಯಂತ ಮಳೆ ಸಂಬಂಧಿ ದುರಂತಗಳಲ್ಲಿ 6 ಮಂದಿ ಸಾವನ್ನಪ್ಪಿದ್ದು, ತಿರುವನಂತಪುರದಲ್ಲಿ ಇಬ್ಬರು ಮೃತಪಟ್ಟಿದ್ದಾರೆ. ಕಾಸರಗೋಡು, ಆಲಪ್ಪುಳ, ಎರ್ನಾಕುಳಂ ಮತ್ತು ಕೋಟಾಯಂ ಜಿಲ್ಲೆಗಳಲ್ಲಿ ತಲಾ ಒಬ್ಬರು ಜೀವ ಕಳೆದುಕೊಂಡಿದ್ದಾರೆ.

ಜೂ.16, 17, ಅಂತರಶಾಲಾ ಕಾಲೇಜು ಕ್ರೀಡಾಕೂಟ

ಮೈಸೂರು, ಮೇ 29- ಮೈಸೂರಿನ ಕುವೆಂಪುನಗರದ ಪ್ರಮತಿ ಹಿಲ್‌ವ್ಯೂ ಅಕಾಡೆಮಿಯು ನಗರದ ಶಾಲಾ ಕಾಲೇಜಿನ ಸಿಬ್ಬಂದಿಗೆ ಮೈಸೂರು ವಿಶ್ವವಿದ್ಯಾನಿಲಯದ ಸ್ಪೋರ್ಟ್ಸ್ ಪೆವಿಲಿಯನ್ ಮೈದಾನದಲ್ಲಿ ಜೂ.16 ಮತ್ತು 17 ರಂದು ಅಂತರಶಾಲಾ ಕಾಲೇಜು ಕ್ರೀಡಾಕೂಟವನ್ನು ಏರ್ಪಡಿಸಲಾಗಿದೆ. ಪುರುಷರಿಗಾಗಿ 'ಪ್ರಮತಿ ಕ್ರಿಕೆಟ್ ಕಪ್' ಹಾಗೂ ಮಹಿಳಾ ಸಿಬ್ಬಂದಿಗೆ 'ಪ್ರಮತಿ ಥ್ರೋಬಾಲ್ ಕಪ್' ನಡೆಸಲಾಗುವುದು. ಮೊದಲು ಬಂದ 20 ತಂಡಗಳಿಗೆ ಅವಕಾಶವಿದ್ದು, ಆಸಕ್ತರು ಮೇ 30ರೊಳಗೆ ತಮ್ಮ ತಂಡವನ್ನು ನೋಂದಾಯಿಸಿಕೊಳ್ಳಲು ಕೋರಲಾಗಿದೆ. ಮಾಹಿತಿಗೆ ಮೊ.88928 27648, 9380608774 ಸಂಪರ್ಕಿಸಬಹುದು.

ಡಿಪ್ಲೊಮಾ ಕೋರ್ಸ್‌ಗೆ ಅರ್ಜಿ ಆಹ್ವಾನ

ಮೈಸೂರು, ಮೇ 29-ಕೇಂದ್ರೀಯ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆ(ಸಿಪೆಟ್) 2024-25ನೇ ಸಾಲಿನ ಉದ್ಯೋಗಾಧಾರಿತ ಮತ್ತು ಉದ್ಯೋಗ ಖಚಿತ ಡಿಪ್ಲೊಮಾ ಕೋರ್ಸ್‌ಗಳ ಪ್ರವೇಶಕ್ಕೆ ಆನ್‌ಲೈನ್ ಮತ್ತು ಆಫ್‌ಲೈನ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ (ವಿಜ್ಞಾನ) ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳು 3 ವರ್ಷದ ಡಿಪ್ಲೊಮಾ ಇನ್ ಪ್ಲಾಸ್ಟಿಕ್ಸ್ ಟೆಕ್ನಾಲಜಿ (DPT), ಡಿಪ್ಲೊಮಾ ಇನ್ ಪ್ಲಾಸ್ಟಿಕ್ಸ್ ಮೌಲ್ಡ್ ಟೆಕ್ನಾಲಜಿ (DPMT) ಕೋರ್ಸ್‌ಗಳಿಗೆ www.cipet.gov.in ವೆಬ್‌ಸೈಟ್ ಮೂಲಕ ಮೇ 31 ರೊಳಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ದೂ.ಸಂ:0821-2510618 ಅಥವಾ 9480253024, 9791431827, 9466585669 ಅನ್ನು ಸಂಪರ್ಕಿಸಬಹುದು.

ಮರಿತಿಬ್ಬೇಗೌಡರ ಪರವಾಗಿ ಕೆ.ಮರೀಗೌಡರಿಂದ ಮತಯಾಚನೆ



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಿವಿಧ ಶಾಲಾ-ಕಾಲೇಜುಗಳಲ್ಲಿ ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರ ಪರ ಮುಡಾ ಅಧ್ಯಕ್ಷ ಕೆ. ಮರೀಗೌಡ ಮತಯಾಚನೆ ನಡೆಸಿದರು.

ಮೈಸೂರು, ಮೇ 29- ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರನ್ನು ಬೆಂಬಲಿಸುವ ಮೂಲಕ ಅಧಿಕ ಮತಗಳ ಅಂತರದಿಂದ ಆಯ್ಕೆ ಮಾಡಲು ಶಿಕ್ಷಕರು ಸಹಕರಿಸಬೇಕೆಂದು ಮುಡಾ ಅಧ್ಯಕ್ಷ ಕೆ.ಮರೀಗೌಡ ಮನವಿ ಮಾಡಿದರು.

ಚಾಮುಂಡೇಶ್ವರಿ ಕ್ಷೇತ್ರದ ಬೀರಿಹುಂಡಿ ಸರ್ಕಾರಿ ಪ್ರೌಢಶಾಲೆ, ಗೋಪಾಲಪುರ ಪ್ರೌಢಶಾಲೆ, ಡಿ.ಸಾಲುಂಡಿ ಪ್ರೌಢಶಾಲೆ, ಕೇರ್ಗಳ್ಳಿ ಪ್ರೌಢಶಾಲೆ, ಉದ್ಬೂರು ಪ್ರೌಢಶಾಲೆಗಳಿಗೆ ಭೇಟಿ ನೀಡಿ ಮತಯಾಚಿಸಿ ಮಾತನಾಡಿದ ಅವರು, ದೇಶದಲ್ಲಿ ಸ್ವಾತಂತ್ರ್ಯ ಬಂದ ಮೇಲೆ ಶಿಕ್ಷಣ ಕ್ಷೇತ್ರದಲ್ಲಿ ಮಹತ್ತರವಾದ ಬದಲಾವಣೆ ತಂದಿದ್ದು ಕಾಂಗ್ರೆಸ್ ಪಕ್ಷ. ದೇಶದಲ್ಲಿನ ಅನಕ್ಷರತೆಯನ್ನು ಕೊನೆಗಾಣಿಸಲು ಅನೇಕ ಸುಧಾರಣೆಗಳನ್ನು ತರುವ ಮೂಲಕ ಇಂಜಿನಿಯರಿಂಗ್, ಮೆಡಿಕಲ್, ತಾಂತ್ರಿಕ, ಪ್ರಾಥಮಿಕ, ಪ್ರೌಢಶಾಲೆಗಳು, ಕಾಲೇಜುಗಳನ್ನು ನಿರ್ಮಾಣ ಮಾಡುವಲ್ಲಿ ಕಾಂಗ್ರೆಸ್ ಪಕ್ಷದ ಕೊಡುಗೆ ಅಪಾರವಾಗಿದೆ.

ಕಡ್ಡಾಯ ಶಿಕ್ಷಣ, ಮಹಿಳೆಯರಿಗೆ ಉಚಿತ ಶಿಕ್ಷಣ, ಆರ್‌ಟಿಇ ಕಾಯ್ದೆ, ಶಿಕ್ಷಕರ ನೇಮಕಕ್ಕೆ ಬೇಕಾದ ಸೌಲಭ್ಯ, 6ನೇ ವೇತನ ಆಯೋಗದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸರ್ಕಾರಿ ನೌಕರರಿಗೆ ಶೇ.30ರಷ್ಟು ವೇತನ ಹೆಚ್ಚು ಮಾಡಿದ್ದು, 7ನೇ ವೇತನದ ಆಯೋಗ ರಚನೆ, ಅದರ ಶಿಫಾರಸು ಜಾರಿ ಭರವಸೆ, ಹಳೇ ಪಿಂಚಣಿ ವ್ಯವಸ್ಥೆ ಜಾರಿಯ ಬಗ್ಗೆಯೂ ಮುಖ್ಯಮಂತ್ರಿಗಳು ಚಿಂತನೆ ನಡೆಸುತ್ತಿದ್ದು, ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಸ್ಪಂದಿಸುವ ಕೆಲಸವನ್ನು ಸರ್ಕಾರ ಮಾಡುತ್ತಿದೆ. 24 ವರ್ಷಗಳಿಂದ ಮೇಲ್ಮನೆ ಸದಸ್ಯರಾಗಿ ಶಿಕ್ಷಕರು ಮತ್ತು ಶಿಕ್ಷಣ ಕ್ಷೇತ್ರದ ಸಮಸ್ಯೆಗಳತ್ತ ಸರ್ಕಾರದ ಗಮನಸೆಳೆದು ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನಿಸುತ್ತಿರುವ ಸರಳ ವ್ಯಕ್ತಿ ಮರಿತಿಬ್ಬೇಗೌಡರಿಗೆ ಪ್ರಥಮ ಪ್ರಾಶಸ್ತ್ಯದ ಮತವನ್ನು ನೀಡಿ ಆಯ್ಕೆ ಮಾಡಬೇಕೆಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಮುಖ್ಯ ಶಿಕ್ಷಕಿ, ಸುಧಾ, ಮುರಳಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಬಿ.ಗುರುಸ್ವಾಮಿ, ಜೆ.ಸತೀಶ್‌ಕುಮಾರ್, ಜಿ.ಕೆ.ಬಸವಣ್ಣ, ಬಿ.ರವಿ, ಪ್ರಕಾಶ್ ಇನ್ನಿತರರು ಹಾಜರಿದ್ದರು.

ಮರಿತಿಬ್ಬೇಗೌಡರ ಬೆಂಬಲಿಸುವಂತೆ ಮನವಿ

ಮೈಸೂರು, ಮೇ 29(ಜಿಎ)-ವಿಧಾನಪರಿಷತ್ ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರು ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಶಿಕ್ಷಣ ಕ್ಷೇತ್ರದ ಸಮಸ್ಯೆ ಬಗೆಹರಿಸಲು ಸಾಕಷ್ಟು ಶ್ರಮಿಸಿದ್ದಾರೆ. ಆದ್ದರಿಂದ ಕ್ಷೇತ್ರದ ಮತದಾರರು ಮತ್ತೆ ಇವರನ್ನು ಆಯ್ಕೆ ಮಾಡುವ ಮೂಲಕ ಸಮಸ್ಯೆಗೆ ಬಗೆಹರಿಸಲು ನೆರವಾಗಬೇಕೆಂದು ನಗರ ಕಾಂಗ್ರೆಸ್ ಸಮಿತಿ ವಕ್ತಾರ ರಾಜೇಶ್ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಕೂಡಲೇ ಗ್ಯಾರಂಟಿಗಳ ಅನುಷ್ಠಾನದ ಮೂಲಕ ಜನತೆಗೆ ನೆರವಾಗಿದೆ. ಇನ್ನೂ 4 ವರ್ಷ ಹಾಗೂ ನಂತರವೂ ಅಧಿಕಾರದಲ್ಲಿ ಮುಂದುವರಿಯಲಿದೆ. ಇದೇ ವೇಳೆ ಮರಿತಿಬ್ಬೇಗೌಡರು ಸಹ ಶಿಕ್ಷಣ ಕ್ಷೇತ್ರಕ್ಕಾಗಿ ಸಾಕಷ್ಟು ಶ್ರಮಿಸಿದ್ದಾರೆ. ಈಗಾಗಿ ಮತದಾರರು ಇವರನ್ನು ಬೆಂಬಲಿಸಬೇಕು. ಡಾ.ಯತೀಂದ್ರ ಅವರನ್ನು ಪರಿಷತ್‌ಗೆ ಕಳುಹಿಸಿಕೊಡುವ ಮೂಲಕ ಈ ಭಾಗದ ಇನ್ನಷ್ಟು ಅಭಿವೃದ್ಧಿಗೆ ನೆರವಾಗಬೇಕೆಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ವಕ್ತಾರ ಶ್ರೀನಿವಾಸ್, ನಟರಾಜ್, ಲೋಕನಾಥ್‌ಗೌಡ ಉಪಸ್ಥಿತರಿದ್ದರು.

ವೈದ್ಯರಂತೆ ನರ್ಸ್‌ಗಳ ಸೇವೆಯೂ ಅತ್ಯಂತ ಅವಶ್ಯ

ಅಪೋಲೋ ಬಿಜಿಎಸ್ ನರ್ಸಿಂಗ್ ಕಾಲೇಜಲ್ಲಿ ಅಂತರರಾಷ್ಟ್ರೀಯ ನರ್ಸಸ್ ದಿನಾಚರಣೆ

ಮೈಸೂರು, ಮೇ 29(ಎಂಟಿವೈ)-ರೋಗಿಗಳ ಆರೋಗ್ಯ ಚೇತರಿಕೆಯಲ್ಲಿ ನರ್ಸ್‌ಗಳ ಪಾತ್ರ ಬಹುಮುಖ್ಯವಾಗಿದ್ದು, ಕರ್ತವ್ಯದ ವೇಳೆ ರೋಗಿಗಳೊಂದಿಗೆ ಸೌಹಾರ್ದಯುತವಾಗಿ ವರ್ತಿಸುವಂತೆ ಅಪೋಲೋ ಬಿಜಿಎಸ್ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಅಮನ್ ನಾಯಕ್ ಸಲಹೆ ನೀಡಿದ್ದಾರೆ.

ಮೈಸೂರಿನ ಕುವೆಂಪುನಗರದ ಆದಿಚುಂಚನಗಿರಿ ರಸ್ತೆಯಲ್ಲಿರುವ ಅಪೋಲೋ ಬಿಜಿಎಸ್ ನರ್ಸಿಂಗ್ ಕಾಲೇಜು ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ಅಂತರರಾಷ್ಟ್ರೀಯ ನರ್ಸಸ್ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮೈಸೂರು ಸೇರಿದಂತೆ ವಿದೇಶದಲ್ಲಿಯೂ ನರ್ಸ್‌ಗಳ ಸೇವೆ ಮಹತ್ವ ಪಡೆದಿದೆ. ಆಸ್ಪತ್ರೆಗಳಲ್ಲಿ ಚಿಕಿತ್ಸೆಗಾಗಿ ದಾಖಲಾಗಿರುವ ರೋಗಿಗಳ ಆರೋಗ್ಯ ಚೇತರಿಕೆಯಲ್ಲಿ ವೈದ್ಯರ ಪಾತ್ರ ಎಷ್ಟು ಮುಖ್ಯವೋ, ನರ್ಸ್‌ಗಳ ಸೇವೆಯೂ ಅಷ್ಟೇ ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ನರ್ಸ್‌ಗಳು ಬದ್ಧತೆಯಿಂದ ಕಾರ್ಯ ನಿರ್ವಹಿಸಬೇಕು ಎಂದು ಸಲಹೆ ನೀಡಿದರು.

ಅನಾರೋಗ್ಯ ಹಾಗೂ ವಿವಿಧ ಕಾರಣಕ್ಕೆ ಆಸ್ಪತ್ರೆಗಳಲ್ಲಿ ಒಳರೋಗಿಗಳಾಗಿ ದಾಖಲಾಗುವವರಿಗೆ ವೈದ್ಯರು ಚಿಕಿತ್ಸೆ ನೀಡುತ್ತಾರೆ. ಆದರೆ, ರೋಗಿಗಳೊಂದಿಗೆ ಹೆಚ್ಚು ಸಮಯ ಕಳೆಯುವುದು ನರ್ಸ್‌ಗಳೇ ಆಗಿದ್ದಾರೆ. ಔಷಧೋಪಚಾರ ಮಾಡುವ ಸಂದರ್ಭದಲ್ಲಿ ತಾಳ್ಮೆ ಅಗತ್ಯ. ಕೆಲವು ಸಂದರ್ಭದಲ್ಲಿ ನೋವು ಹಾಗೂ ಇತರ ಕಾರಣಗಳಿಂದ ರೋಗಿಗಳು ಬೇಸರಪಡಬಹುದು. ಅದರಿಂದ ತಾಳ್ಮೆ ಕಳೆದುಕೊಳ್ಳಬಾರದು. ಸೇವಾ ಮನೋಭಾವದಿಂದ ರೋಗಿಗಳ ವಿಶ್ವಾಸ ಗಳಿಸಿ ಕರ್ತವ್ಯ ನಿರ್ವಹಿಸಿ. ನರ್ಸಿಂಗ್ ಹುದ್ದೆ ಮಹತ್ತರವಾದ ಸೇವಾ ಕ್ಷೇತ್ರ ಅದಕ್ಕೆ ತಕ್ಕಂತೆ ಸೇವೆ ಸಲ್ಲಿಸುವ ಮೂಲಕ ಪ್ರಶಂಸೆಗೆ ಪಾತ್ರರಾಗುವಂತೆ ಕರೆ ನೀಡಿದರು.

ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಆಶೀರ್ವಚನ ನೀಡಿದರು. ಕಾರ್ಯಕ್ರಮದಲ್ಲಿ ಅಂತರರಾಷ್ಟ್ರೀಯ ನರ್ಸಿಂಗ್ ಡೇ ಅಂಗವಾಗಿ ಆಯೋಜಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಜಯದೇವ ಹೃದ್ರೋಗ ಆಸ್ಪತ್ರೆಯ ಶುಶ್ರೂಷಕ ಅಧೀಕ್ಷಕಿ ಕೆ.ಯೋಗಲಕ್ಷ್ಮಿ, ರೈಲ್ವೆ ಆಸ್ಪತ್ರೆಯ ನರ್ಸಿಂಗ್ ಮುಖ್ಯ ಅಧೀಕ್ಷಕ ಕೆ.ಬಿ.ಆನಂದ್, ಭಾರತ್ ಕ್ಯಾನ್ಸರ್ ಆಸ್ಪತ್ರೆಯ ನರ್ಸಿಂಗ್ ಅಧೀಕ್ಷಕಿ ಪಿ.ಎಸ್.ಪ್ರೇಮ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಕೆವಿಸಿ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಡಾ.ದೀಪಕ್ ಬಿ.ಗೌಡ ಹಾಗೂ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರು ಕುವೆಂಪುನಗರದ ಆದಿಚುಂಚನಗಿರಿ ರಸ್ತೆಯಲ್ಲಿರುವ ಅಪೋಲೋ ಬಿಜಿಎಸ್ ನರ್ಸಿಂಗ್ ಕಾಲೇಜಿನ ಸಭಾಂಗಣದಲ್ಲಿ ಆಯೋಜಿಸಿದ್ದ ಅಂತರರಾಷ್ಟ್ರೀಯ ನರ್ಸಸ್ ದಿನಾಚರಣೆ ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಜಯದೇವ ಹೃದ್ರೋಗ ಆಸ್ಪತ್ರೆಯ ಶುಶ್ರೂಷಕ ಅಧೀಕ್ಷಕರಾದ ಕೆ.ಯೋಗಲಕ್ಷ್ಮಿ, ಭಾರತ್ ಕ್ಯಾನ್ಸರ್ ಆಸ್ಪತ್ರೆಯ ನರ್ಸಿಂಗ್ ಅಧೀಕ್ಷಕರಾದ ಪಿ.ಎಸ್.ಪ್ರೇಮ, ರೈಲ್ವೆ ಆಸ್ಪತ್ರೆಯ ನರ್ಸಿಂಗ್ ಮುಖ್ಯ ಅಧೀಕ್ಷಕ ಕೆ.ಬಿ.ಆನಂದ್ ಅವರನ್ನು ಸನ್ಮಾನಿಸಿದರು.

ಡಾ.ವಿಜಯಕುಮಾರ್‌ಗೆ ಎಂಎಲ್‌ಸಿ ಸ್ಥಾನ ನೀಡುವಂತೆ ಮನವಿ



ಮೈಸೂರು, ಮೇ 29-ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಅವರಿಗೆ ಎಂಎಲ್‌ಸಿ ಸ್ಥಾನ ಕಲ್ಪಿಸುವಂತೆ ನೆಹರು ಯುವ ಪ್ರಶಸ್ತಿ ವಿಜೇತ ಎಸ್.ಟಿ.ಓಂಕಾರ್ ಜೈನ್ ಮನವಿ ಮಾಡಿದ್ದಾರೆ. ಪತ್ರಿಕಾ ಹೇಳಿಕೆ ನೀಡಿರುವ ಅವರು, ಕಾಂಗ್ರೆಸ್ ಪಕ್ಷದ ಸಂಘಟನೆಗೆ ಯುವಕರನ್ನು ಪುಟಿದೇಳುವಂತೆ ಮಾಡಿದ್ದಾರೆ. ಮಂಡ್ಯ, ಮೈಸೂರು, ಹಾಸನ, ಚಾಮರಾಜನಗರ ಅಲ್ಲದೆ ಕೊಡಗು ಭಾಗದಲ್ಲೂ ತಮ್ಮ ರಾಜಕೀಯ ಛಾಪನ್ನು ಮೂಡಿಸಿದ್ದಾರೆ. ಜೊತೆಗೆ ದಲಿತ, ಹಿಂದುಳಿದ ಹಾಗೂ ಎಲ್ಲಾ ಜನಾಂಗದ ಏಳಿಗೆಗೆ ದುಡಿದಿದ್ದಾರೆ. ಹಾಗಾಗಿ ಇವರನ್ನು ವಿಧಾನಪರಿಷತ್ ಸದಸ್ಯರಾಗಿ ಆಯ್ಕೆ ಮಾಡಿದಲ್ಲಿ ಸರ್ಕಾರ ಹಾಗೂ ಪಕ್ಷಕ್ಕೆ ಹೆಚ್ಚಿನ ಶಕ್ತಿ ಬಂದಂತಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಸರ್ವೋದಯ ಮಂಡಲ ಜಿಲ್ಲಾಧ್ಯಕ್ಷರ ನಿಯೋಜನೆ

ಮೈಸೂರು, ಮೇ 29- ಕರ್ನಾಟಕ ಸರ್ವೋದಯ ಮಂಡಲ ಪ್ರಸ್ತುತ ರಾಜ್ಯದ ಬೆಂಗಳೂರು ನಗರ ಹಾಗೂ ಗ್ರಾಮಾಂತರ, ರಾಮನಗರ, ಮಂಡ್ಯ, ಮೈಸೂರು, ಚಾಮರಾಜನಗರ, ತುಮಕೂರು, ಹಾಸನ, ಚಿತ್ರದುರ್ಗ, ಕೋಲಾರ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಸಕ್ರಿಯವಾಗಿದ್ದು, ಯುವ ಜನರಲ್ಲಿ ಸರ್ವೋದಯ-ಗಾಂಧೀ ಮೌಲ್ಯಗಳ ಪ್ರಚಾರ ಮಾಡುವ ಉದ್ದೇಶದಿಂದ ಮೂರು ಜಿಲ್ಲೆಗಳಲ್ಲಿ ಅಧ್ಯಕ್ಷರ ನಿಯೋಜಿಸಲಾಗಿದೆ. ಕೊಪ್ಪಳ-ಹೊಸಪೇಟೆ ವಿಶ್ರಾಂತ ಪ್ರಾಂಶುಪಾಲ ಪಿ.ಎಸ್.ಗಿರಿರಾಜ್, ಹಾವೇರಿ-ರಾಜೇಂದ್ರ ಹೆಗಡೆ, ವಿಜಯನಗರ-ಗಂಗಾವತಿ ನಿವೃತ್ತ ಪ್ರಾಧ್ಯಾಪಕ ಡಾ.ಬಿ.ಸಿ. ಐಗೋಳ್ ಎಂದು ಪ್ರಕಟಣೆ ತಿಳಿಸಿದೆ.

ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್‌ನ ಮೈಸೂರಿನ ಶಾಖೆಯಲ್ಲಿ ಹಸಿವು ಮುಕ್ತ ಕಾರ್ಯಕ್ರಮಕ್ಕೆ ಚಾಲನೆ



ಮೈಸೂರಿನ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಶೋ ರೂಂನಲ್ಲಿ ಹಸಿವು ಮುಕ್ತ ಕಾರ್ಯಕ್ರಮಕ್ಕೆ ಕೆ.ಆರ್. ಆಸ್ಪತ್ರೆ ವೈದ್ಯಕೀಯ ಅಧೀಕ್ಷಕಿ ಡಾ.ಎಚ್.ಪಿ.ಶೋಭಾ ಚಾಲನೆ ನೀಡಿದರು. ಈ ವೇಳೆ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ದಕ್ಷಿಣ ವಲಯ ಮುಖ್ಯಸ್ಥ ಶರಫುದ್ದೀನ್, ಜೀವಧಾರ ರಕ್ತದಾನ ಕೇಂದ್ರದ ಮ್ಯಾನೇಜಿಂಗ್ ಟ್ರಸ್ಟಿ ಎಸ್.ಇ.ಗಿರೀಶ್, ಅಕ್ಷಯ ಆಹಾರ ಫೌಂಡೇಷನ್‌ನ ಡಾ.ಹೆಚ್.ಆರ್.ರಾಜೇಂದ್ರ, ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ವಿ.ಮಹೇಶ್ ಮತ್ತಿತರರು ಉಪಸ್ಥಿತರಿದ್ದರು.

ದಕ್ಷಿಣ ಶಿಕ್ಷಕರ ಕ್ಷೇತ್ರದ ಬಿಜೆಪಿ-ಜೆಡಿಎಸ್ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದ ಪರ ಮುಖಂಡರಿಂದ ಮತಯಾಚನೆ





ದಕ್ಷಿಣ ಶಿಕ್ಷಕರ ಕ್ಷೇತ್ರದ ಬಿಜೆಪಿ-ಜೆಡಿಎಸ್ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದ ಪರ 44ನೇ ವಾರ್ಡ್‌ನ ಬೋಗಾದಿ ಎರಡನೇ ಹಂತದಲ್ಲಿರುವ ಅಮೃತನಂದಮಯಿ ವಿದ್ಯಾಲಯದಲ್ಲಿ ಮತಯಾಚಿಸಲಾಯಿತು. ಈ ಸಂದರ್ಭದಲ್ಲಿ ಪಾಲಿಕೆ ಮಾಜಿ ಸದಸ್ಯೆ ಸವಿತಾ ಸುರೇಶ್, ಕೋ-ಆಪರೇಟಿವ್ ಬ್ಯಾಂಕ್ ಮಾಜಿ ಅಧ್ಯಕ್ಷ ಉಮಾಶಂಕರ್, ಮುಖಂಡರಾದ ಸುರೇಶ್, ಶೇಖರ್ ಇನ್ನಿತರಿದ್ದರು. ಬಲಚಿತ್ರದಲ್ಲಿ ಚಾಮರಾಜ ಕ್ಷೇತ್ರ ವ್ಯಾಪ್ತಿಯ ವಿದ್ಯಾಸಂಸ್ಥೆಗಳಲ್ಲಿ ನಗರ ಬಿಜೆಪಿ ಉಪಾಧ್ಯಕ್ಷ ಕೆ.ಸೋಮಶೇಖರರಾಜು, ಪಾಲಿಕೆ ಮಾಜಿ ಸದಸ್ಯರಾದ ಎಂ.ಚಿಕ್ಕವೆಂಕಟು, ಎಲ್.ಜಗದೀಶ್, ರಾಜ್ಯ ಪರಿಷತ್ ಸದಸ್ಯ ನಂಜಪ್ಪ, ಆಶ್ರಯ ಸಮಿತಿ ಮಾಜಿ ಸದಸ್ಯ ಮಹೇಶ್, ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ನಿರ್ದೇಶಕ ಎಸ್.ಕೃಷ್ಣಕುಮಾರ್, ಧನರಾಜ್, ವೇಣು, ರಾಜು, ಛಾಯಾ ಪ್ರಸಾದ್, ದಿನೇಶ್ ಇತರರು ವಿವೇಕಾನಂದ ಪರ ಮತಯಾಚಿಸಿದರು.

ಮೇಜರ್ ಸರ್ಜರಿ ಇಲ್ಲದೆಯೂ ವಯೋವೃದ್ಧರಿಗೆ ಟಿಎವಿಐ ಯಶಸ್ವಿ ಅಳವಡಿಕೆ

ಜಯದೇವ ವೈದ್ಯರ ಸಾಧನೆ



ಮೈಸೂರು ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಮೆಟ್ರಾನಿಕ್ ಸೆಲ್ಫ್ ಎಕ್ಸ್‌ಪೆಂಡಿಂಗ್ ಅಯೋರ್ಟಿಕ್ ಕವಾಟವನ್ನು (ಟಿಎವಿಐ) ಶಸ್ತ್ರಚಿಕಿತ್ಸೆ ಇಲ್ಲದೆ ಅಳವಡಿಸಿರುವ ರೋಗಿಯೊಂದಿಗೆ ಜಯದೇವ ಆಸ್ಪತ್ರೆ ವೈದ್ಯರ ತಂಡ.

ಮೈಸೂರು, ಮೇ 29(ಎಂಟಿವೈ)- ಮೈಸೂರು ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ರೋಗಿಯೊಬ್ಬರ ಹೃದಯಕ್ಕೆ ಇದೇ ಮೊದಲ ಬಾರಿಗೆ ಮೆಟ್ರಾನಿಕ್ ಸೆಲ್ಫ್ ಎಕ್ಸ್‌ಪೆಂಡಿಂಗ್ ಅಯೋರ್ಟಿಕ್ ಕವಾಟವನ್ನು (ಟಿಎವಿಐ) ಹೃದಯ ಶಸ್ತ್ರಚಿಕಿತ್ಸೆ ಇಲ್ಲದೆ ಯಶಸ್ವಿಯಾಗಿ ಅಳವಡಿಸಲಾಗಿದೆ ಎಂದು ಮೈಸೂರು ಜಯದೇವ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಕೆ.ಎಸ್.ಸದಾನಂದ್ ತಿಳಿಸಿದ್ದಾರೆ.

ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಟಿಎವಿಐ ಚಿಕಿತ್ಸೆಗೆ ಒಳಗಾದ ರೋಗಿಯೊಂದಿಗೆ ಪತ್ರಕರ್ತರಿಗೆ ಮಾಹಿತಿ ನೀಡಿದ ಅವರು, ಕೊಳ್ಳೇಗಾಲದ 81 ವರ್ಷದ ನಿವೃತ್ತ ಉಪನ್ಯಾಸಕ ಚನ್ನಮಾದೇಗೌಡರಿಗೆ ಜಯದೇವ ಆಸ್ಪತ್ರೆ ವೈದ್ಯರಾದ ಡಾ.ಬಿ. ದಿನೇಶ್, ಡಾ.ಪ್ರಶಾಂತ್ ದ್ವಿವೇದಿ ನೇತೃತ್ವದ ತಂಡ ಯಶಸ್ವಿಯಾಗಿ ಅಯೋರ್ಟಿಕ್ ಕವಾಟವನ್ನು ಅಳವಡಿಸಿದೆ. ಸಾಮಾನ್ಯವಾಗಿ ಈ ಸಮಸ್ಯೆಗೆ ತೆರೆದ ಹೃದಯ ಚಿಕಿತ್ಸೆ ಮಾಡಬೇಕಾಗುತ್ತದೆ. ಆದರೆ ವಯಸ್ಸಾದವರು, ತೆರೆದ ಹೃದಯ ಶಸ್ತ್ರಚಿಕಿತ್ಸೆ ಮಾಡಲಾಗದವರಿಗೆ ತೊಡೆಯ ರಕ್ತನಾಳದ ಮೂಲಕ ಅಯೋರ್ಟಿಕ್ ಕವಾಟವನ್ನು ಹೃದಯಕ್ಕೆ ಜೋಡಿಸಲಾಗುತ್ತದೆ. ಈ ಚಿಕಿತ್ಸೆಗೆ 16 ಲಕ್ಷ ರೂ. ವೆಚ್ಚವಾಗುತ್ತದೆ. ಇದರಲ್ಲಿ 1 ಲಕ್ಷ ರೂ. ರಿಯಾಯಿತಿ ನೀಡಲಾಗಿದೆ ಎಂದು ತಿಳಿಸಿದರು.

ವೈದ್ಯ ಡಾ.ಬಿ.ದಿನೇಶ್ ಮಾತನಾಡಿ, ಈ ಶಸ್ತ್ರಚಿಕಿತ್ಸೆಯಿಂದ ಎದೆಯ ಮೇಲೆ ಯಾವುದೇ ತರಹದ ಗಾಯಗಳಾಗುವುದಿಲ್ಲ. ಮೂರೇ ದಿನದಲ್ಲಿ ಸಾಮಾನ್ಯರಂತೆ ಓಡಾಡಬಹುದು. ಈ ಚಿಕಿತ್ಸೆ ರೋಗಿಗಳಿಗೆ ವರದಾನವಾಗಿದೆ. ಇನ್ಶೂರೆನ್ಸ್, ಇಎಸ್‌ಐ, ಸಿಜಿಹೆಚ್‌ಎಸ್ ಲಭ್ಯವಿರುವ ರೋಗಿಗಳು ಇದರ ಅನುಕೂಲವನ್ನು ಸದುಪಯೋಗಪಡಿಸಿಕೊಳ್ಳಬಹುದು ಎಂದರು.

ಈ ಸಂದರ್ಭದಲ್ಲಿ ಯಶಸ್ವಿ ಚಿಕಿತ್ಸೆ ನಡೆಸಿದ ತಂಡದ ವೈದ್ಯರಾದ ಡಾ.ವೈ.ಎಸ್. ಶ್ರೀಮಂತ್, ಡಾ.ಜೆ.ಸ್ನೇಹಲ್, ಡಾ.ಭಾರತಿ, ಡಾ.ನಿಶ್ಚಿತ್, ಡಾ.ಮಧುಪ್ರಕಾಶ್, ಡಾ.ಚಂದನ್, ಡಾ.ಮಿಥುನ್, ಟೆಕ್ನಿಷಿಯನ್‌ಗಳಾದ ನಾಗರಾಜ್, ಸುಮ, ಶಾಂತ, ಹಿರಿಯ ಶುಶ್ರೂಷಾಧಿಕಾರಿ ಹರೀಶ್‌ಕುಮಾರ್ ಇದ್ದರು.

ರಾಜ್ಯಮಟ್ಟದ ಜೂನಿಯರ್ ಈಜು ಸ್ಪರ್ಧೆಯಲ್ಲಿ ಮೈಸೂರಿನ ಜೀವಾಂಶ್, ರುತ್ವಾಗೆ ತಲಾ ಮೂರು ಚಿನ್ನದ ಪದಕ



ಬೆಂಗಳೂರಲ್ಲಿ ನಡೆದ ರಾಜ್ಯ ಮಟ್ಟದ ಜೂನಿಯರ್ ಈಜು ಸ್ಪರ್ಧೆಯಲ್ಲಿ ವಿವಿಧ ಪದಕ ಪಡೆದ ಮೈಸೂರಿನ ಗ್ಲೋಬಲ್ ಸ್ಪೋರ್ಟ್ಸ್ ಅಸೋಸಿಯೇಷನ್‌ನ ಈಜುಪಟುಗಳು.

ಮೈಸೂರು, ಮೇ 29(ಎಂಟಿವೈ)- ಬೆಂಗಳೂರಿನ ಸೆಂಟರ್ ಆಫ್ ಸ್ಪೋರ್ಟ್ಸ್ ಎಕ್ಸಲೆನ್ಸ್‌ನಲ್ಲಿ ಕರ್ನಾಟಕ ರಾಜ್ಯ ಸ್ವಿಮ್ಮಿಂಗ್ ಅಸೋಸಿಯೇಷನ್ ಆಯೋಜಿಸಿದ್ದ ರಾಜ್ಯ ಮಟ್ಟದ ಜೂನಿಯರ್ ಈಜು ಸ್ಪರ್ಧೆಯಲ್ಲಿ ಮೈಸೂರಿನ ಗ್ಲೋಬಲ್ ಸ್ಪೋರ್ಟ್ಸ್ ಅಸೋಸಿಯೇಷನ್‌ನ ಜೀವಾಂಶ್ ಹಾಗೂ ಎಸ್.ರುತ್ವಾ ತಲಾ ಮೂರು ಚಿನ್ನದ ಪದಕ ಪಡೆದು ಗಮನ ಸೆಳೆದಿದ್ದಾರೆ.

ಮೈಸೂರಿನ ಗ್ಲೋಬಲ್ ಸ್ಪೋರ್ಟ್ಸ್ ಅಸೋಸಿಯೇಷನ್‌ನ ಏಳು ಈಜುಪಟುಗಳು ಸಬ್ ಜೂನಿಯರ್ ವಿಭಾಗದ ನಾಲ್ಕು ಕ್ಯಾಟಗರಿಯಲ್ಲಿ (13, 12, 11, 10 ವರ್ಷ ಒಳಪಟ್ಟವರು)ಸ್ಪರ್ಧಿಸಿ ಪದಕ ಪಡೆದುಕೊಂಡಿದ್ದಾರೆ. ರಾಜ್ಯದ ವಿವಿಧ ಜಿಲ್ಲೆಗಳಿಂದ 500ಕ್ಕೂ ಹೆಚ್ಚು ಸ್ಪರ್ಧಿಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಅವರಲ್ಲಿ ಮೈಸೂರಿನ ಪಟುಗಳು ಉತ್ತಮ ಸಾಧನೆ ಪ್ರದರ್ಶಿಸಿದ್ದಾರೆ ಎಂದು ಮೈಸೂರಿನ ಗ್ಲೋಬಲ್ ಸ್ಪೋರ್ಟ್ಸ್ ಅಸೋಸಿಯೇಷನ್‌ನ ಮುಖ್ಯ ತರಬೇತುದಾರ ಪಿ.ಪವನ್ ಕುಮಾರ್ ತಿಳಿಸಿದ್ದಾರೆ.

ಇಬ್ಬರಿಗೆ ಟ್ರಿಪಲ್ ಚಿನ್ನ: ಜೀವಾಂಶ್ 200 ಮೀ ಬಟರ್ ಫ್ಲೈ (2:19.54 ಸೆ.), 100 ಮೀ ಬಟರ್ ಫ್ಲೈ (1:3.99 ಸೆ), 50 ಮೀ. ಬಟರ್‌ಫ್ಲೈ(29.50 ಸೆ.) ವಿಭಾಗಗಳಲ್ಲಿ ಅತ್ಯುತ್ತಮ ಪ್ರದರ್ಶನ ನೀಡುವ ಮೂಲಕ ಮೂರು ಚಿನ್ನದ ಪದಕ ಪಡೆದು ಮಿಂಚಿದರು. ರೀತಿ ಎಸ್. ರುತ್ವಾ 50 ಮೀ. ಬಟರ್ ಫ್ಲೈ(33.71 ಸೆ.), 100 ಮೀ. ಬಟರ್ ಫ್ಲೈ(1:16.73 ಸೆ.), 200 ಮೀ ಫ್ರೀಸ್ಟೈಲ್(2:37.17ಸೆ.) ವಿಭಾಗಗಳಲ್ಲಿ ಪ್ರಥಮ ಸ್ಥಾನ ಪಡೆದು ಗಮನ ಸೆಳೆದರು.

ಸಮೃದ್, ಸಾನ್ವಿ ಚಿನ್ನದ ಸಾಧನೆ: ಎ.ಸಮೃದ್ 100 ಮೀ ಬಟರ್ ಫ್ಲೈನಲ್ಲಿ (1:17.02 ಸೆ.)ಚಿನ್ನ, 200 ಮೀ. ವೈಯಕ್ತಿಕ ಮಿಡ್ಲೆ (2:53.78 ಸೆ.) ಕಂಚು, 100 ಮೀ ಬ್ರೆಸ್ಟ್ ಸ್ಟ್ರೋಕ್(1:32.72 ಸೆ.)ನಲ್ಲಿ ಬೆಳ್ಳಿ ಪದಕ ಪಡೆದರು. ಆರ್. ಸಾನ್ವಿ 100 ಮೀ. ಬಟರ್ ಫ್ಲೈ(1:27.98 ಸೆ.)ವಿಭಾಗದಲ್ಲಿ ಚಿನ್ನ, 200 ಮೀ ಫ್ರೀಸ್ಟೈಲ್(2:47.08 ಸೆ.)ನಲ್ಲಿ ಬೆಳ್ಳಿ, 50 ಮೀ. ಬಟರ್ ಫ್ಲೈ(38.99ಸೆ.)ನಲ್ಲಿ ಬೆಳ್ಳಿ ಪದಕ ಪಡೆದುಕೊಂಡಿದ್ದಾರೆ.

ಎ.ಆದ್ರಿತ್ 100 ಮೀ. ಬ್ಯಾಕ್ ಸ್ಟ್ರೋಕ್‌ನಲ್ಲಿ ಕಂಚು, 400 ಮೀ. ಫ್ರೀಸ್ಟೈಲ್‌ನಲ್ಲಿ ಬೆಳ್ಳಿ, ಹೆಚ್.ಎನ್. ನೇಹಸಿರಿ ಅವರು 50 ಮೀ. ಬಟರ್ ಫ್ಲೈನಲ್ಲಿ ಬೆಳ್ಳಿ, ಹರಿಕಾ ಎನ್ ನಾಯ್ಡು 100 ಮೀ. ಬ್ರೆಸ್ಟ್ ಸ್ಟ್ರೋಕ್‌ನಲ್ಲಿ ಕಂಚಿನ ಪದಕ ಪಡೆದರು.

ವಿದ್ಯುತ್ ಸ್ಪರ್ಶದಿಂದ ಕಾಡಾನೆ ಸಾವು



ಕೊಡಗರಹಳ್ಳಿಯ ಕಾಫಿ ತೋಟದಲ್ಲಿ ವಿದ್ಯುತ್ ಸ್ಪರ್ಶದಿಂದ ಕಾಡಾನೆ ಮೃತಪಟ್ಟಿರುವುದು.

ಮಡಿಕೇರಿ, ಮೇ 29–ವಿದ್ಯುತ್ ಸ್ಪರ್ಶದಿಂದ ಕಾಡಾನೆಯೊಂದು ಮೃತಪಟ್ಟಿರುವ ಘಟನೆ ಸುಂಟಿಕೊಪ್ಪ ಸಮೀಪದ ಕೊಡಗರಹಳ್ಳಿಯ ಕಾಫಿ ತೋಟವೊಂದರಲ್ಲಿ ನಡೆದಿದೆ.

ಆಹಾರ ಅರಸಿ ತೋಟಕ್ಕೆ ಬಂದಿದ್ದ ಸುಮಾರು 20 ವರ್ಷದ ಗಂಡಾನೆ ಮೃತಪಟ್ಟಿದ್ದು, ಆನೆಯ ಕಳೇಬರ ಪತ್ತೆಯಾಗಿರುವ ಸ್ಥಳದಲ್ಲಿ ಕಬ್ಬಿಣದ ವಿದ್ಯುತ್ ಕಂಬ ಕೆಳಗೆ ಬಿದ್ದಿದೆ.

ಬುಧವಾರ ತೋಟದ ಕೆಲಸಕ್ಕೆ ಆಗಮಿಸಿದ ಕಾರ್ಮಿಕರು ಆನೆ ಮೃತಪಟ್ಟಿರು ವುದನ್ನು ಕಂಡು ಮಾಲೀಕರಿಗೆ ತಿಳಿಸಿದ್ದಾರೆ. ನಂತರ ಸ್ಥಳಕ್ಕಾಗಮಿಸಿದ ತೋಟದ ಮಾಲೀಕರು, ಅರಣ್ಯ ಇಲಾಖೆಗೆ ಮಾಹಿತಿ ನೀಡಿದರು. ಕುಶಾಲನಗರ ಆರ್‌ಎಫ್‌ಓ ರತನ್ ಕುಮಾರ್, ಉಪ ವಲಯ ಅರಣ್ಯಾಧಿಕಾರಿ ದೇವಯ್ಯ, ಆರ್‌ಆರ್‌ಟಿ ಸಿಬ್ಬಂದಿ ಮತ್ತು ಸೆಸ್ಕ್ ಅಧಿಕಾರಿಗಳು ಸ್ಥಳ ಪರಿಶೀಲಿಸಿದರು. ಬಳಿಕ ತೋಟದಲ್ಲೇ ಕಾಡಾನೆ ಕಳೇಬರ ಮರಣೋತ್ತರ ಪರೀಕ್ಷೆ ನಡೆಸಲಾಯಿತು.

ಇದೀಗ ಕಾಫಿ ತೋಟಗಳಲ್ಲಿ ಹಲಸಿನ ಹಣ್ಣಿನ ಸಮಯವಾದ ಹಿನ್ನೆಲೆಯಲ್ಲಿ ಹಣ್ಣನ್ನು ಅರಸಿ ಕಾಡಾನೆಗಳು ತೋಟಗಳಿಗೆ ಬರುತ್ತಿವೆ. ಇನ್ನು ಕಾಡಾನೆ ಮತ್ತು ಮಾನವ ಸಂಘರ್ಷವನ್ನು ತಡೆಯಲು ರೈಲ್ವೆ ಬ್ಯಾರಿಕೇಡ್, ಸೋಲಾರ್ ಬೇಲಿ, ಆನೆ ಕಂದಕಗಳನ್ನು ಕೂಡ ನಿರ್ಮಿಸಲಾಗಿದೆ. ಕಾಡಾನೆ ಮೃತಪಟ್ಟ ಸ್ಥಳದಲ್ಲಿ ವಿದ್ಯುತ್ ಕಂಬ ಬಿದ್ದಿರುವುದು ಕಂಡು ಬಂದಿದ್ದು, ಮೇಲ್ನೋಟಕ್ಕೆ ವಿದ್ಯುತ್ ಸ್ಪರ್ಶದಿಂದ ಆನೆ ಮೃತಪಟ್ಟಿರುವ ಶಂಕೆ ವ್ಯಕ್ತವಾಗಿದೆ. ಮರಣೋತ್ತರ ಪರೀಕ್ಷೆಯ ವರದಿ ಬಂದ ಬಳಿಕ ಸಾವಿಗೆ ನಿಖರ ಕಾರಣ ತಿಳಿಯಲಿದೆ ಎಂದು ಎಸಿಎಫ್ ಗೋಪಾಲ್ ಮಾಹಿತಿ ನೀಡಿದರು.

ಹಾರಂಗಿ ನಾಲೆಯ ಕಾಮಗಾರಿ ಬಿರುಸು

ಕಾವೇರಿ ನೀರಾವರಿ ನಿಗಮದಿಂದ 49 ಕೋಟಿ ರೂ. ವೆಚ್ಚದಲ್ಲಿ ದುರಸ್ತಿ



ಹಾರಂಗಿ ಜಲಾಶಯದ ಮುಖ್ಯ ನಾಲೆಯ ದುರಸ್ತಿ ಹಾಗೂ ಕಟ್ ಅಂಡ್ ಕವರ್ ಕಾಮಗಾರಿ ನಡೆಯುತ್ತಿರುವುದು.

ಮಡಿಕೇರಿ, ಮೇ 29– ಹಾರಂಗಿ ಜಲಾಶಯದ ಮುಖ್ಯ ನಾಲೆಯ ದುರಸ್ತಿ ಹಾಗೂ ನಾಲೆಯ ಕಟ್ ಅಂಡ್ ಕವರ್ ಕಾಮಗಾರಿ ಬಿರುಸಿನಿಂದ ಸಾಗಿದೆ.

ಈ ಕಾಮಗಾರಿಯನ್ನು ಕಾವೇರಿ ನೀರಾವರಿ ನಿಗಮದ ಮೂಲಕ ಕೈಗೆತ್ತಿಕೊಳ್ಳಲಾಗಿದ್ದು, ಒಟ್ಟು 49 ಕೋಟಿ ರೂ. ವೆಚ್ಚ ಮಾಡಲಾಗುತ್ತಿದೆ. ಕೊಡಗು, ಮೈಸೂರು ಹಾಗೂ ಹಾಸನ ಜಿಲ್ಲೆಗಳ ಒಟ್ಟು 6 ತಾಲೂಕುಗಳ ಕೃಷಿಕರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಹಾರಂಗಿಯ ಮುಖ್ಯ ನಾಲೆಯ ದುರಸ್ತಿ ಕಾಮಗಾರಿ ಹಾಗೂ 8 ಕೋಟಿ ರೂ. ವೆಚ್ಚದಲ್ಲಿ ನಾಲೆಯ ಕಟ್ ಅಂಡ್ ಕವರ್ ಬಾಕ್ಸ್ ಮಾದರಿಯ ಕಾಮಗಾರಿ ನಡೆಸಲಾಗುತ್ತಿದೆ.

ಹಾರಂಗಿ ಅಣೆಕಟ್ಟೆಯ ಮುಖ್ಯ ನಾಲೆಯ 1ನೇ ತೂಬಿನಿಂದ 6ನೇ ತೂಬಿನವರೆಗೆ ದುರಸ್ತಿ ಮತ್ತು ಮುಖ್ಯ ನಾಲೆಯ ಮೇಲ್ಭಾಗದಲ್ಲಿ ರಸ್ತೆ ನಿರ್ಮಾಣ, ವಿವಿಧ ಭಾಗಗಳಲ್ಲಿ ಕಿರು ಸೇತುವೆ ನಿರ್ಮಾಣ, ಮುಖ್ಯ ನಾಲೆಯ ಎರಡು ಬದಿಗಳ ಕಾಂಕ್ರೀಟಿಕರಣ, ಕಿರಿದಾದ ಸ್ಥಳಗಳಲ್ಲಿ ಭೂ ಕುಸಿದು ನಾಲೆ ಬಂದ್ ಆಗುವುದನ್ನು ತಡೆಯಲು ನಾಲೆಯ ಮೇಲ್ಭಾಗವನ್ನು ಸಂಪೂರ್ಣವಾಗಿ ಮುಚ್ಚುವುದು ಸೇರಿದಂತೆ ವಿವಿಧ ಕಾಮಗಾರಿಗಳನ್ನು ಈ ಯೋಜನೆಯಡಿ ಕೈಗೊಳ್ಳಲಾಗಿದೆ.

ಹಾರಂಗಿ ಜಲಾಶಯ ನಿರ್ಮಾಣವಾದ ಬಳಿಕ ಮುಖ್ಯ ನಾಲೆಯನ್ನು ಅಭಿವೃದ್ಧಿ ಮಾಡದ ಹಿನ್ನೆಲೆಯಲ್ಲಿ ಹೆಚ್ಚಿನ ನೀರು ಸೋರಿಕೆಯಾಗಿ ತೋಡುಗಳ ಮೂಲಕ ನದಿ ಸೇರುತ್ತಿತ್ತು. ಇದರಿಂದ ಜಲಾಶಯದ ಎಡ ಹಾಗೂ ಬಲದಂಡೆ ನಾಲೆಗಳ ವ್ಯಾಪ್ತಿಯ ಕೊನೆಯ ಭಾಗದ ರೈತರಿಗೆ ಸಮರ್ಪಕವಾಗಿ ನೀರು ಲಭಿಸದೆ ಬೆಳೆ ನಷ್ಟ ಉಂಟಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ಇದೀಗ ನಾಲೆಯ ಅಭಿವೃದ್ಧಿ ಮತ್ತು ದುರಸ್ತಿ ಕಾಮಗಾರಿ ನಡೆಸಲಾಗುತ್ತಿದೆ.

ಬೇಸಾಯಕ್ಕೆ ತೊಂದರೆಯಾಗದಂತೆ ಸೂಚನೆ

ಹಾರಂಗಿ ಜಲಾಶಯ ಅಚ್ಚುಕಟ್ಟು ಪ್ರದೇಶದ ರೈತರಿಗೆ ಮುಂದಿನ ಬೇಸಾಯಕ್ಕೆ ಯಾವುದೇ ರೀತಿಯ ತೊಂದರೆಯಾಗದಂತೆ ಕಾಮಗಾರಿ ಪೂರ್ಣಗೊಳಿಸಬೇಕು ಎಂದು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಗುತ್ತಿಗೆದಾರರಿಗೆ ಸೂಚನೆ ನೀಡಿದ್ದಾರೆ.

ಹೊಸ ತಂತ್ರಜ್ಞಾನದ ಯಂತ್ರಗಳನ್ನು ಬಳಸಿ ಕಾಂಕ್ರೀಟಿಕರಣ ಕಾಮಗಾರಿ ಆರಂಭಿಸಿದ್ದು, ಮುಖ್ಯ ನಾಲೆಯ ಕಾಮಗಾರಿ ಭರದಿಂದ ಸಾಗಿದೆ. ಇನ್ನು ಉಳಿದ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸುವ ನಿಟ್ಟಿನಲ್ಲಿ ಹಗಲು ರಾತ್ರಿ ಭರದಿಂದ ನಡೆಸಲಾಗುತ್ತಿದೆ ಒಟ್ಟಿನಲ್ಲಿ ಹಾರಂಗಿ ಅಣೆಕಟ್ಟಿನ ಮುಖ್ಯ ನಾಲೆಯ ದುರಸ್ತಿ ಹಾಗೂ ನಾಲೆಯ ಕಟ್ ಅಂಡ್ ಕವರ್ ಕಾಮಗಾರಿ ಶೀಘ್ರ ಪೂರ್ಣಗೊಳ್ಳುವ ಮೂಲಕ ಕೊಡಗು, ಮೈಸೂರು ಹಾಗೂ ಹಾಸನ ಜಿಲ್ಲೆಗಳ ರೈತರ ಬೇಸಾಯಕ್ಕೆ ಅನುಕೂಲವಾಗಲಿದೆ.

ಬಸವಣ್ಣನವರ ಆದರ್ಶ ಜಗತ್ತಿಗೆ ಉತ್ತಮ ಸಂದೇಶ



ವಿರಾಜಪೇಟೆಯ ಅರಮೇರಿ ಕಳಂಚೇರಿ ಮಠದ ಎಸ್‌ಎಂಎಸ್ ವಿದ್ಯಾಸಂಸ್ಥೆಯಲ್ಲಿ ಬುಧವಾರ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ವೀರಶೈವ ಸಮಾಜದ ಹಿರಿಯರನ್ನು ಸನ್ಮಾನಿಸಲಾಯಿತು.

ವಿರಾಜಪೇಟೆ, ಮೇ 29–ಬಸವಣ್ಣನವರ ತತ್ವಾದರ್ಶ ಜಗತ್ತಿಗೆ ಉತ್ತಮ ಸಂದೇಶವಾಗಿದ್ದು, ಅವರ ವಚನಗಳನ್ನು ಎಲ್ಲರೂ ಮೈಗೂಡಿಸಿಕೊಳ್ಳಬೇಕು ಎಂದು ಅರಮೇರಿ ಕಳಂಚೇರಿ ಮಠಾಧ್ಯಕ್ಷರಾದ ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಹೇಳಿದರು.

ಅರಮೇರಿ ಕಳಂಚೇರಿ ಮಠದ ಎಸ್‌ಎಂಎಸ್ ವಿದ್ಯಾಸಂಸ್ಥೆಯ ಸಭಾಂಗಣದಲ್ಲಿ ಬಸವ ಜಯಂತಿ ಅಂಗವಾಗಿ ಅಖಿಲ ಭಾರತ ವೀರಶೈವ ಮಹಾಸಭಾದ ಪೊನ್ನಂಪೇಟೆ ಹಾಗೂ ವಿರಾಜಪೇಟೆ ತಾಲೂಕು ಘಟಕದ ವತಿಯಿಂದ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಸವಣ್ಣನವರ ತತ್ವದಂತೆ ಯಾರನ್ನು ದ್ವೇಷ ಮಾಡದೇ ಎಲ್ಲರೂ ನನ್ನವರು ಎಂಬ ಭಾವನೆಯಿಂದ ಬದುಕು ನಡೆಸುವುದು ಉತ್ತಮ ಎಂದು ತಿಳಿಸಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ವೀರಶೈವ ಮಹಾಸಭಾದ ಜಿಲ್ಲಾಧ್ಯಕ್ಷ ಹೆಚ್.ವಿ.ಶಿವಪ್ಪ, ಪೊನ್ನಂಪೇಟೆ ಹಾಗೂ ವಿರಾಜಪೇಟೆ ತಾಲೂಕಿನ ಸಂಘಟನೆಗಳ ಆಶ್ರಯದಲ್ಲಿ ಪ್ರತಿವರ್ಷ ಸಮಾಜವದವರಿಗೆ ಕ್ರೀಡಾಕೂಟ ಹಮ್ಮಿಕೊಳ್ಳಲಾಗುತ್ತಿದೆ. ಜೊತೆಗೆ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುತ್ತಿದೆ. ಸದಸ್ಯರು ಸಂಘಟನೆಯ ಅಭಿವೃದ್ಧಿಗೆ ಒಗ್ಗಟ್ಟಿನಿಂದ ಕೆಲಸ ಮಾಡಬೇಕು. ಪ್ರತಿಯೊಬ್ಬರು ಬಸವಣ್ಣನವರ ವಚನಗಳನ್ನು ಪಾಲಿಸುವ ಮೂಲಕ ಗುರು–ಹಿರಿಯರಿಗೆ ಗೌರವ ನೀಡುವಂತಾಗಬೇಕು ಎಂದರು.

ಸಮಾಜದ ತಾಲೂಕು ಅಧ್ಯಕ್ಷ ಎನ್.ಎಂ. ರಾಜೇಶ್ ಮಾತನಾಡಿ, ಸಮಾಜದು ಮಕ್ಕಳ ಶಿಕ್ಷಣದ ಕಡೆಗೆ ಹೆಚ್ಚಿನ ಗಮನ ಹರಿಸಬೇಕು. ಸಮುದಾಯದ ಎಲ್ಲರೂ ಸಂಘಟನೆಯ ಸದಸ್ಯತ್ವ ಪಡೆದುಕೊಳ್ಳಬೇಕು. ಮುಂದಿನ ವರ್ಷ ದತ್ತಿನಿಧಿ ಹೆಚ್ಚಿಸಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುವುದಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಹೆಚ್ಚು ಅಂಕ ಪಡೆದ ವೀರಶೈವ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಮಹಾಸಭಾದ ಜಿಲ್ಲಾಧ್ಯಕ್ಷ ಶಿವಪ್ಪ, ಉಪಾಧ್ಯಕ್ಷರಾದ ಎಸ್.ಎಸ್.ಸುರೇಶ್ ಮತ್ತು ಅನು ಚಂದ್ರಶೇಖರ್, ತಾಲೂಕು ಮಾಜಿ ಅಧ್ಯಕ್ಷ ಕೆ.ಎನ್.ಸಂದೀಪ್, ಮಾಜಿ ಉಪಾಧ್ಯಕ್ಷ ಎಸ್.ಜಿ.ಮರಿಸ್ವಾಮಿ, ಮಾಜಿ ಖಜಾಂಚಿ ರಾಜೇಂದ್ರ ಪ್ರಸಾದ್, ಮಾಜಿ ಕಾರ್ಯದರ್ಶಿ ಕೆ.ಎಂ.ವಿಶ್ವನಾಥ್, ಮಹಿಳಾ ಘಟಕದ ಚೈತ್ರಾ ರಾಜೇಶ್ ಹಾಗೂ ಮಾಜಿ ಪದಾಧಿಕಾರಿಗಳನ್ನು ಸನ್ಮಾನಿಸಲಾಯಿತು. ಇದೇ ವೇಳೆ ಸಮಾಜದ ಮೃತಪಟ್ಟವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ತಾಲೂಕು ಉಪಾಧ್ಯಕ್ಷ ಶ್ರೀಕಂಠಪ್ಪ, ಕಾರ್ಯದರ್ಶಿ ಎಸ್.ವಿ.ಚಂದ್ರಶೇಖರ್, ಖಜಾಂಚಿ ಡಿ.ಎಸ್.ಲೋಕೇಶ್, ಶಿಕ್ಷಿ ನಳಿನಿ ಹಾಗೂ ಸದಸ್ಯರು ಉಪಸ್ಥಿತರಿದ್ದರು.

ಜೂ.1, ಪ್ರಬಂಧ, ಚಿತ್ರಕಲೆ ಸ್ಪರ್ಧೆ

ಮಡಿಕೇರಿ: ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಕೊಡಗು ಪ್ರಾದೇಶಿಕ ಕಚೇರಿ ವತಿಯಿಂದ ಪರಿಸರ ಸಂರಕ್ಷಣೆ ಕುರಿತು ಪ್ರಾಥಮಿಕ ಮತ್ತು ಪ್ರೌಢಶಾಲಾ ಮಕ್ಕಳಿಗೆ ಪ್ರಬಂಧ ಮತ್ತು ಚಿತ್ರಕಲೆ ಸ್ಪರ್ಧೆಯನ್ನು ಜೂ.1ರಂದು ಬೆಳಗ್ಗೆ 9.30ಕ್ಕೆ ನಗರದ ಎಎಲ್‌ಜಿ ಕ್ರೆಸೆಂಟ್ ಶಾಲೆ (ಮಹದೇವಪೇಟೆಯ ಚೌಡೇಶ್ವರಿ ದೇವಸ್ಥಾನ ಹತ್ತಿರ) ಯಲ್ಲಿ ಏರ್ಪಡಿಸಲಾಗಿದೆ.

'ಭೂ ಮರುಸ್ಥಾಪನೆ, ಮರುಭೂಮೀಕರಣ ಹಾಗೂ ಬರ ತಡೆಯುವಿಕೆ' (Land Restoration, Desertification and Drought Resilience) ಕುರಿತು ಸ್ಪರ್ಧೆ ಆಯೋಜಿಸಲಾಗಿದ್ದು, ಚಿತ್ರಕಲೆಗೆ ಬೇಕಾಗುವ ಬಣ್ಣ ಇನ್ನಿತರೆ ವಸ್ತುಗಳನ್ನು ವಿದ್ಯಾರ್ಥಿಗಳೇ ತರಬೇಕು. ಡ್ರಾಯಿಂಗ್ ಶೀಟ್ ಮಾತ್ರ ನೀಡಲಾಗುವುದು. ಸ್ಥಳದಲ್ಲೇ ಹೆಸರನ್ನು ನೋಂದಾಯಿಸಿಕೊಳ್ಳಬಹುದು.

ವಿವರಗಳಿಗೆ ಪರಿಸರ ಅಧಿಕಾರಿ ಎಂ.ಜಿ. ರಘುರಾಂ (ಮೊ.ಸಂ: 9845026348), ಯೋಜನಾ ಸಹಾಯಕ ಕೆ.ಎ.ಆಸ್ಟಿನ್ (ಮೊ.ಸಂ: 7760738447), ಕಚೇರಿ (ದೂ.ಸಂ: 08272–221855) ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನು ಸಂಪರ್ಕಿಸಬಹುದು ಎಂದು ಕೊಡಗು ಪ್ರಾದೇಶಿಕ ಕಚೇರಿಯ ಪರಿಸರ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮುದ್ದಂಡ ಕೊಡವ ಹಾಕಿ ಹಬ್ಬದ ಪೂರ್ವಭಾವಿ ತಯಾರಿ



2025ರ ಕೊಡವ ಹಾಕಿ ಹಬ್ಬದ ಹಕ್ಕುಪತ್ರವನ್ನು ಮುದ್ದಂಡ ಕುಟುಂಬಕ್ಕೆ ಕೊಡವ ಹಾಕಿ ಅಕಾಡೆಮಿ ನೀಡಿತು.

ಮಡಿಕೇರಿ, ಮೇ 29–ಮುಂದಿನ ವರ್ಷ ನಡೆಯಲಿರುವ ಕೊಡವ ಕುಟುಂಬಗಳ ನಡುವಿನ 25ನೇ ವರ್ಷದ ಪ್ರತಿಷ್ಠಿತ ಮುದ್ದಂಡ ಹಾಕಿ ಹಬ್ಬದ ಪೂರ್ವಭಾವಿ ತಯಾರಿಯಲ್ಲಿ ಮುದ್ದಂಡ ಕುಟುಂಬಸ್ಥರು ತೊಡಗಿದ್ದಾರೆ.

ನಗರದ ಹೊರವಲಯದ ಕರವಲೆ ಶ್ರೀ ಭಗವತಿ ಮಹಿಷ ಮರ್ದಿನಿ ದೇವಾಲಯದಲ್ಲಿ ಮುದ್ದಂಡ ಕುಟುಂಬಸ್ಥರು ಹಾಗೂ ಕೊಡವ ಹಾಕಿ ಅಕಾಡೆಮಿ ಪ್ರಮುಖರು ವಿಶೇಷ ಪೂಜೆ ಸಲ್ಲಿಸಿ, ಹಾಕಿ ಹಬ್ಬದ ಯಶಸ್ಸಿಗಾಗಿ ಪ್ರಾರ್ಥಿಸಿದರು. 2025ರಲ್ಲಿ ಹಾಕಿ ಉತ್ಸವ ನಡೆಸಲು ಮುದ್ದಂಡ ಕುಟುಂಬಕ್ಕೆ ಕೊಡವ ಹಾಕಿ ಅಕಾಡೆಮಿ ಅಧಿಕೃತವಾಗಿ ಹಕ್ಕೋಲೆ (ಹಕ್ಕುಪತ್ರ) ನೀಡುವ ಮೂಲಕ ಶುಭ ಹಾರೈಸಿತು. ಮುಂದಿನ ವರ್ಷ ಮಡಿಕೇರಿಯ ಫೀ.ಮಾ.ಕೆ.ಎಂ. ಕಾರ್ಯಪ್ಪ ಕಾಲೇಜು ಮೈದಾನದಲ್ಲಿ ಮುದ್ದಂಡ ಹಾಕಿ ಹಬ್ಬ ನಡೆಯಲಿದೆ.

ಈ ಸಂದರ್ಭ ಹಾಕಿ ಅಕಾಡೆಮಿಯ ಅಧ್ಯಕ್ಷ ಪಾಂಡಂಡ ಬೋಪಣ್ಣ, ಉಪಾಧ್ಯಕ್ಷರಾದ ಕುಕ್ಕೇರ ಜಯ ಚಿಣ್ಣಪ್ಪ, ಡೀನಾ ಪೂವಯ್ಯ, ಗೌರವ ಕಾರ್ಯದರ್ಶಿ ಮಾಳೇಟಿರ ಶ್ರೀನಿವಾಸ್, ಜಂಟಿ ಕಾರ್ಯದರ್ಶಿ ಚೆಯ್ಯಂಡ ಸತ್ಯ, ಮುದ್ದಂಡ ಹಾಕಿ ಉತ್ಸವ ಸಮಿತಿಯ ಅಧ್ಯಕ್ಷ ಮುದ್ದಂಡ ರಶಿನ್ ಸುಬ್ಬಯ್ಯ, ಗೌರವಾಧ್ಯಕ್ಷ ಮುದ್ದಂಡ ಬಿ.ದೇವಯ್ಯ, ಕಾರ್ಯಕಾರಿ ಮಂಡಳಿಯ ಮುದ್ದಂಡ ಡೀನ್ ಬೋಪಣ್ಣ, ಮುದ್ದಂಡ ರಾಯ್, ಮುದ್ದಂಡ ರಂಜಿತ್ ಪೊನ್ನಪ್ಪ, ಮುದ್ದಂಡ ಕಿರಣ್ ಪೂಣಚ್ಚ, ಮುದ್ದಂಡ ಆದ್ಯ ತಿಮ್ಮಯ್ಯ ಇತರರು ಉಪಸ್ಥಿತರಿದ್ದರು.

ಜೂ.1ರಿಂದ ಮೀನುಗಾರಿಕೆ ನಿಷೇಧ

ಮಡಿಕೇರಿ: ಮುಂಗಾರು ಮಳೆಗಾಲದಲ್ಲಿ ಮೀನುಗಳ ವಂಶಾಭಿವೃದ್ಧಿ ಚಟುವಟಿಕೆಗಳು ನಡೆಯುವುದರಿಂದ ಜೂ.1 ರಿಂದ ಜು.30ರ ವರೆಗೆ ರಾಜ್ಯದ ಎಲ್ಲಾ ಕೆರೆಗಳು, ಜಲಾಶಯಗಳು, ತೊರೆಗಳು, ಅಳಿವೆಗಳು ಮತ್ತು ನದಿಗಳಲ್ಲಿ ಮೀನು ಹಿಡಿಯು ವುದನ್ನು ಪೂರ್ಣವಾಗಿ ನಿಷೇಧಿಸಲಾಗಿದೆ. ಈ ಅವಧಿ ಮೀನಿನ ಜೀವನ ಚಕ್ರದಲ್ಲಿ ಅತಿಮುಖ್ಯವಾದ ಘಟ್ಟವಾಗಿದ್ದು, ಮೀನುಗಳ ಸಂತತಿ ವೃದ್ಧಿಯಾಗುವುದರಿಂದ ಈ ಅವಧಿಯಲ್ಲಿ ಜಿಲ್ಲೆಯ ಎಲ್ಲಾ ಕೆರೆಗಳು, ಜಲಾಶಯಗಳು ತೊರೆಗಳು ಮತ್ತು ನದಿಗಳಲ್ಲಿ ಮೀನುಗಳನ್ನು ಈ ಎರಡು ತಿಂಗಳು ಹಿಡಿಯಬಾರದು. ಅವುಗಳ ಸಂತಾನ ಅಭಿವೃದ್ಧಿಗೆ ಪೂರಕ ವಾತಾವರಣ ಕಲ್ಪಿಸಬೇಕು. ಮೀನಿನ ತಳಿ ಸಂರಕ್ಷಣೆಯಲ್ಲಿ ಮೀನುಗಾರಿಕೆ ಇಲಾಖೆಯೊಂದಿಗೆ ಸಹಕರಿಸುವಂತೆ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

ಮತ ಎಣಿಕೆ ಕಾರ್ಯಕ್ಕೆ ಸಹಕರಿಸಿ

● ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಮನವಿ ● ಅಭ್ಯರ್ಥಿಗಳು, ವಿವಿಧ ಪ್ರತಿನಿಧಿಗಳ ಸಭೆ



ಚಾಮರಾಜನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ ಮಾತನಾಡಿದರು.

ಚಾಮರಾಜನಗರ, ಮೇ 29–ನಗರದಲ್ಲಿ ಜೂ.4ರಂದು ಚಾಮರಾಜನಗರ ಲೋಕಸಭಾ ಕ್ಷೇತ್ರದ ಮತ ಎಣಿಕೆ ಕಾರ್ಯವನ್ನು ಯಶಸ್ವಿಯಾಗಿ ನಡೆಸಲು ಅಗತ್ಯ ಸಹಕಾರ ನೀಡಬೇಕು ಎಂದು ಜಿಲ್ಲಾ ಸಹಾಯಕ ಚುನಾವಣಾಧಿಕಾರಿ ಹಾಗೂ ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ ಮನವಿ ಮಾಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ಲೋಕಸಭಾ ಸಾರ್ವತ್ರಿಕ ಚುನಾವಣೆಯ ಮತ ಎಣಿಕೆ ಕಾರ್ಯ ಕುರಿತು ಅಭ್ಯರ್ಥಿಗಳಿಗೆ ಮಾಹಿತಿ ಹಾಗೂ ವಿವಿಧ ಪ್ರತಿನಿಧಿಗಳೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಜೂ.4 ರಂದು ಬೆಳಗ್ಗೆ 8 ಗಂಟೆಗೆ ನಗರದ ನಂಜನಗೂಡು ರಸ್ತೆಯ ಬೇಡರಪುರದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಮತ ಎಣಿಕೆ ನಡೆಯಲಿದ್ದು, ಎಣಿಕೆ ಕೇಂದ್ರಕ್ಕೆ ಅಭ್ಯರ್ಥಿಗಳು, ಏಜೆಂಟರು ಕಡ್ಡಾಯವಾಗಿ ಚುನಾವಣಾಧಿಕಾರಿಗಳು ನೀಡುವ ಗುರುತಿನ ಚೀಟಿಯನ್ನು ಧರಿಸಿ ಆಗಮಿಸಬೇಕು. ಯಾವುದೇ ಗೊಂದಲಗಳಿಗೆ ಆಸ್ಪದವಾಗದಂತೆ ಎಣಿಕೆ ಕಾರ್ಯದ ಸಿದ್ಧತೆಗಳನ್ನು ವ್ಯವಸ್ಥಿತವಾಗಿ ನಿರ್ವಹಣೆ ಮಾಡಲಾಗಿದೆ ಎಂದರು.

ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನ ಸಿವಿಲ್ ಬ್ಲಾಕ್‌ನ ನೆಲಮಹಡಿಯಲ್ಲಿ ಹೆಚ್.ಡಿ.ಕೋಟೆ, ನಂಜನಗೂಡು, ವರುಣ ಹಾಗೂ ತಿ.ನರಸೀಪುರ ಕ್ಷೇತ್ರ ಹಾಗೂ ಕಾಲೇಜಿನ ಮೆಕಾನಿಕಲ್ ಬ್ಲಾಕ್‌ನ ಮೊದಲನೇ ಮಹಡಿಯಲ್ಲಿ ಹನೂರು, ಕೊಳ್ಳೇಗಾಲ, ಚಾಮರಾಜನಗರ ಹಾಗೂ ಗುಂಡ್ಲುಪೇಟೆ ಕ್ಷೇತ್ರಗಳ ಮತ ಎಣಿಕೆ ನಡೆಯಲಿದೆ. ಅಲ್ಲದೆ, ಮೆಕಾನಿಕಲ್ ಬ್ಲಾಕ್‌ನ ನೆಲ ಮಹಡಿಯ ಚುನಾವಣಾಧಿಕಾರಿಗಳ ಕಚೇರಿಯಲ್ಲಿ ಅಂಚೆ ಮತಪತ್ರ ಎಣಿಕೆ ನಡೆಸಲಾಗುವುದು ಎಂದು ತಿಳಿಸಿದರು.

ಎಣಿಕೆ ಕೇಂದ್ರದ ಕೊಠಡಿಯಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 14 ಟೇಬಲ್‌ಗಳಂತೆ ಒಟ್ಟು 112 ಟೇಬಲ್‌ಗಳನ್ನು ಸ್ಥಾಪಿಸಲಾಗಿದೆ. ಆಯಾ ವಿಧಾನಸಭಾ ಕ್ಷೇತ್ರದ ಸಹಾಯಕ ಚುನಾವಣಾಧಿಕಾರಿ (ಎಆರ್‌ಓ) ಸಮ್ಮುಖದಲ್ಲಿ ಎಣಿಕೆ ನಡೆಯಲಿದ್ದು, ಅಂಚೆ ಮತಪತ್ರ ಎಣಿಕೆಗೆ 8 ಟೇಬಲ್‌ಗಳ ವ್ಯವಸ್ಥೆ ಮಾಡಲಾಗಿದೆ. ಸೇವಾ ಮತದಾರರ ಮತ ಪತ್ರಗಳ ಎಣಿಕೆಯನ್ನು ಇಟಿಪಿಬಿಎಸ್ ತಂತ್ರಾಂಶದಲ್ಲಿ ನಡೆಸಲು 2 ಟೇಬಲ್‌ಗಳನ್ನು ಸ್ಥಾಪಿಸಲಾಗಿದೆ ಎಂದು ಮಾಹಿತಿ ನೀಡಿದರು.

1372 ಮತದಾರರು ಮನೆಯಿಂದಲ್ಲೇ ಮತದಾನ ಮಾಡಿದ್ದಾರೆ. 2382 ಚುನಾವಣಾ ಕರ್ತವ್ಯ ಅಧಿಕಾರಿ ಹಾಗೂ ಸಿಬ್ಬಂದಿ, 458 ಅತ್ಯಗತ್ಯ ಕರ್ತವ್ಯ ನಿರತ ಸಿಬ್ಬಂದಿ ಹಾಗೂ 192 ಸೇವಾ ಮತದಾರರು ಸೇರಿದಂತೆ ಒಟ್ಟು 4404 ಅಂಚೆ ಮತಪತ್ರಗಳ ಎಣಿಕೆ ಕಾರ್ಯವೂ ನಡೆಯಲಿದೆ ಎಂದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಕಚೇರಿಯ ಚುನಾವಣಾ ತಹಶೀಲ್ದಾರ್ ಕೀರ್ತನಾ, ಚುನಾವಣಾ ಶಿರಸ್ತೇದಾರ್ ಬಸವರಾಜು, ಬಿಎಸ್‌ಪಿ ಅಭ್ಯರ್ಥಿ ಎಂ.ಕೃಷ್ಣಮೂರ್ತಿ, ಕರ್ನಾಟಕ ಜನತಾ ಪಕ್ಷದ ಅಭ್ಯರ್ಥಿ ಎಸ್. ನಿಂಗರಾಜು, ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಅಭ್ಯರ್ಥಿ ಕಂದಳ್ಳಿ ಮಹೇಶ್, ಪಕ್ಷೇತರ ಅಭ್ಯರ್ಥಿಗಳಾದ ಎನ್.ಅಂಬರೀಷ್, ಬಿ.ಎಂ.ಮಹದೇವಸ್ವಾಮಿ, ಜಿ.ಡಿ.ರಾಜಗೋಪಾಲ, ಎಚ್.ಕೆ.ಸ್ವಾಮಿ, ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳಾದ ಎ.ಎಚ್. ನಸ್ರುಲ್ಲಾ ಖಾನ್, ಮಹೇಶ್, ಇತರರು ಹಾಜರಿದ್ದರು.

ನಿಷೇಧಿತ ಪ್ಲಾಸ್ಟಿಕ್ ವಸ್ತುಗಳ ವಶ



ಚಾ.ನಗರದಲ್ಲಿ ಅಂಗಡಿಗಳ ಮೇಲೆ ದಾಳಿ ನಡೆಸಿ ನಗರಸಭೆ ಅಧಿಕಾರಿಗಳು, ನಿಷೇಧಿತ ಪ್ಲಾಸ್ಟಿಕ್ ವಸ್ತುಗಳನ್ನು ವಶಪಡಿಕೊಂಡಿರುವುದು.

ಚಾಮರಾಜನಗರ, ಮೇ 29–ನಗರದಲ್ಲಿ ನಿಷೇಧಿತ ಪ್ಲಾಸ್ಟಿಕ್ ವಸ್ತುಗಳನ್ನು ಮಾರಾಟ ಮಾಡುತ್ತಿದ್ದ ಅಂಗಡಿಗಳ ಮೇಲೆ ದಾಳಿ ನಡೆಸಿ ನಗರಸಭೆ ಅಧಿಕಾರಿಗಳು, ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್, ಸ್ಟ್ರಾ, ಲೋಟ ಹಾಗೂ ಇನ್ನಿತರೆ ಪ್ಲಾಸ್ಟಿಕ್ ವಸ್ತುಗಳನ್ನು ವಶಪಡಿಕೊಂಡು ದಂಡ ವಿಧಿಸಿದರು.

ದೊಡ್ಡ ಅಂಗಡಿ ಹಾಗೂ ಚಿಕ್ಕ ಅಂಗಡಿ ಬೀದಿಯ ಕೆಲ ಅಂಗಡಿಗಳಲ್ಲಿ ನಿಷೇಧಿತ ಪ್ಲಾಸ್ಟಿಕ್ ಲೋಟ, ಕ್ಯಾರಿ ಬ್ಯಾಗ್ ಇನ್ನಿತರ ವಸ್ತುಗಳನ್ನು ಮಾರಾಟ ಮಾಡಲಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ಅಂಗಡಿ ಮಾಲೀಕರಿಗೆ ಹಲವಾರು ಬಾರಿ ಮಾರಾಟ ಮಾಡದಂತೆ ನಗರಸಭೆ ಎಚ್ಚರಿಸಿತ್ತು.

ಆದರೂ, ಕೆಲವರು ಪ್ಲಾಸ್ಟಿಕ್ ವಸ್ತುಗಳನ್ನು ಕದ್ದು ಮುಚ್ಚಿ ಮಾರಾಟ ಮಾಡುತ್ತಿದ್ದರು. ದಾಳಿ ನಡೆಸಿದ ಅಧಿಕಾರಿಗಳು ಪ್ಲಾಸ್ಟಿಕ್ ವಸ್ತುಗಳನ್ನು ವಶಪಡಿಸಿಕೊಂಡು ದಂಡ ವಿಧಿಸಿದರು.

ಇದೇ ವೇಳೆ ನಗರಸಭೆ ಆರೋಗ್ಯ ನಿರೀಕ್ಷಕರಾದ ಮಂಜುನಾಥ, ಪುಷ್ಪಾ, ಸಿಬ್ಬಂದಿ ಸಂತೋಷ್, ಪ್ರಸಾದ್, ರುದ್ರೇಶ್, ರೀತಿಕ್, ತನ್ವಿರ್, ಅರ್ಫಾಜ್, ರಾಜೇಂದ್ರ ಮುಂತಾದವರು ಹಾಜರಿದ್ದರು.

ಸುಳ್ಳು ಹೇಳುವುದೇ ಜೆಡಿಎಸ್, ಬಿಜೆಪಿ ಸಾಧನೆ



ಮಾದಾಪುರ ಸಂತ ತೆರೇಸ್ಸಾ ಶಾಲೆಯಲ್ಲಿ ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರ ಪರ ಶಾಸಕ ಸಿ.ಪುಟ್ಟರಂಗಶೆಟ್ಟಿ ಮತಯಾಚಿಸಿದರು.

ಚಾಮರಾಜನಗರ: ಜೆಡಿಎಸ್ ಹಾಗೂ ಬಿಜೆಪಿ ಶಿಕ್ಷಕರ ವರ್ಗಕ್ಕೆ ಯಾವುದೇ ಕೊಡುಗೆ ನೀಡಿಲ್ಲ. ಬರೀ ಸುಳ್ಳು ಹೇಳುವುದೇ ಅವರ ಸಾಧನೆಯಾಗಿದೆ ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ಹೇಳಿದರು.

ವಿಧಾನಪರಿಷತ್‌ನ ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರ ಪರ ತಾಲೂಕಿನ ಮಂಗಲ ಸರ್ಕಾರಿ ಪ್ರೌಢಶಾಲೆ, ಮಾದಾಪುರ ಸಂತ ತೆರೇಸ್ಸಾ ಶಾಲೆಯಲ್ಲಿ ಶಿಕ್ಷಕರನ್ನು ಭೇಟಿ ಮಾಡಿ ಮತಯಾಚಿಸಿ ಮಾತನಾಡಿದ ಅವರು, ದೇಶದಲ್ಲೇ ಕಾಂಗ್ರೆಸ್ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿದೆ. ಜೊತೆಗೆ ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸುತ್ತಿದೆ ಎಂದರು.

ಮರಿತಿಬ್ಬೇಗೌಡರ ಗೆಲುವು ಖಚಿತ: ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರು ವಾಗ್ಮಿಯಾಗಿದ್ದು, ಉತ್ತಮ ಆಡಳಿತಗಾರರಾಗಿದ್ದಾರೆ. ಅವರ ಪರವಾಗಿ ಕ್ಷೇತ್ರದಲ್ಲಿ ಉತ್ತಮ ವಾತಾವರಣವಿದ್ದು, ಅವರು ಗೆಲುವ ಸಾಧಿಸಲಿದ್ದಾರೆ ಎಂದು ಪುಟ್ಟರಂಗಶೆಟ್ಟಿ ವಿಶ್ವಾಸ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಚಿಕ್ಕ ಮಹದೇವು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹಮ್ಮದ್ ಅಸ್ಗರ್, ಕಾರ್ಮಿಕ ವಿಭಾಗದ ರಾಜ್ಯ ಕಾರ್ಯದರ್ಶಿ ಪಂಕಜಾ ಶಿವಕುಮಾರ್, ಮಂಗಲ ಗ್ರಾಪಂ ಅಧ್ಯಕ್ಷ ಅಣ್ಣಪ್ಪಸ್ವಾಮಿ, ಮಾದಾಪುರ ಗ್ರಾಪಂ ಅಧ್ಯಕ್ಷ ರೂಪೇಶ್, ಮುಖಂಡರಾದ ಸೋಮಣ್ಣೇಗೌಡ, ಮಂಗಲ ಶಿವಣ್ಣ, ಯಜಮಾನರಾದ ನಾರಾಯನ ಶೆಟ್ಟಿ, ಮಹದೇವಶೆಟ್ಟಿ, ಕಾಗಲವಾಡಿ ಚಂದ್ರು, ಸ್ವಾಮಿ ಇತರರು ಹಾಜರಿದ್ದರು.

ಆರ್ಥಿಕತೆಯಲ್ಲಿ ಸಹಕಾರ ಚಳವಳಿ ಮಹತ್ತರ ಪಾತ್ರ



ಚಾ.ನಗರದ ಮಹಾಮನೆ ಸಭಾಂಗಣದಲ್ಲಿ ನಡೆದ ತರಬೇತಿ ಕಾರ್ಯಕ್ರಮವನ್ನು ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ಅಧ್ಯಕ್ಷ ಜಿ.ನಂಜನಗೌಡ ಉದ್ಘಾಟಿಸಿದರು.

ಚಾಮರಾಜನಗರ: 118 ವರ್ಷಗಳ ಇತಿಹಾಸವಿರುವ ಸಹಕಾರ ಚಳವಳಿ ಪ್ರಸ್ತುತ ದೇಶದಲ್ಲಿ ಆರ್ಥಿಕ ಸಮಾನತೆಯಲ್ಲಿ ಮಹತ್ತರ ಪಾತ್ರ ವಹಿಸಿದೆ ಎಂದು ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ಅಧ್ಯಕ್ಷ ಜಿ.ನಂಜನಗೌಡ ಹೇಳಿದರು.


ನಗರದ ಮಹಾಮನೆ ಸಭಾಂಗಣದಲ್ಲಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರಿಗೆ ಹಮ್ಮಿಕೊಂಡಿದ್ದ ಆಡಳಿತ ಪರಿಣಿತಿ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಹಕಾರಿ ಕ್ಷೇತ್ರವನ್ನು ಪುನರ್ ಸಂಘಟಿಸುವ ದೃಷ್ಟಿಯಿಂದ ಸಹಕಾರಿಗಳಿಗೆ ಸ್ವಾಯತ್ತತೆಯನ್ನು ನೀಡಿ, ಸ್ವಯಂ ಆಡಳಿತ ಹಾಗೂ ಸ್ವಯಂ ನಿಯಂತ್ರಣದ ಅವಕಾಶವನ್ನು ಒದಗಿಸಲು 2001ರಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ತರಲಾಗಿದೆ. ಈ ಕಾಯ್ದೆಯಡಿ ಇದುವರೆಗೆ 6250ಕ್ಕಿಂತಲೂ ಹೆಚ್ಚಿನ ಸೌಹಾರ್ದ ಸಹಕಾರಿಗಳು ನೋಂದಣಿಯಾಗಿ 60 ಲಕ್ಷಕ್ಕಿಂತ ಹೆಚ್ಚಿನ ಸದಸ್ಯರನ್ನು ಹೊಂದಿದ್ದು, ಉತ್ತಮ ಮಾದರಿಯಾಗಿ ಕಾರ್ಯ ನಿರ್ವಹಿಸುತ್ತಿವೆ ಎಂದರು.

ಇದರ ಮಹತ್ವವನ್ನು ಅರಿತು 2020ರಲ್ಲಿ ಕೇಂದ್ರ ಸರ್ಕಾರ ಪ್ರತ್ಯೇಕ ಮಂತ್ರಾಲಯವನ್ನು ಸ್ಥಾಪಿಸಿ, ಅದಕ್ಕೊಂದು ಮಹತ್ತರ ಸ್ಥಾನ ನೀಡಿದೆ. ರೈತ, ಕೈಗಾರಿಕೋದ್ಯಮ, ಉತ್ಪನ್ನಗಳ ರಫ್ತು ವ್ಯವಹಾರದಲ್ಲಿ ಸಹಕಾರಿಗಳು ಅರಂಭಗೊಂಡು ಉತ್ತಮ ವ್ಯವಹಾರವನ್ನು ನಡೆಸುತ್ತಿವೆ. ಚಾಮರಾಜನಗರ ಜಿಲ್ಲೆಯಲ್ಲಿ 25ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳಿದ್ದು, ಉತ್ತಮವಾಗಿ ಕಾರ್ಯನಿರ್ವಹಿಸುವ ಹಾಗೂ ಆರ್ಥಿಕ ಅಭಿವೃದ್ಧಿ ಪಥದಲ್ಲಿ ಮುಂದುವರಿಯಬೇಕು ಎಂಬ ಉದ್ದೇಶದಿಂದ ಈ ತರಬೇತಿಯನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು.

ಉಪಾಧ್ಯಕ್ಷ ಎ.ಆರ್.ಪ್ರಸನ್ನಕುಮಾರ್ ಮಾತನಾಡಿ, ಕಾಯ್ದೆಗೋಸ್ಕರ ಸಭೆಗಳನ್ನು ಮಾಡಬೇಡಿ. ಈ ಗಡಿಯಲ್ಲಿ ಸೌಹಾರ್ದ ಸಹಕಾರಿಗಳು ಹೆಚ್ಚಾಗಬೇಕು. ಈ ನಿಟ್ಟಿನಲ್ಲಿ ಯಾವ ಕ್ರಮಗಳನ್ನು ಕೈಗೊಳ್ಳಬೇಕೆಂಬ ಬಗ್ಗೆ ಆಡಳಿತ ಪರಿಣಿತಿ ತರಬೇತಿಯನ್ನು ಸಂಪನ್ಮೂಲ ವ್ಯಕ್ತಿಗಳು ನೀಡುತ್ತಿದ್ದಾರೆ ಎಂದು ಅವರು ಹೇಳಿದರು.

ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿರ್ದೇಶಕರಾದ ಭಾರತಿ ಜಿ.ಭಟ್, ಎಸ್.ಕೆ. ಮಂಜುನಾಥ್ ಮಾತನಾಡಿದರು. ನಿವೃತ್ತ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪನಿರ್ದೇಶಕ ರಾಮಪ್ಪ, ಜಿಲ್ಲಾ ನಿರ್ದೇಶಕ ಬಾಲಸುಬ್ರಹ್ಮಣ್ಯಂ, ಪ್ರಾಂತೀಯ ಅಧಿಕಾರಿ ಗುರುಪ್ರಸಾದ್ ಬಂಗೇರ, ಸಿದ್ದಮಲ್ಲೇಶ್ವರ ಸೌಹಾರ್ದ ಸಹಕಾರಿಯ ರಾಮಸಮುದ್ರ ಬಾಬು ಇದ್ದರು.

ಮಾದಪ್ಪನ ಹುಂಡಿಯಲ್ಲಿ 2.58 ಕೋಟಿ ಸಂಗ್ರಹ



ಹನೂರು: ಮಲೆಮಹದೇಶ್ವರಬೆಟ್ಟದ ಮಹದೇಶ್ವರಸ್ವಾಮಿ ದೇವಸ್ಥಾನದ ಹುಂಡಿಯಲ್ಲಿ 2.58 ಕೋಟಿ ರೂ. ಸಂಗ್ರಹವಾಗಿದೆ.

ಮಹದೇಶ್ವರಬೆಟ್ಟದ ಬಸ್ ನಿಲ್ದಾಣದ ವಾಣಿಜ್ಯ ಸಂಕೀರ್ಣ ಕಟ್ಟಡದ ಮೊದಲ ಮಹಡಿಯ ವಿಶ್ರಾಂತಿ ಗೃಹದಲ್ಲಿ ಬುಧವಾರ ನಡೆದ ಹುಂಡಿಗಳ ಎಣಿಕೆ ಕಾರ್ಯದಲ್ಲಿ 2,58,44,097 ರೂ., 93 ಗ್ರಾಂ ಚಿನ್ನ, 3 ಕೆಜಿ 350 ಗ್ರಾಂ ಬೆಳ್ಳಿ, ಸೌದಿಅರೇಬಿಯ, ಜಪಾನ್, ನೇಪಾಳ, ಕತಾರ್ ದೇಶದ ನೋಟುಗಳು ಸಿಕ್ಕಿವೆ. ಚಲಾವಣೆಯಲ್ಲಿ ಇಲ್ಲದ 2000 ರೂ. ಮುಖಬೆಲೆಯ 25 ನೋಟುಗಳು ಸಂಗ್ರಹವಾಗಿವೆ. 30 ದಿನಗಳಲ್ಲಿ ದೇವಸ್ಥಾನದ ಹುಂಡಿಗಳಲ್ಲಿ ಸಂಗ್ರಹವಾದ ಹಣವನ್ನು ಎಣಿಕೆ ಮಾಡಲಾಯಿತು ಎಂದು ಮಲೆಮಹದೇಶ್ವರಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ತಿಳಿಸಿದ್ದಾರೆ.

ನೋಂದಣಿಯಾಗದ ಕ್ಲಿನಿಕ್‌ಗಳ ವಿರುದ್ಧ ಕ್ರಮ

ಚಾಮರಾಜನಗರ, ಮೇ 29– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಕೆಪಿಎಂಇಎ ಕಾಯ್ದೆಯನುಸಾರ ನೋಂದಣಿ ಮಾಡದೆ ಖಾಸಗಿ ವೈದ್ಯ ವೃತ್ತಿ ನಡೆಸುವ ಜಿಲ್ಲೆಯ ಕೆಲವು ಕ್ಲಿನಿಕ್‌ಗಳನ್ನು ಮುಚ್ಚಿಸಲಾಗಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಕೆಪಿಎಂಇಎ ಕಾಯ್ದೆಯಡಿ ಖಾಸಗಿಯಾಗಿ ವೈದ್ಯ ವೃತ್ತಿ ನಡೆಸುವವರು ನೋಂದಣಿ ಮಾಡಿಸಿ, ನಂತರ ವೃತ್ತಿ ನಡೆಸಬೇಕು. ಈ ನಿಟ್ಟಿನಲ್ಲಿ ಜಿಲ್ಲೆಯ ಕೆಲ ಕ್ಲಿನಿಕ್‌ಗಳನ್ನು ಪರಿಶೀಲಿಸಿ, ಅನ್‌ಕ್ವಾಲಿಫೈಡ್ ಮತ್ತು ಅನ್‌ರಿಜಿಸ್ಟರ್ಡ್ ಆಗಿದ್ದ ಕಾರಣ ಅಂತಹ ಕ್ಲಿನಿಕ್‌ಗಳನ್ನು ಮುಚ್ಚಿಸಲಾಗಿದೆ.

ಚಾಮರಾಜನಗರ ತಾಲೂಕಿನ ಅಮಚವಾಡಿ ಗ್ರಾಮದ ವಸಂತ್ ಕುಮಾರ್ ಕ್ಲಿನಿಕ್, ಅರಕಲವಾಡಿಯ ವಿಷ್ಣು ಕ್ಲಿನಿಕ್ ಅಂಡ್ ಡಯಾಗ್ನೋಸ್ಟಿಕ್ ಸೆಂಟರ್, ಶ್ರೀ ಶಕ್ತಿ ಕ್ಲಿನಿಕ್, ಅಂಕ ಶೆಟ್ಟಿಪುರದ ಸಾಯಿ ರಾಮ್ ಕ್ಲಿನಿಕ್, ಕೊಳ್ಳೇಗಾಲದ ಶಿಫಾ ಆಯುಷ್ ಕ್ಲಿನಿಕ್ (ಫೈಲ್ಸ್ ಮತ್ತು ಫಿಸ್ತೂಲ), ಹನೂರು ತಾಲೂಕು ಹೂಗ್ಯಂನ ಮಹದೇವಶೆಟ್ಟಿ ತೋಟದ ಮನೆಯ ನಾಮಫಲಕವಿಲ್ಲದ ಕ್ಲಿನಿಕ್, ಮಲೆಮಹದೇಶ್ವರಬೆಟ್ಟದ ಮುಖ್ಯ ರಸ್ತೆಯ ವಡಕೆಹಳ್ಳದ ನಾಮಫಲಕವಿಲ್ಲದ ನಸ್ರೀನ್ ಬಾನು ಕ್ಲಿನಿಕ್, ಜಲ್ಲಿ ಪಾಳ್ಯ ಮುಖ್ಯ ರಸ್ತೆಯ ಶರವಣ ತಿರುಪುರ ಕ್ಲಿನಿಕ್‌ಗಳನ್ನು ಮುಚ್ಚಿಸಲಾಗಿದೆ.

ಮುಂದಿನ ದಿನಗಳಲ್ಲಿ ಕೆಪಿಎಂಇಎ ಕಾಯ್ದೆಯಡಿ ನೋಂದಣಿಯಾಗದೇ ಖಾಸಗಿಯಾಗಿ ವೈದ್ಯ ವೃತ್ತಿ ನಡೆಸಿದರೆ ನಿಯಮಾನುಸಾರ ಕ್ಲಿನಿಕ್ ಮುಚ್ಚಿಸಿ ಕ್ರಮ ವಹಿಸಲಾಗುವುದು ಎಂದು ಜಿಲ್ಲಾ ಆರೋಗ್ಯ ಮತ್ತು ಕಲ್ಯಾಣಾಧಿಕಾರಿ ಡಾ.ಎಸ್.ಚಿದಂಬರ ಪ್ರಕಟಣೆಯಲ್ಲಿ ಎಚ್ಚರಿಸಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821-2496522/23

ಸುವರ್ಣಾವಕಾಶ
Part / Full Time
Earn Extra Income
ನೌಕರರು, ನಿವೃತ್ತರು.
ಗೃಹಿಣಿಯರು, ಉದ್ಯಮಿಗಳು,
ವಿದ್ಯಾರ್ಥಿಗಳು, ವೃತ್ತಿಪರರು
7624874832

SURYA COACHING
Excellent coaching for 2nd PUC Commerce in Accounts, Statistics, Basic Maths etc.
Low fees, Free coaching for poor students. Only 6 students per batch. 100% individual attention.
Contact: Professor Sharma MSS
9901932751

ಮೊಬೈಲ್ ಅಂಗಡಿ ಮಾರಾಟಕ್ಕಿದೆ
ಬಸವನಗುಡಿ – ಮೇಟಗಳ್ಳಿ ಮುಖ್ಯರಸ್ತೆಯಲ್ಲಿ ಸುಸಜ್ಜಿತವಾಗಿ ರೆಡಿಯಾಗಿ ರನ್ನಿಂಗ್‌ನಲ್ಲಿರುವ ಅಂಗಡಿ ತಕ್ಷಣಕ್ಕೆ ಮಾರಾಟಕ್ಕಿದೆ.
Mob: 8217323951

COMMERCIAL BUILDING FOR RENT
Ground + 3 floors each 800Sq.ft. with lift facility at Chamaraja Double Road, Mysore, Suitable for Office, Bank, Financial institutions, Co-Operative Banks, Gold loan bank, Diagnostic Centre etc.,
Contact: 98866 22773 98440 13012

ಮನೆ ಬಾಡಿಗೆಗೆ ಇದೆ
ಕೆ.ಜಿ. ಕೊಪ್ಪಲ್ 3ನೇ ಕ್ರಾಸ್
2 BHK with Solar
ಮನೆ ಬಾಡಿಗೆಗೆ ಇದೆ
8904903144

ಶ್ರೀ ಗೌರಿಶಂಕರ ಟ್ರಾವೆಲ್ಸ್
5-6-2024 (11 ದಿನ): ಅಯೋಧ್ಯೆ, ನೇಪಾಳ್, ಕಠ್ಮಂಡು, ಪೋಕ್ರ, ಮುಕ್ತಿನಾಥ್, ಲುಂಬಿನಿ, ಮನೋಕಾಮನ, ಕಾಶಿ, ಇತ್ಯಾದಿ. 24-7-2024 (4 ದಿನ): ಭೀಮಾ ಶಂಕರ, ಶಿರಡಿ, ಘೃಷ್ಣೇಶ್ವರ, ಎಲ್ಲೋರ, ತ್ರ್ಯಯಂಬಕೇಶ್ವರ ಇತ್ಯಾದಿ. 21-8-24 (3 ದಿನ): ಇಂದೋರ್, ಉಜ್ಜಯಿನಿ, ಓಂಕಾರೇಶ್ವರ
(ವಿಮಾನ, ಬಸ್, ಊಟ, ರೂಂ)
Mob: 9620002114

ವೃದ್ಧಾಶ್ರಮ
ಹಿರಿಯ ಜೀವಗಳಿಗೆ, ಹಾಸಿಗೆ ಹಿಡಿದ ವೃದ್ಧರನ್ನು, ಪಾರ್ಶ್ವವಾಯು ಪೀಡಿತರು, ಹಾಗೂ ಕೈಲಾಗದ ವಯೋ ವೃದ್ಧರನ್ನು ಮನೆಯಂತೆಯೇ ನೋಡಿ ಕೊಳ್ಳುತ್ತಿರುವ ಸಂಸ್ಥೆ ನಮ್ಮ ಮೈಸೂರಿನಲ್ಲಿ ಊಟ, ವಸತಿ, ವೈದ್ಯಕೀಯ ಸೌಲಭ್ಯದೊಂದಿಗೆ ಇಚ್ಛೆವುಳ್ಳವರು ಸಂಪರ್ಕಿಸಿ
9110455297 | 9591557126

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

SITE FOR SALE
30x40 E/F
Bogadi Road.
Rs. 46 Lakhs.
Mob: 9740088990

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8880558064

ತಕ್ಷಣ ಬೇಕಾಗಿದ್ದಾರೆ
ಆಫೀಸ್ ಕೆಲಸಕ್ಕಾಗಿ ಕಂಪ್ಯೂಟರ್ ಜ್ಞಾನವುಳ್ಳ ಮಹಿಳಾ ಅಭ್ಯರ್ಥಿ ಬೇಕಾಗಿದ್ದಾರೆ
ಭೂಮಿಪುತ್ರ ರೈತಮಿತ್ರ
0821- 2979000 | 98453 95000
#669, ಎಸ್‌ಜೆಸಿಇ ರಸ್ತೆ, ದಿಗಂತ ವೃತ್ತ ಹತ್ತಿರ, ಟಿ.ಕೆ. ಬಡಾವಣೆ, ಮೈಸೂರು

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಆದಿ ಕರ್ನಾಟಕ (SC) ವಧು-ವರರ ಮಾಹಿತಿ ಕೇಂದ್ರ
B.A., B.Sc, B.Com, MA, M.Sc., MBA, MBBS, Engineers, Ph.D, B.Ed., M.Ed.
ವಿವಾಹ ನೊಂದಣಿಗೆ ಕರೆ ಮಾಡಿ.
Mob: 91647 43059

ORIGINAL NEEM PLYWOOD
ಫ್ಯಾಕ್ಟರಿ ದರದಲ್ಲಿ
Boards & Doors
NeemBOND PLATINUM
10 ವರ್ಷಗಳ ವಾರೆಂಟಿ
9901291267, 9845426862

ಪುನಮ್ ಪ್ಯಾಕೇಜ್ ಟೂರ್ಸ್ ವೀಕೆಂಡ್ ಪ್ರವಾಸ
ದಿನಾಂಕ : 08 ಮತ್ತು 09 ಜೂನ್ 2024 – 02 ದಿನಗಳು – ಒಬ್ಬರಿಗೆ Rs. 5250/– ನಿರ್ವಾಣ ಬೀಚ್, ಪ್ಯಾರಡೈಸ್ ಬೀಚ್ ಟ್ರೆಕ್ಕಿಂಗ್, ಮಿರ್ಜಾನ್ ಕೋಟೆ, ಯಾಣ ಗುಹೆ, ಮುರುಡೇಶ್ವರ, ಇಡಗುಂಜಿ ದೇವಸ್ಥಾನ, ನೀಲಗೋಡು ಚೌಡೇಶ್ವರಿ ದೇವಿ ದೇವಸ್ಥಾನ. * ಊಟ ತಿಂಡಿ ಕಾಫಿ/ಟೀ & * ಪ್ರತ್ಯೇಕ ಬ್ಯಾಂಬೂ ಹಟ್ ಸ್ಟೇ
ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ
ಮೊಬೈಲ್: 70222 71023

ಮೈಸೂರಿನಲ್ಲೇ ಪಾರ್ಟ್‌ಟೈಮ್ ಜಾಬ್
ಮೈಸೂರಿನ ಟ್ರಾನ್ಸ್ ಪೋರ್ಟ್ ಆಫೀಸಿನಲ್ಲಿ ಬೆಳಗ್ಗೆ 11ರಿಂದ ಮಧ್ಯಾಹ್ನ 3 ಅಥವಾ ಮಧ್ಯಾಹ್ನ 3 ಗಂಟೆಯಿಂದ 7 ಗಂಟೆ ತನಕ ಅಥವಾ ಸಂಜೆ 6 ಗಂಟೆಯಿಂದ ರಾತ್ರಿ 10 ಗಂಟೆಯ ತನಕ ಈ ಮೂರು ಪ್ರತ್ಯೇಕ ಅವಧಿಗಳಲ್ಲಿ ಆಫೀಸ್ ಸಹಾಯಕ ಕೆಲಸಕ್ಕೆ ಯುವಕರು ಬೇಕಾಗಿದ್ದಾರೆ. ವಿದ್ಯಾರ್ಹತೆ ಎಸ್‌ಎಸ್‌ಎಲ್‌ಸಿ ಪಾಸ್ ಆಗಿರಬೇಕು. ಆರಂಭಿಕ ವೇತನ 6000. ಹೆಚ್ಚಿನ ಮಾಹಿತಿಗಾಗಿ ಸಂಪರ್ಕ ಸಂಖ್ಯೆ: 9740408488 / 08272221912

ವಿಶೇಷತೆ ಆರ್ಥೋಪೆಡಿಕ್ ಕ್ಲಿನಿಕ್
ಪಾದ ಮತ್ತು ಪಾದದ ಕೀಲಿನ ಸಮಸ್ಯೆಗಳಿಗೆ
ಭೇಟಿ ಕೊಡಿ : ಮಹಾವೀರ್ ಪಾದ ಮತ್ತು ಪಾದದ ಕೀಲಿನ ಸೆಂಟರ್
ನಂ. 926, ವಿಶ್ವಧಾತ್ರಿ ರಸ್ತೆ, ವಿವೇಕಾನಂದನಗರ, ವಿವೇಕಾನಂದ ವೃತ್ತ, ಮೈಸೂರು–23
ಪ್ರತಿ ಮಂಗಳವಾರ ಬೆ. 9 ರಿಂದ ಮ.12
ಫಿಸಿಯೋಥೆರಪಿ ಪ್ರತಿ ದಿನ ಸಂಜೆ 5.30PM-8PM
ಸಂದರ್ಶನಕ್ಕೆ ಕರೆ ಮಾಡಿ
7204080539, 0821-4000961
Main Clinic ಬೆಂಗಳೂರಿನಲ್ಲಿ

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8861401315



ಸ್ಕೂಲ್ ಯೂನಿಫಾರಂ ಹೋಲ್‌ಸೇಲ್ ಬೆಲೆಯಲ್ಲಿ
ಸದ್ವಿದ್ಯ, ಅಮೃತಮಯಿ, ನಟರಾಜ ಕಾನ್ವೆಂಟ್, ನಳಂದ, ಮರಿಮಲ್ಲಪ್ಪ, ಅವಿಲ, ರೋಟರಿವೆಸ್ಟ್, ಆದರ್ಶ, ಸೇಂಟ್‌ಮೇರೀಸ್, ಸೇಂಟ್ ರೋಸೆಲೋ
ಭಾವಸಾರ್ ಶ್ರೀಗಣೇಶ್
ಅಗ್ರಹಾರ, ಬಸವೇಶ್ವರ ರಸ್ತೆ, 5ನೇ ಕ್ರಾಸ್, ಮೈಸೂರು

ಬೋಳು ತಲೆಯ ಸಮಸ್ಯೆಯೇ?



ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
6361056646, 7676844160

ಇಲವಾಲ ಸೈಟ್ ಮಾರಾಟಕ್ಕೆ ಇದೆ
ಇಲವಾಲ Bus Stand ಹತ್ತಿರದಲ್ಲೇ
ಮೂಡ ಸೈಟ್ 30x40
ಮಾರಾಟಕ್ಕೆ ಇದೆ. ಸಂಪರ್ಕಿಸಿ:
7760612838

ಪುನಮ್ ಪ್ಯಾಕೇಜ್ ಟೂರ್ಸ್
ತಮಿಳುನಾಡು ಪ್ರವಾಸ
ದಿನಾಂಕ: 13ನೇ ಜುಲೈ 2024
ಒಟ್ಟು ದಿನಗಳು : 06
ತಿರುಪತಿ ಪ್ರವಾಸ
ದಿನಾಂಕ : 27 ಜುಲೈ 2024
ಒಟ್ಟು ದಿನಗಳು : 03
ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ
ಮೊಬೈಲ್: 70222 71023

ಬೇಕಾಗಿದ್ದಾರೆ
ಶುದ್ಧ ಸಸ್ಯಾಹಾರಿ ಅಡುಗೆ ಮಾಡಲು ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ.
ಇಲ್ವಲ್ ಮತ್ತು ವಿಜಯನಗರದಲ್ಲಿರುವವರಿಗೆ ಆದ್ಯತೆ ನೀಡಲಾಗುವುದು.
ಸಂಪರ್ಕಿಸಿ : 6361144581

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training. www: imkta.in
ALPHA INTERNATIONAL SCHOOL @ Srirampura
Call: 7829937469
ONLINE TRAINING AVAILABLE

DTCP SITES FOR SALE
DTCP Sites
With RERA
Near Jayapura,
H.D. Kote Road, Mysore.
9590491194, 9606783264

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854


MUDA SITE WANTED
50x80 @
Vijayanagar 1st and 2nd Stage.
Brokers Excuse
Mob: 9986629717

ಕಳೆದಿದೆ
ನಾಗವೇಣಿ ಎಸ್. ಇವರ ಸ್ವತ್ತು ನಂ. 459-B, 4ನೇ ಮೇನ್, 17ನೇ ಕ್ರಾಸ್, ವಿದ್ಯಾರಣ್ಯಪುರಂ, ಮೈಸೂರು-570008 ಇದರ ಮೂಲ ದಾಖಲಾತಿಗಳು ಮನೆ ಸ್ಥಳಾಂತರ ಮಾಡುವ ಸಮಯದಲ್ಲಿ ಕಳೆದಿದ್ದು, ಯಾರಿಗಾದರು ಸಿಕ್ಕಿದಲ್ಲಿ ಸಂಪರ್ಕಿಸಿ:
Mob: 9164609131

HOUSES & OFFICE SPACE FOR RENT
@ Saraswathipuram, Kuvempunagar & Surroundings. S.S. Property Services (Opp. Kuvempu School), S.S. Puram, Mysore
9342125252

ಅಡುಗೆಯವರು ಬೇಕಾಗಿದ್ದಾರೆ
ಬೆಳಿಗ್ಗೆ ಸಮಯದಲ್ಲಿ ಮನೆಯಲ್ಲಿ ಅಡುಗೆ ಮಾಡಲು ಲಿಂಗಾಯತ ಮಹಿಳೆ ಬೇಕಾಗಿದ್ದಾರೆ. 4ನೇ ಹಂತ, ವಿಜಯನಗರ, ಬಸವರಾಜು ಸರ್ಕಲ್ ಹತ್ತಿರ, ಮೈಸೂರು
8310846772
8861953709

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋಚರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗ ದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು-1



V-GUARD
10 ವರ್ಷಗಳ ವ್ಯಾರಂಟಿ
Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಹಾಸ್ಟೆಲ್‌ನಲ್ಲಿ ಕೆಲಸ ಮಾಡಲು ಅಡುಗೆ ಭಟ್ಟರು ಬೇಕಾಗಿದ್ದಾರೆ
ಭಟ್ಟರು: 18000-22000
ಸಹಾಯಕರು: 12000-15000
ಪಾಂಡವಪುರ, ಮಂಡ್ಯ
7338138083

FOR SALE
1. 20x30, 30x40, 30x50 Near Defence Apartments, HD Kote Road
2. 30x50 Near Varuna Lake
3. 2&3 BHK Flats at RK Nagar
4. 70x140 Farm House Plots @ KRS Back Water Attach 20L
5. 40x72, 35x45 House Vidyaranyapuram
6. 20x30, Sites For Sale At Yelwala
30x40 Sites at Bogadi Rainbow School
PRAKRUTHI PROPERTIES
95386 90359, 90359 90359

S.L.N.S ENGLISH MEDIUM SCHOOL
Near KRS Main road, Mogarahally
Vacancies for primary and high school
Teaching staff : Pre primary trained teachers
English - B.A, D.Ed/B.Ed
Science - B.Sc, D.Ed/B.Ed
Maths - B.Sc, D.Ed/B.Ed
Hindi - B.A, D.Ed/B.Ed.
9482143347, 9538275947

HOUSE FOR SALE
@ MUDA Layout 2+1 BHK 20x30 South facing site East facing door Shanthaveri Gopalagowdanagar, Mysore.
9740019514, 9738884777

ಬೇಕಾಗಿದ್ದಾರೆ
ಗ್ರಾಫಿಕ್ ಡಿಸೈನರ್
Corel Draw & Photoshop ಕಲಿತಿರಬೇಕು
ಹೆಲ್ಪರ್ಸ್ ಹುಡುಗರು
ಆಕರ್ಷಕ ಸಂಬಳ
ಮಂಡಿ ಮೊಹಲ್ಲಾ, ಮೈಸೂರು
Call: 91082 20848

ಬೇಕಾಗಿದ್ದಾರೆ
ಕಲೆಕ್ಷನ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ದ್ವಿಚಕ್ರ ವಾಹನ ಕಡ್ಡಾಯ
ಟಾಟಾ ಏಸ್ ಡ್ರೈವರ್
ಡ್ರೈವಿಂಗ್ ಲೈಸನ್ಸ್ ಹೊಂದಿರಬೇಕು
ಅಶೋಕ ರೋಡ್, ಮೈಸೂರು
Call: 95382 22384
0821 - 4267800

SITES for SALE
JP Nagar Ring Road
30 x 40 - 33 Lakhs, Near Gurur Bus Stop, Ramabainagar, Mysore.
DTCP approved (Corporation limits)
1.5 Kms from JP Nagar Ring Road
8660105902

HOUSE SALE
Vijaynagar
4 Floors Rent Earning House, 1 Year Old, 30x40, MUDA, Price - 1.95 Cr,
Within Ring Road, Vijayanagar 4th Stage 1st Phase
8660105902

ಬೇಕಾಗಿದ್ದಾರೆ
ಕಂಪ್ಯೂಟರ್ ಆಫೀಸ್‌ನಲ್ಲಿ ಕೆಲಸಕ್ಕೆ ITI ಮಾಡಿರುವ 25 ವರ್ಷದೊಳಗಿನ ದ್ವಿಚಕ್ರ ವಾಹನ ಮತ್ತು ಲೈಸನ್ಸ್ ಹೊಂದಿರುವ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ.
Mob: 8073393505

WANTED SITES
At Bogadi, Dattagalli, Vijayanagar, Yelwala, Mysore-Bannur-T.N. Pura Road & Mysore surrounding. Quick Regn.
95388-29926

ಸುವರ್ಣಾವಕಾಶ
ಮೈಸೂರಿನಲ್ಲಿ ನೂತನವಾಗಿ ಶುರುವಾಗಿರುವ ಕಂಪನಿ & ಆಫೀಸ್‌ಗಳಿಗೆ Packing, Helper, quality, Telephone Attenders, Receptionist, Typing, Drivers etc. ಮುಂತಾದ ಕೆಲಸಗಳಿಗೆ 7th, 10th, PUC, ITI, Diploma, Any Degree pass / fail ಆದ ಯುವಕ / ಯುವತಿಯರು ಬೇಕಾಗಿದ್ದಾರೆ. ಸಂಬಳ 14500 – 39500 (ESI+PF+OT). ಸಂಪರ್ಕಿಸಿ:
6364103418, 9513829246

ಶ್ರೀ ಮಹಾಲಕ್ಷ್ಮೀ ಟ್ರಾವೆಲ್ಸ್
5-6-24: ಕಾಶಿ, ಗಂಯಾ, ಅಯೋಧ್ಯೆ, ಪ್ರಯಾಗ್‌ರಾಜ್. 17-6-24: ಪುರಿ ಜಗನ್ನಾಥ್, ಭುವನೇಶ್ವರ್, ಕೋನಾರ್ಕ್, ಚಂದ್ರಭಾಗ ಬೀಚ್. 27-6-24: ಮಧುರೈ, ಕನ್ಯಾಕುಮಾರಿ, ರಾಮೇಶ್ವರಂ. 28-6-24: ನೇಪಾಳ್, ಮುಕ್ತಿನಾಥ. 18-7-24: ಗುಜರಾತ್ 8 ದಿನಗಳು.
9591017782, 9964527782

ಮನೆ ಕೆಲಸಕ್ಕೆ ಬೇಕಾಗಿದ್ದಾರೆ
ಶಾರದದೇವಿನಗರದಲ್ಲಿ ಮನೆ ಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ. ವಯೋಮಿತಿ: 30 ರಿಂದ 45 ವರ್ಷ.
ಸಮಯ: 8 am to 2 pm.
9606981213, 9606981203

ಸುವರ್ಣ ಯಾತ್ರ
1) ನೇಪಾಳ ಮುಕ್ತಿನಾಥ, ಪಶುಪತಿನಾಥ, ಅಯೋಧ್ಯೆ, ಪೋಕ್ರ, ಕಠ್ಮಂಡು ಪ್ರವಾಸ, 9 ದಿನಗಳು 18-6-24 ಹಾಗೂ 12-7-24.
2) ಪುರಿ ಜಗನ್ನಾಥ್, ಕೋನಾರ್ಕ್, ಭುವನೇಶ್ವರ್ 4 ದಿನಗಳು 14-6-24.
9019462508, 9480843945

(TVS XL100)
ಒಂದು ತಿಂಗಳ ಒಂದು ಸಾವಿರ ಕಿಲೋಮೀಟರ್ ಓಡಿರುವ TVS XL100 ಮಾರಾಟಕ್ಕಿದೆ. ಮಳಿಗೆ ಬಾಡಿಗೆಗೆ ಇದೆ. ಸ್ಥಳ ಅಗ್ರಹಾರ ನೂರೊಂದು ಗಣಪತಿ ದೇವಸ್ಥಾನದ ಹಿಂಭಾಗ.
Mob: 9591846123

ಕೆಲಸಕ್ಕೆ ಬೇಕಾಗಿದ್ದಾರೆ
ಜೆ.ಪಿ. ನಗರ ಪ್ರತಿಷ್ಠಿತ ಕಂಪನಿಗೆ ಹೌಸ್‌ಕೀಪಿಂಗ್ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ.
ಸಮಯ: 8 am to 4 pm.
ಸಂಬಳ: 8,000.
Mob: 9019562901

ತಕ್ಷಣ ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡ್ಸ್ : SSLC / PUC
2) ಹೌಸ್‌ಕೀಪಿಂಗ್ : ಹುಡುಗರು / ಮಹಿಳೆಯರು
ESI, PF and Weekly Off ಇರುತ್ತದೆ.
9739166772, 9880419847

ಬೇಕಾಗಿದ್ದಾರೆ
ಮೈಸೂರು, ಹೆಬ್ಬಾಳಿನ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಹೆಲ್ಪರ್‌ಗಳು, ಟೈಲರ್‌ಗಳು, ಸೆಕ್ಯೂರಿಟಿ ಗಾರ್ಡುಗಳು ಹಾಗೂ ಅಕೌಂಟೆಂಟ್‌ಗಳು (Accounts) ಬೇಕಾಗಿದ್ದಾರೆ.
7795285485, 8105249880

HOUSE FOR SALE
30x40 West facing, furnished 3 years old house, ground floor 2 BHK, 1st Floor 1 room at Sourish Layout, behind Sahukar Hundi, 5 km from Bogadi Ring Road.
Mob: 9620349543

COMMERCIAL SITE FOR SALE
No. 50, 2180 sq.ft., 80 ft road, attached to Sharada Public School, Dattagalli.
Contact:
8217042841

SITE FOR SALE
30x40 North Face, Vijayanagar 4th Stage, 2nd Phase.
Contact:
Mob: 9035263697

SITE FOR SALE
30x40 North face, Roopanagara, adjacent to SBM Layout, Bogadi. Rs. 63 Lakhs.
Contact:
Mob: 8197997137

ಬೇಕಾಗಿದ್ದಾರೆ
ಕಂಪನಿಯಲ್ಲಿ ಕೆಲಸ ಮಾಡಲು ನುರಿತ ಸೆಕ್ಯೂರಿಟಿ ಸೂಪರ್‌ವೈಸರ್ ಹಾಗೂ ಗಾರ್ಡ್‌ಗಳು ಬೇಕಾಗಿರುತ್ತಾರೆ. ಸ್ಥಳ: ಮೈಸೂರು ಸಿಟಿ, ಕೈಗಾರಿಕ ಪ್ರದೇಶ ಮತ್ತು ಸಿದ್ದಾರ್ಥ ನಗರ.
Office Assistant ಬೇಕಾಗಿದ್ದಾರೆ
7829393555, 9741515239

WANTED
TAGS
Footwear and Accessories
Salesman Required with experience for 3-5 years in the Footwear Showroom
Salary - 12000/- to 15000/- (Negotiable)
9611459290 / 7349319077

ಸೋಲಾರ್ ವಾಟರ್ ಹೀಟರ್
Solar Water Heater



ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

ಕಳೆದಿದೆ
ತಸ್ನೀಂ ರಿಯಾಜ್, ನಂ. 188, ಹಳೇ ಬೆಂಗಳೂರು ರಸ್ತೆ, 6-7ನೇ ಕ್ರಾಸ್, ಸುಭಾಷ್‌ನಗರ, ಮೈಸೂರು. ನಮಗೆ ಸಂಬಂಧಿಸಿದ ಮನೆ ನಂ. 188 ಮೂಡದಿಂದ ನೀಡಿರುವ ಮೈಸೂರು ಸುಭಾಷ್ ನಗರದ 6-7 ನೇ ಕ್ರಾಸ್‌ನ ವಾಸದ ಮನೆಯ ಮೂಲ ದಾಖಲೆಗಳಾದ ಮಂಜೂರಾತಿ ಪತ್ರ, ಸ್ವಾಧೀನ ಪತ್ರ, ಗುತ್ತಿಗೆ ಕರಾರು ಪತ್ರ, ಹಣ ಪಾವತಿ ರಶೀದಿ, ಮೆಮೊ, ಕೆ.ಆರ್.ವೆಂಕಟಾಚಲಶೆಟ್ಟಿರವರಿಂದ ನನ್ನ ಪತಿಯವರಾದ ಎಂ. ರಿಯಾಜ್ ಉರ್ ರೆಹಮಾನ್ ರವರಿಗೆ ಆದ ಕ್ರಯ ಪತ್ರ, ಹಾಗೂ ಇ.ಸಿ. ಇತರೆ ಮೂಲ ದಾಖಲೆಗಳು ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:
Mob: 9901077111

ಡ್ರೈವರ್‌ಗಳು ಬೇಕಾಗಿದ್ದಾರೆ
ಮೈಸೂರಿನ ವಿಜಯನಗರ ನಾಲ್ಕನೇ ಹಂತದಲ್ಲಿರುವ ಪ್ರತಿಷ್ಠಿತ ವಿದ್ಯಾಸಂಸ್ಥೆಗೆ ಚಾಲಕರು ಬೇಕಾಗಿದ್ದಾರೆ. ಆಕರ್ಷಕ ವೇತನ ಮತ್ತು ESI, PF ನೀಡಲಾಗುವುದು. ಸಂಪರ್ಕಿಸಿ:
8867475424 / 9483670193

ಬ್ರಾಹ್ಮಣ ವರ ಬೇಕಾಗಿದೆ
ಬ್ರಾಹ್ಮಣ ವಧು, ವಯಸ್ಸು 27, SSLC ಕಲಿತಿರುವ / ವಯಸ್ಸು 29, PUC / ವಯಸ್ಸು 34, SSLC ಕಲಿತಿರುವ ವಧುವಿಗೆ ವರ ಬೇಕಾಗಿದೆ. (ಕೃಷಿಕರು, ಪುರೋಹಿತರು, ಅಡುಗೆಯವರು, ಇನ್ನಿತರ ಉದ್ಯೋಗದಲ್ಲಿರುವ ವರಗಳು ಸಂಪರ್ಕಿಸಿ:
ವಿವಾಹ ವೇದಿಕೆ, ಮಂಗಳೂರು
Mob: 9880685177

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಸೂಪರ್‌ವೈಸರ್ 15,000
ಸೆಕ್ಯೂರಿಟಿ ಗಾರ್ಡ್ಸ್ 14,000
ಕೂರ್ಗಳ್ಳಿ ಕೈಗಾರಿಕಾ ಪ್ರದೇಶದಲ್ಲಿ.
ಸಂಪರ್ಕಿಸಿ:
Mob: 9035367083

SITE FOR SALE
47x60 N/E Corner SBM Layout, Bogadi.
8050821108
8792207164

ಫ್ಲಾಟ್ ಭೋಗ್ಯಕ್ಕೆ ಇದೆ
ಆಲನಹಳ್ಳಿ ಲೇಔಟ್
FLAT FOR LEASE
Alanahalli Layout
Ph: 9148448159 6366596616

CHANGE OF NAME
I, Amina Nikhath, residing at No. 130, 4th Cross, C.V. Road, Bannimantap, Mysuru-15, Karnataka, have changed my name from Amina Nikhat to Amina Nikhath on my own free will sworn in before Notary Mahesh Prasad D, Mysuru, vide affidavit dated 29-5-2024
Sd/- Amina Nikhath

ಜಮೀನು ಮಾರಾಟಕ್ಕಿದೆ
ಎಂಐಟಿ ಕಾಲೇಜ್, ಪರ್ಪಲ್ ಬ್ರೇಕ್ ಲೇಔಟ್ ಹತ್ತಿರ, ಮೈಸೂರು
33 ಗುಂಟೆ ಮತ್ತು 6.5 ಗುಂಟೆ.
9148777475
9743954475

Immediate Requirement For Running Restaurant
* Restaurant Manager
* Stewards & Captains
* Chef's - Chinese & INdian
* Continental & Tandoori
9886553185 / 9008558030

LAND FOR SALE
5.25 acres Green Belt, Kochnalli Industrial Area, adjoining total environment.
Contact:
Mr. Rajesh Revannasiddaiah
9606791121
WhatsApp: 99019 66240

ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ಯುವಕ / ಯುವತಿಯರು, ಮಹಿಳೆಯರು, ವಿಧವೆ / ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. ಯಾವುದೇ ರೀತಿಯ ಶುಲ್ಕ ಇರುವುದಿಲ್ಲ (ನಮ್ಮಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ). ಸಂಬಳ, ಉಚಿತ ಊಟ, ವಸತಿಯೊಂದಿಗೆ 15000 ರಿಂದ 20,000 ವರೆಗೆ.
Mob: 9845010281

ವೃದ್ಧಾಶ್ರಮ (ಚಾರಿಟೆಬಲ್ ಟ್ರಸ್ಟ್)
ನಿಮ್ಮ ಪ್ರೀತಿಯ ವಯಸ್ಸಾದ ವೃದ್ಧರನ್ನು, ಪಾರ್ಶ್ವವಾಯು ಪೀಡಿತರನ್ನು, ಹಾಸಿಗೆ ಹಿಡಿದ ಮತ್ತು ಯಾವುದೇ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳನ್ನು, ಶುದ್ಧ ಸಸ್ಯಾಹಾರಿ ಊಟ, ತಿಂಡಿ ಮತ್ತು ಸುಸಜ್ಜಿತವಾದ ವಸತಿ ಒಳಗೊಂಡಂತೆ ಉತ್ತಮ ಮೆಡಿಕಲ್ ಸೌಲಭ್ಯದೊಂದಿಗೆ ನಿಮ್ಮ ಮನೆಯಂತೆಯೇ ಆರೈಕೆ ಮಾಡುತ್ತೇವೆ, "ಹೋಂ ನರ್ಸಿಂಗ್ ಸೇವೆಯು ಸಹ ದೊರೆಯುತ್ತದೆ" ಸ್ಥಳ: ಮೈಸೂರು. ಸಂಪರ್ಕಿಸಿ:
Mob: 9916905188

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರಿನ ಹೃದಯಭಾಗದಲ್ಲಿರುವ ಲಾಡ್ಜ್‌ಗೆ ರಿಸೆಪ್ಷನಿಸ್ಟ್ (Night Shift) ಕೆಲಸಕ್ಕೆ ಬೇಕಾಗಿದ್ದಾರೆ. ವಯಸ್ಸಿನ ವಯೋಮಿತಿ: 20 ರಿಂದ 40ರ ಒಳಗೆ. ಡಿಗ್ರಿ ಆಗಿರುವ ಅವಶ್ಯಕತೆ ಇರುವವರನ್ನು ತೆಗೆದುಕೊಳ್ಳುತ್ತೇವೆ. ಇಂಗ್ಲೀಷ್ ಮತ್ತು ಹಿಂದಿ ಭಾಷೆ ಗೊತ್ತಿರುವವರಿಗೆ ಆದ್ಯತೆ.
9663747452 / 9739742344

ಹೆಲ್ತ್‌ಕೇರ್ ತರಬೇತಿ
SSLC / PUC ಆದವರಿಗೆ ಡಿಪ್ಲೋಮೋ ಇನ್ ಹೆಲ್ತ್‌ಕೇರ್ ತರಬೇತಿ ಕೊಡಲಾಗುತ್ತದೆ. GNM / B.Sc. ನರ್ಸಿಂಗ್ ಆದವರಿಗೆ ಕೆಲಸವಿದೆ. ಸೆಂಟ್ ಮೇರೀಸ್ ಆಸ್ಪತ್ರೆ, ಸಿಲ್ಕ್ ಫ್ಯಾಕ್ಟರಿ ಸರ್ಕಲ್, NIE ಕಾಲೇಜ್ ಪಕ್ಕ, ಮೈಸೂರು
Mob: 9916908454

WANTED
Sales Boys & Telecaller
Minimum 1 year experience in any field.
Work in Furniture Showroom.
Salry: 15K - 25K.
Timing: 10.30 am to 8.30 pm.
Address: Irwin Road & Sharadadevinagar
Mob: 8050744784

BRIGHT KIDS MONTESSORI
Alanahalli Layout
ADMISSION OPEN
Pre KG Teachers required
6364596616 / 9148448159

WANTED TELECALLER
For Banking Process
Male / Female. Age below: 28 years. Timing: 10 am to 6 pm.
Salary: Based on the experience.
T.R. Associates
#16th Main, 5th Cross, Saraswathipuram, Mysore
9886233699 / 7026459999

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಮೈಸೂರಿನ ರಸ್ತೆಗಳಿಗೆ ಕಾಯಕಲ್ಪ ನೀಡಲು ಪಾಲಿಕೆ ನಿರ್ಧಾರ

'ಮೈಸೂರು ಮಿತ್ರ' ವರದಿ ಫಲಶ್ರುತಿ

ಅಂದಾಜು ಪಟ್ಟಿ ತಯಾರಿಸಿ ಟೆಂಡರ್‌ಗೆ ಸಿದ್ಧತೆ



ರಾಮಾನುಜ ರಸ್ತೆ ಪರಿಶೀಲನೆ ನಡೆಸುತ್ತಿರುವ ನಗರಪಾಲಿಕೆ ಉಪ ಆಯುಕ್ತರೂ (ಅಭಿವೃದ್ಧಿ) ಆದ ಸೂಪರಿಂಟೆಂಡೆಂಟ್ ಇಂಜಿನಿಯರ್ ಕೆ.ಜೆ.ಸಿಂಧು ಹಾಗೂ ಅಧಿಕಾರಿಗಳನ್ನು ಕಾಣಬಹುದು.



ಮೈಸೂರು, ಮೇ 29(ಎಂಕೆ)– ಪೂರ್ವ ಮುಂಗಾರು ಮಳೆ ಅಬ್ಬರಕ್ಕೆ ಕೊಚ್ಚಿ ಹೋಗಿರುವ ಮೈಸೂರಿನ ರಸ್ತೆಗಳ ದುರಸ್ತಿ ಕಾರ್ಯಕ್ಕೆ ಮುಂದಾಗಿರುವ ನಗರಪಾಲಿಕೆ, ಅಂದಾಜು ವೆಚ್ಚ ಪಟ್ಟಿ ತಯಾರಿಸಿ ಟೆಂಡರ್ ಕರೆಯಲು ಸಿದ್ಧತೆ ನಡೆಸಿದೆ.

'ಮೈಸೂರು ಮಿತ್ರ'ನ ಮೇ 28ರ ಸಂಚಿಕೆಯಲ್ಲಿ 'ಅಂದದ ಮೈಸೂರಿಗೆ ಕಪ್ಪುಚುಕ್ಕೆಯಾಗಿರುವ ಹೊಂಡಗಳು; ಅರೆಬರೆ ಕಾಮಗಾರಿ; ಕಂಡ ಕಂಡಲ್ಲೆಲ್ಲಾ ಫ್ಲೆಕ್ಸ್; ಫುಟ್‌ಪಾತ್ ಅತಿಕ್ರಮಣ' ಶೀರ್ಷಿಕೆಯಡಿ ಮೈಸೂರಿನ ರಸ್ತೆಗಳ ದುಸ್ಥಿತಿ ಕುರಿತು ಸವಿಸ್ತಾರವಾಗಿ ವರದಿ ಪ್ರಕಟಿಸಲಾಗಿತ್ತು. ಈ ಸಂಬಂಧ ಎಚ್ಚೆತ್ತುಕೊಂಡಿರುವ ಪಾಲಿಕೆ ಅಧಿಕಾರಿಗಳು ಖುದ್ದು ಸ್ಥಳ ಪರಿಶೀಲನೆ ನಡೆಸಿ, ರಸ್ತೆಗಳ ದುರಸ್ಥಿಗೆ ತಗಲುವ ವೆಚ್ಚ ಕುರಿತ ಅಂದಾಜು ಪಟ್ಟಿ ಸಿದ್ಧಪಡಿಸುತ್ತಿದ್ದಾರೆ. ಯುಜಿಡಿ ಕಾಮಗಾರಿಯಿಂದ ಹಾಳಾಗಿರುವ ದಾಸಪ್ಪ ವೃತ್ತದಲ್ಲಿನ ರಸ್ತೆ ಅಭಿವೃದ್ಧಿಗೆ 40 ಲಕ್ಷ ರೂ., ದಿವಾನ್ಸ್ ರಸ್ತೆಗೆ 20 ಲಕ್ಷ ರೂ. ಹಾಗೂ ರಾಮಾನುಜ ರಸ್ತೆ ಅಭಿವೃದ್ಧಿಗೆ 1 ಕೋಟಿ ರೂ. ಖರ್ಚಾಗಲಿದೆ. ಜೊತೆಗೆ ಗ್ರಾಮಾಂತರ ಬಸ್ ನಿಲ್ದಾಣ ರಸ್ತೆ ಕಾಮಗಾರಿಯನ್ನು 50 ಲಕ್ಷ ರೂ.ಗಳ ಯುಜಿಡಿ ಕಾಮಗಾರಿಯೊಂದಿಗೆ ಪೂರ್ಣಗೊಳಿಸಲಾಗುವುದು. ಮಳೆ ಬಿಡುವು ನೀಡಿದ ಕೂಡಲೆ ಕಾಮಗಾರಿ ಆರಂಭವಾಗಲಿದೆ ಎಂದು ನಗರಪಾಲಿಕೆ ಉಪ ಆಯುಕ್ತು (ಅಭಿವೃದ್ಧಿ)ಆದ ಸೂಪರಿಂಟೆಂಡೆಂಟ್ ಇಂಜಿನಿಯರ್ ಕೆ.ಜೆ.ಸಿಂಧು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಹಾಗೆಯೇ ಮಳೆಯಿಂದ ಹಾನಿಯಾದ ರಸ್ತೆ, ಚರಂಡಿಗಳನ್ನು ವೀಕ್ಷಣೆ ಮಾಡಿ ಹೊಸದಾಗಿ ಟೆಂಡರ್ ಕರೆಯಲು ಸಿದ್ಧತೆ ನಡೆಸಿದೆ. ಸದ್ಯದಲ್ಲಿಯೇ ಟೆಂಡರ್ ಕರೆದು ದುರಸ್ತಿ ಕಾಮಗಾರಿಯನ್ನು ಆರಂಭಿಸಲಾಗುವುದು. ದೊಡ್ಡ ಪ್ರಮಾಣದಲ್ಲಿ ಯುಜಿಡಿ ಕಾಮಗಾರಿ ನಡೆದ ರಾಮಾನುಜ ರಸ್ತೆ ದುರಸ್ತಿ ಕಾರ್ಯ ಸದ್ಯದಲ್ಲಿಯೇ ಆರಂಭವಾಗಲಿದೆ ಎಂದು ತಿಳಿಸಿದರಲ್ಲದೆ ಮಳೆ ನೀರು ಹರಿಯುವ ಚರಂಡಿಗಳು, ದೊಡ್ಡ ಮೋರಿಗಳನ್ನು ಸ್ವಚ್ಛಗೊಳಿಸಲಾಗುತ್ತಿದೆ ಎಂದು ತಿಳಿಸಿದರು.

ಯುಜಿಡಿಗೆ ಮಳೆ ನೀರು ಸ್ಥಗಿತಗೊಳಿಸುವ ಕಾರ್ಯಾಚರಣೆ...!

ಯುಜಿಡಿ ಲೈನ್‌ಗೆ ಮಳೆ ನೀರು ಸೇರುತ್ತಿರುವುದನ್ನು ನಿಲ್ಲಿಸಲು ವಿಶೇಷ ಕಾರ್ಯಾಚರಣೆ ನಡೆಸಲು ಚಿಂತನೆ ನಡೆಸಲಾಗಿದೆ. ಮಳೆ ನೀರನ್ನು ಯುಜಿಡಿಗೆ ಕನೆಕ್ಟ್ ಮಾಡಿರುವುದರಿಂದಲೇ ಯುಜಿಡಿ ಮ್ಯಾನ್‌ಹೋಲ್‌ಗಳು ಉಕ್ಕಿ ಹರಿದು ಯುಜಿಡಿಯ ಕೊಳಚೆ ನೀರು ಮನೆಯೊಳಗೆ ನುಗ್ಗುತ್ತಿದೆ. ಇದರಿಂದ ಸಾಕಷ್ಟು ಸಮಸ್ಯೆಗಳಾಗುತ್ತಿವೆ. ಈ ಮೊದಲು ವಿಶೇಷ ಕಾರ್ಯಾಚರಣೆ ನಡೆಸಿ ಸಾಕಷ್ಟು ಕಡೆಗಳಲ್ಲಿ ಮಳೆ ನೀರು ಯುಜಿಡಿಗೆ ಹರಿಯುವುದನ್ನು ನಿಲ್ಲಿಸಲಾಗಿತ್ತು. ಮತ್ತೆ ಕಾರ್ಯಾಚರಣೆ ಆರಂಭಿಸಲಾಗುವುದು.

- ಕೆ.ಜೆ.ಸಿಂಧು ಉಪಆಯುಕ್ತರು (ಅಭಿವೃದ್ಧಿ), ಮೈಸೂರು ನಗರಪಾಲಿಕೆ

ಪಿಜಿಗಳಲ್ಲಿ 8 ಟೆಕ್ಕಿಗಳ ಲ್ಯಾಪ್‌ಟಾಪ್ ಕಳವು

ಬಾಗಿಲು ಹಾಕದೇ ಮಲಗುವ ಪ್ರವೃತ್ತಿ; ಖದೀಮರಿಗೆ ಕಳವು ರಹದಾರಿ!

ಕ್ರೈಂ ಬಾಕ್ಸ್

ಮೈಸೂರು, ಮೇ 29– ಮೈಸೂರಿನ ಹೆಬ್ಬಾಳ್ ಪೊಲೀಸ್ ಠಾಣೆ ಸರಹದ್ದಿನ ಪಿಜಿಗಳಲ್ಲಿ ಟೆಕ್ಕಿಗಳ ಲ್ಯಾಪ್‌ಟಾಪ್‌ಗಳ ಕಳವು ಪ್ರಕರಣಗಳು ದಿನೇ ದಿನೆ ಹೆಚ್ಚುತ್ತಿವೆ. ಒಂದೇ ದಿನ 8 ಮಂದಿ ಸಾಫ್ಟ್‌ವೇರ್ ಇಂಜಿನಿಯರ್‌ಗಳ ಲ್ಯಾಪ್‌ಟಾಪ್‌ಗಳನ್ನು ಕಳವು ಮಾಡಿರುವ ಬಗ್ಗೆ ವರದಿಯಾಗಿದೆ.

ಹೆಬ್ಬಾಳ್ ಕೈಗಾರಿಕಾ ಪ್ರದೇಶದಲ್ಲಿರುವ ಎಲ್ ಅಂಡ್ ಟಿ ಕಂಪನಿಯಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿರುವ ಸಮಂತ್, ಲಿಂಗೇಶ್ ಮತ್ತು ಗೊಟ್ಟಂ ಮಹೇಂದರ್ ಅವರುಗಳು ಹೆಬ್ಬಾಳ್ ಕೈಗಾರಿಕಾ ಪ್ರದೇಶದ ಈಜ್ಞಿ ಪಿಜಿಯ 6ನೇ ನಂಬರ್ ಕೊಠಡಿಯಲ್ಲಿ ವಾಸ್ತವ್ಯ ಹೂಡಿದ್ದರು. ಇವರು ಮೇ 24ರಂದು ರಾತ್ರಿ ಲ್ಯಾಪ್‌ಟಾಪ್‌ನಲ್ಲಿ ಕೆಲಸ ಮಾಡಿದ ನಂತರ ನಿದ್ರೆಗೆ ಜಾರಿದ್ದಾರೆ. ಲಿಂಗೇಶ್ ಅವರು ಮೇ 25ರಂದು ಬೆಳಗ್ಗೆ 5.40ರಲ್ಲಿ ಎದ್ದಾಗಲೂ ಲ್ಯಾಪ್‌ಟಾಪ್‌ಗಳು ರೂಂನಲ್ಲೇ ಇದ್ದವು. ಅವರು ಹೊರಗೆ ಹೋಗಿ 6.20ಕ್ಕೆ ಹಿಂದಿರುಗುವಷ್ಟರಲ್ಲಿ ಮೂರೂ ಲ್ಯಾಪ್‌ಟಾಪ್‌ಗಳು ಕಳವು ಆಗಿವೆ.

ಅದೇ ರೀತಿ ಹೆಬ್ಬಾಳ್ 1ನೇ ಹಂತದ ಅಪೂರ್ವ ಬಾರ್ ಪಕ್ಕದ 8ನೇ ಕ್ರಾಸ್‌ನ ಮನೆಯೊಂದರಲ್ಲಿ ವಾಸವಿರುವ ಇನ್‌ಫೋಸಿಸ್ ಉದ್ಯೋಗಿಗಳಾದ ಪ್ರಮೋದ್, ಲೋಹಿತ್‌ಕುಮಾರ್, ಪನ್ನಂ ಪೃಥ್ವಿಪವನ್‌ಕುಮಾರ್ ಮತ್ತು ಮಾದೇಗೌಡ ಸರ್ಕಲ್‌ನ 5ನೇ ಕ್ರಾಸ್‌ನ ಮನೆಯೊಂದರಲ್ಲಿ ವಾಸವಿದ್ದ ಸೆಲ್ವಂ ಗಣಪತಿ ಹಾಗೂ ಶ್ರೀಕಾಂತ್ ಅವರುಗಳ ಲ್ಯಾಪ್‌ಟಾಪ್‌ಗಳನ್ನು ಕೂಡ ಅದೇ ದಿನ ಮುಂಜಾನೆ ಕಳವು ಮಾಡಲಾಗಿದ್ದು, ಈ ಸಂಬಂಧ ಹೆಬ್ಬಾಳ್ ಠಾಣೆಯಲ್ಲಿ ಮೇ 27ರಂದು ಪ್ರಕರಣ ದಾಖಲಾಗಿದೆ.

ಪಿಜಿಗಳು ಹಾಗೂ ಬಾಡಿಗೆ ಮನೆಗಳಲ್ಲಿ ವಾಸವಿರುವ ಟೆಕ್ಕಿಗಳು ರಾತ್ರಿ ವೇಳೆ ಲ್ಯಾಪ್‌ಟಾಪ್‌ನಲ್ಲಿ ಕೆಲಸ ಮಾಡಿದ ನಂತರ ಬಾಗಿಲು ಹಾಕದೇ ಮಲಗುತ್ತಿರುವುದು ಖದೀಮರಿಗೆ ಕಳವಿಗೆ ರಹದಾರಿ ಸಿಕ್ಕಂತಾಗಿದೆ. ಕೆಲವು ಟೆಕ್ಕಿಗಳಂತೂ ರಾತ್ರಿ ವೇಳೆ ಬಾಗಿಲು ಹಾಕಿ ಮಲಗಿದರೂ ಬೆಳಗ್ಗೆ ಅಕ್ಕಪಕ್ಕದ ಸ್ಥಳಗಳಿಗೆ ಹೋಗುವಾಗ ಬಾಗಿಲು ತೆರೆದೇ ಹೋಗುವುದೂ ಕೂಡ ಕಳ್ಳರಿಗೆ ವರದಾನವಾಗಿದೆ ಎಂದು ತಿಳಿಸಿರುವ ಪೊಲೀಸರು, ಈ ಬಗ್ಗೆ ಹೆಬ್ಬಾಳ್ ಕೈಗಾರಿಕಾ ಪ್ರದೇಶದಲ್ಲಿರುವ ಎಲ್ಲಾ ಕಂಪನಿಗಳು ಹಾಗೂ ಹೆಬ್ಬಾಳ್ ವ್ಯಾಪ್ತಿಯಲ್ಲಿರುವ ಪಿಜಿಗಳಿಗೆ ಮಾಹಿತಿ ನೀಡಲಾಗಿದೆ. ಆದರೂ ಕೂಡ ಟೆಕ್ಕಿಗಳು ಪಿಜಿಗಳಲ್ಲಿ ಬಾಗಿಲು ತೆರೆದು ಮಲಗುವ ಮೂಲಕ ತಮ್ಮ ಲ್ಯಾಪ್‌ಟಾಪ್‌ಗಳನ್ನು ಕಳೆದುಕೊಳ್ಳುತ್ತಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಬೇಸರ ವ್ಯಕ್ತಪಡಿಸಿದರು.

ಸರ್ಕಾರಿ ಕೆಲಸ ಕೊಡಿಸುವುದಾಗಿ ನಂಬಿಸಿ 7 ಲಕ್ಷ ರೂ. ವಂಚನೆ

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಎಫ್‌ಡಿಎ ವಿರುದ್ಧ ಕೇಸ್

ಮೈಸೂರು, ಮೇ 29– ಗ್ರಾಪಂ ಮಾಜಿ ಸದಸ್ಯೆಯ ಪುತ್ರಿಗೆ ಸರ್ಕಾರಿ ಕೆಲಸ ಕೊಡಿಸುವುದಾಗಿ ನಂಬಿಸಿ 7 ಲಕ್ಷ ರೂ. ಪಡೆದು ವಂಚಿಸಿರುವ ಆರೋಪದ ಮೇರೆಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಪ್ರಥಮ ದರ್ಜೆ ಸಹಾಯಕನ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಾಗಿದೆ.

ಈ ಹಿಂದೆ ಶ್ರೀರಾಂಪುರ ಗ್ರಾಮ ಪಂಚಾಯಿತಿಯ ಪಿಡಿಓ ಆಗಿದ್ದು, ಹಾಲಿ ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಪ್ರಥಮ ದರ್ಜೆ ಸಹಾಯಕನಾಗಿರುವ ಕೆ. ಸೋಮಯ್ಯ ಆರೋಪಕ್ಕೆ ಗುರಿಯಾದವನು.

ಶ್ರೀರಾಂಪುರ ಗ್ರಾಮ ಪಂಚಾಯಿತಿಯ ಮಾಜಿ ಸದಸ್ಯೆ ಎಸ್. ಕಾಮಾಕ್ಷಿ(54) ಎಂಬುವರು ಸೋಮಯ್ಯನಿಗೆ ಪರಿಚಯಸ್ತರಾಗಿದ್ದು, ಕಾಮಾಕ್ಷಿ ಪುತ್ರಿ ಕಂಪ್ಯೂಟರ್ ಸೈನ್ಸ್ ಇನ್ ಡಿಪ್ಲೊಮಾ ವ್ಯಾಸಂಗ ಮಾಡಿರುವುದರಿಂದ ಆಕೆಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಪ್ರಥಮ ದರ್ಜೆ ಸಹಾಯಕಿಯ ಕೆಲಸ ಕೊಡಿಸುವುದಾಗಿಯೂ, ಅದಕ್ಕೆ 10 ಲಕ್ಷ ರೂ. ಆಗುತ್ತದೆ ಎಂದು ತಿಳಿಸಿ 2021ರ ಅಕ್ಟೋಬರ್ ತಿಂಗಳಿನಲ್ಲಿ ಕಾಮಾಕ್ಷಿ ಅವರಿಂದ ಸೋಮಯ್ಯ 7 ಲಕ್ಷ ರೂ. ಪಡೆದಿದ್ದಾನೆ.

ಕೆಲಸದ ಬಗ್ಗೆ ವಿಚಾರ ಮಾಡಿದಾಗಲ್ಲೆಲ್ಲಾ ಸೋಮಯ್ಯ ಸಬೂಬುಗಳನ್ನು ಹೇಳುತ್ತಿದ್ದು, ಇತ್ತೀಚೆಗೆ ಈತ ಸರ್ಕಾರಿ ಕೆಲಸ ಕೊಡಿಸುವುದಾಗಿ ಹಲವರಿಂದ ಹಣ ಪಡೆದು ಮೋಸ ಮಾಡಿದ್ದಾನೆ ಎಂಬ ವಿಚಾರ ತನಗೆ ತಿಳಿದಿದ್ದರಿಂದ ದೂರು ಸಲ್ಲಿಸುತ್ತಿರುವುದಾಗಿ ಮೇ 25ರಂದು ಕಾಮಾಕ್ಷಿ ವಿಜಯನಗರ ಠಾಣೆಗೆ ಸಲ್ಲಿಸಿದ ದೂರನ್ನು ಪೊಲೀಸರು ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.

ಬೈಕ್‌ಗೆ ಗೂಡ್ಸ್ ವಾಹನ ಡಿಕ್ಕಿ; ಹಿಂಬದಿ ಸವಾರ ಸಾವು

ಮೈಸೂರು, ಮೇ 29– ಮಿನಿ ಗೂಡ್ಸ್ ವಾಹನ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಹಿಂಬದಿ ಸವಾರ ಸಾವನ್ನಪ್ಪಿದ ಘಟನೆ ದಟ್ಟಗಳ್ಳಿ 3ನೇ ಹಂತದ ರೋಟರಿ ಶಾಲೆ ಬಳಿ ಸಂಭವಿಸಿದೆ.

ನಂಜನಗೂಡು ತಾಲೂಕು ಚನ್ನಪಟ್ಟಣ ಗ್ರಾಮದ ಜಯರಾಮ(46) ಅಪಘಾತದಲ್ಲಿ ಸಾವನ್ನಪ್ಪಿದವರಾಗಿದ್ದು, ಇವರು ತಮ್ಮ ಪುತ್ರ ಜೆ.ಯಶ್ವಂತ್ ಜೊತೆ ಹೀರೋ ಹೋಂಡಾ ಸ್ಪ್ಲೆಂಡರ್ ಬೈಕ್ (ಕೆಎ 09–ಜೆಆರ್ 5267)ನಲ್ಲಿ ದಟ್ಟಗಳ್ಳಿ 3ನೇ ಹಂತ 'ಜಿ' ಬ್ಲಾಕ್ 10ನೇ ಕ್ರಾಸ್ ರಸ್ತೆಯಿಂದ ರಿಂಗ್ ರಸ್ತೆ ಕಡೆಗೆ ತೆರಳುತ್ತಿದ್ದ ವೇಳೆ ಇವರ ಬೈಕ್‌ಗೆ ಮಿನಿ ಗೂಡ್ಸ್ ವಾಹನ (ಕೆಎ 09–ಡಿ 2039) ಹಿಂಬದಿಯಿಂದ ಡಿಕ್ಕಿ ಹೊಡೆದಿದೆ. ಬೈಕ್‌ನಲ್ಲಿ ಹಿಂಬದಿ ಸವಾರರಾಗಿದ್ದ ಜಯರಾಮ ಅವರು ತೀವ್ರವಾಗಿ ಗಾಯಗೊಂಡಿದ್ದು ಅವರನ್ನು ಖಾಸಗಿ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಸಾವನ್ನಪ್ಪಿದ್ದಾರೆ.

ಈ ಸಂಬಂಧ ಕೆ.ಆರ್. ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಕಾಲೇಜಿನಲ್ಲಿ ಜೈ ಶ್ರೀರಾಮ್ ಹಾಡು ಹಾಕಿದ್ದಕ್ಕೆ ಮಾರಾಮಾರಿ: 17ಕ್ಕೂ ಹೆಚ್ಚು ವಿದ್ಯಾರ್ಥಿಗಳ ಮೇಲೆ ಎಫ್‌ಐಆರ್

ಬೀದರ್, ಮೇ 29– ಕಾಲೇಜಿನಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮದ ವೇಳೆ ಜೈ ಶ್ರೀರಾಮ್ ಹಾಡು ಹಾಕಿದ್ದಕ್ಕೆ 2 ಸ್ಟೂಡೆಂಟ್ಸ್ ಗುಂಪುಗಳ ನಡುವೆ ಮಾರಾಮಾರಿ ನಡೆದಿದೆ.

ನಗರದ ಜಿಎನ್‌ಡಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಇಂದು ಮಧ್ಯಾಹ್ನ ವಿದ್ಯಾರ್ಥಿಗಳ ಗುಂಪಿನ ನಡುವೆ ಮಾರಾಮಾರಿ ನಡೆದಿದೆ. ಹಲ್ಲೆ ಮಾಡಿ ಪರಾರಿಯಾಗಿದ್ದ ಬಶೀರ್ ಖಾನ್, ಗಫರಾನ್, ಶೇಕ್ ಪಾಷಾ, ಬಿಲಾಲ್ ಸೇರಿದಂತೆ 17 ಕ್ಕೂ ಹೆಚ್ಚು ಅನ್ಯ ಗುಂಪಿನ ಸ್ಟೂಡೆಂಟ್ಸ್ ಮೇಲೆ ಎಫ್‌ಐಆರ್ ದಾಖಲಾಗಿದೆ. ಹಲ್ಲೆಗೊಳಗಾದ ಇಂಜಿನಿಯರಿಂಗ್ ವಿದ್ಯಾರ್ಥಿ ನಟರಾಜ್ ನೀಡಿದ ದೂರಿನ ಮೇಲೆ ಈ ಎಫ್‌ಐಆರ್ ದಾಖಲಾಗಿದೆ.

ಘಟನೆ ವಿವರ: ಕಾಲೇಜು ಫೆಸ್ಟ್‌ನಲ್ಲಿ ಜೈ ಶ್ರೀರಾಮ್ ಹಾಡು ಹಾಕಲಾಗಿತ್ತು. ಈ ವೇಳೆ ಉದ್ದೇಶಪೂರ್ವಕವಾಗಿ ಅನ್ಯ ಕೋಮಿನ ಸ್ಟೂಡೆಂಟ್ಸ್ ನಮ್ಮ ಮೇಲೆ ಹಲ್ಲೆ ಮಾಡಿದ್ದಾರೆ. ಕೈಯಲ್ಲಿದ್ದ ಖಡ್ಗ ಹಾಗೂ ಕೈಯಿಂದ ತಲೆ, ಮೂಗು, ಹಣೆ ಮೇಲೆ ಮನಬಂದಂತೆ ಥಳಿಸಿದ್ದಾರೆ ಎಂದು ಗಾಂಧಿಗಂಜ್ ಪೊಲೀಸ್ ಠಾಣೆಯಲ್ಲಿ ದಾಖಲಿಸಿದ ಎಫ್‌ಐಆರ್‌ನಲ್ಲಿ ವಿದ್ಯಾರ್ಥಿ ನಟರಾಜ್ ಉಲ್ಲೇಖ ಮಾಡಿದ್ದಾರೆ.

ಶ್ರೀ ದೇವಿ ಮಾರಿಯಮ್ಮ ದೇವಸ್ಥಾನದಲ್ಲಿ ಹಬ್ಬ



ಮೈಸೂರಿನ ಜೆ.ಪಿ.ನಗರದ ನವೋದಯ ಬಡಾವಣೆಯಲ್ಲಿ ಜರುಗಿದ ಶ್ರೀ ದೇವಿ ಮಾರಿಯಮ್ಮ ದೇವಸ್ಥಾನದ ಹಬ್ಬದಲ್ಲಿ ಮಾಜಿ ಶಾಸಕ ಎಂ.ಕೆ ಸೋಮಶೇಖರ್, ಮಾಜಿ ಮಹಾಪೌರ ನಾರಾಯಣ, ಮುಖಂಡರಾದ ಆರ್.ದಾಸ್, ಶಂಕರ್, ಎಂ.ವೈ.ವೆಂಕಟೇಶ್, ನರಸಯ್ಯ, ವರುಣ್ ಮತ್ತಿತರರು ಭಾಗವಹಿಸಿದ್ದರು.

ಡಿಸಿಇಟಿ–2024ಕ್ಕೆ ಶುಲ್ಕ ಪಾವತಿಗೆ ದಿನಾಂಕ ವಿಸ್ತರಣೆ: ಕೆಇಎ

ಬೆಂಗಳೂರು, ಮೇ 29– 2024ನೇ ಸಾಲಿನ ಎರಡನೇ ವರ್ಷದ/ಮೂರನೇ ಸೆಮಿಸ್ಟರ್‌ನ ಎಂಜಿನಿಯರಿಂಗ್ ಕೋರ್ಸುಗಳ ಪ್ರವೇಶಕ್ಕಾಗಿ ಡಿಸಿಇಟಿ–24ಕ್ಕೆ (DCET–24) ನೋಂದಣಿ ಮಾಡಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ಶುಲ್ಕ ಪಾವತಿಸದೇ ಇರುವ ಅಭ್ಯರ್ಥಿಗಳಿಗೆ ಶುಲ್ಕ ಪಾವತಿಸಲು ಮೇ 31 ರವರೆಗೆ ಕೊನೆ ಅವಕಾಶ ನೀಡಲಾಗಿದೆ. ಶುಲ್ಕ ಪಾವತಿಸಿದ್ದು, ಆದರೆ ಪಾವತಿ ವಿಫಲವಾದ ಕಾರಣ ಬ್ಯಾಂಕಿನಿಂದ ಹಿಂತಿರುಗಿಸಲಾಗಿರುವ ಅಭ್ಯರ್ಥಿಗಳೂ ಸಹ ಮತ್ತೊಮ್ಮೆ ಶುಲ್ಕ ಪಾವತಿಸಬಹುದಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್. ಪ್ರಸನ್ನ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ವಿವರಗಳಿಗಾಗಿ ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟ್ ಅನ್ನು ನೋಡಲು ಕೋರಲಾಗಿದೆ.

ವಾಸುದೇವಾಚಾರ್ಯರ ನಿವಾಸದಲ್ಲಿ ವಿದ್ವಾನ್ ಶೃಂಗೇರಿ ನಾಗರಾಜ್ ಶಾಸ್ತ್ರೀಯ ಗಾಯನ

ಸಂಗೀತ ಸಮರ್ಪಣೆ ಮೂಲಕ ಗೌರವ



ಮೈಸೂರು, ಮೇ 29(ಎಂಕೆ)– ಮೈಸೂರಿನ ಆಚಾರ್ಯ ಪಾಠಶಾಲಾ ಸಮೀಪವಿರುವ ವಾಸುದೇವಾಚಾರ್ಯರ ಮನೆಯಲ್ಲಿ ವಿದ್ವಾನ್ ಶೃಂಗೇರಿ ಹೆಚ್.ಎಸ್.ನಾಗರಾಜ್ ಶಾಸ್ತ್ರೀಯ ಗಾಯನದ ಮೂಲಕ ಸಂಗೀತ ಸಮರ್ಪಣೆ ಮಾಡಿದರು.

ಇದೇ ವೇಳೆ ವಾಸುದೇವಾಚಾರ್ಯರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಅವರು, ಸಾಂಸ್ಕೃತಿಕ ಇತಿಹಾಸದಲ್ಲಿ ಮೈಲಿಗಲ್ಲು ಸಾಧಿಸಿರುವ ಮೈಸೂರಿನ ವಾಸುದೇವಾಚಾರ್ಯರ ಮನೆಯಲ್ಲಿ ಗಾಯನ ಸಮರ್ಪಣೆ ಮಾಡುತ್ತಿರುವುದು ನನ್ನ ಪೂರ್ವ ಜನ್ಮದ ಸುಕೃತವೇ ಆಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಸಂಗೀತ ತಪಸ್ವಿಗಳಾದ ವಾಸುದೇವಾಚಾರ್ಯರ ಮನೆಯನ್ನು ಪಾರಂಪರಿಕ ತಾಣವಾಗಿ ರೂಪಿಸಲಾಗಿದ್ದು, ಇದರಲ್ಲಿ ಕಲಾ ಪೋಷಕರಾದ ಯದುಪತಿ ಪುಟ್ಟಿ ಮತ್ತು ಶ್ರೀನಿವಾಸ ಪುಟ್ಟಿ ಅವರ ಶ್ರಮವಿದೆ. ಈ ಮನೆಯನ್ನು ಕಲಾವಿದರ ಕ್ಷೇತ್ರವನ್ನಾಗಿಸಿದ್ದಾರೆ. ಮುಂದಿನ ದಿನಗಳಲ್ಲಿ ವಾಸುದೇವಾಚಾರ್ಯರ ಮನೆಯಲ್ಲಿ ಸಾಂಸ್ಕೃತಿಕ ಚಟುವಟಿಕೆಗಳು ನಡೆಯಬೇಕು. ಆಗ ಮಾತ್ರ ವಾಸುದೇವಾಚಾರ್ಯರನ್ನು ಗೌರವಿಸಿದಂತಾಗುತ್ತದೆ ಎಂದರು.

ಸನ್ಮಾನ: ಇದೇ ವೇಳೆ ಸಂಗೀತ ಕಲಾ ಪೋಷಕರು ಮತ್ತು ವಾಸುದೇವಾಚಾರ್ಯರ ಮನೆಯನ್ನು ಪುನರುತ್ಥಾನ ಮಾಡಿದ ಯದುಪತಿ ಪುಟ್ಟಿ ಮತ್ತು ಶ್ರೀನಿವಾಸ ಪುಟ್ಟಿ ಅವರನ್ನು ಸನ್ಮಾನಿಸಲಾಯಿತು. ಖ್ಯಾತ ವೀಣಾವಾದಕ ವಿದ್ವಾನ್ ಪ್ರಶಾಂತ ಅಯ್ಯಂಗಾರ್, ಮೃದಂಗ ವಿದ್ವಾನ್ ಪಿ.ಎಸ್.ಶ್ರೀಧರ ಉಪಸ್ಥಿತರಿದ್ದರು.

ಬಸ್ ಹತ್ತುವಾಗ ಅತಿಥಿ ಉಪನ್ಯಾಸಕರ ಮೊಬೈಲ್ ಕಸಿದುಕೊಂಡು ಪರಾರಿಯಾದ ಖದೀಮ

ಮೈಸೂರು, ಮೇ 29– ಮೈಸೂರು ನಗರ ಬಸ್ ನಿಲ್ದಾಣದಲ್ಲಿ ಬಸ್ ಹತ್ತುತ್ತಿದ್ದ ಅತಿಥಿ ಉಪನ್ಯಾಸಕರೊಬ್ಬರ ಕೈಯ್ಯಲ್ಲಿದ್ದ ಮೊಬೈಲ್ ಅನ್ನು ಖದೀಮ ಕಿತ್ತುಕೊಂಡು ಪರಾರಿಯಾದ ಘಟನೆ ವರದಿಯಾಗಿದೆ.



ನಂಜನಗೂಡು ತಾಲೂಕು ಜಿ. ಮಾರಹಳ್ಳಿ ಗ್ರಾಮದವರಾಗಿದ್ದು, ಮೈಸೂರಿನ ಖಾಸಗಿ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕರಾಗಿರುವ ಜಿ.ಎಂ. ಮನು(29) ಮೊಬೈಲ್ ಕಳೆದುಕೊಂಡವರಾಗಿದ್ದು, ಇವರು ಮೇ 28ರಂದು ಸಂಜೆ 5 ಗಂಟೆ ಸುಮಾರಿನಲ್ಲಿ ಮೈಸೂರು ನಗರ ಬಸ್ ನಿಲ್ದಾಣದ ಸುತ್ತೂರಿಗೆ ಹೋಗುವ ಪ್ಲಾಟ್‌ಫಾರಂನಲ್ಲಿ ಬಸ್ ಹತ್ತುತ್ತಿದ್ದ ವೇಳೆ ಅವರ ಕೈಯ್ಯಲ್ಲಿದ್ದ ಮೊಬೈಲ್ ಅನ್ನು ಖದೀಮ ಕಿತ್ತುಕೊಂಡು ಓಡಿದ್ದಾನೆ. ಆತನನ್ನು ಹಿಡಿಯಲು ಮನು ಅವರು ಹಿಂದೆಯೇ ಓಡಿದರಾದರೂ ಆತ ಸಯ್ಯಾಜಿ ರಾವ್ ರಸ್ತೆಯಲ್ಲಿ ಜನಜಂಗುಳಿ ಮಧ್ಯೆ ಓಡಿ ಪರಾರಿಯಾಗಿದ್ದಾನೆ. ಈ ಕುರಿತು ದೇವರಾಜ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಕ್ರಮವಾಗಿ ಲಾರಿಯಲ್ಲಿ ಸಾಗಿಸುತ್ತಿದ್ದ 33 ಹಸು ವಶಕ್ಕೆ

ಮೈಸೂರು, ಮೇ 29(ಎಸ್‌ಪಿಎನ್)– ಅಕ್ರಮವಾಗಿ 33 ಹಸುಗಳನ್ನು ಸಾಗಿಸುತ್ತಿದ್ದ ಲಾರಿಯನ್ನು ಮೇಟಗಳ್ಳಿ ಪೊಲೀಸರು ವಶಕ್ಕೆ ಪಡೆದು ಪ್ರಕರಣ ದಾಖಲಿಸಿದ್ದಾರೆ.

ಕೆಆರ್‌ಎಸ್ ರಸ್ತೆಯ ರಾಯಲ್ ಇನ್ ಜಂಕ್ಷನ್ ಬಳಿ ಖಚಿತ ಮಾಹಿತಿ ಮೇರೆಗೆ ಕೆಎ06 ಎಎ 7227 ನಂಬರ್‌ನ ಲಾರಿಯನ್ನು ತಡೆದು ಪರಿಶೀಲಿಸಿದಾಗ 33 ಹಸುಗಳನ್ನು ಸಾಗಿಸುತ್ತಿರುವುದು ಬೆಳಕಿಗೆ ಬಂದಿದೆ. ಪರಿಶೀಲನೆ ವೇಳೆ ಚಾಲಕ ಹಾಗೂ ಮತ್ತೊಬ್ಬ ವ್ಯಕ್ತಿ ಲಾರಿ ಬಿಟ್ಟು ಪರಾರಿಯಾಗಿದ್ದು, 33 ಹಸುಗಳನ್ನು ಚಾಮುಂಡಿಬೆಟ್ಟದ ತಪ್ಪಲಿನ ಪಿಂಜ್ರಾಪೋಲ್‌ಗೆ ಬಿಡಲಾಗಿದೆ. ಈ ಸಂಬಂಧ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ನಾಡಿ ಪರೀಕ್ಷೆ

ಮೈಸೂರು, ಮೇ 29– ಮೈಸೂರಿನ ಲಲಿತಾದ್ರಿಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಜೂ. 2 ರಂದು ನಾಡಿ ಪರೀಕ್ಷೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ವಿವರಗಳಿಗೆ ಮೊ. 9886186580 ಸಂಪರ್ಕಿಸಬಹುದು.

ಬ್ರಿಜ್ ಭೂಷಣ್ ಶರಣ್ ಸಿಂಗ್ ಪುತ್ರ ಕರಣ್ ಭೂಷಣ್ ಬೆಂಗಾವಲು ವಾಹನ ಡಿಕ್ಕಿ: ಇಬ್ಬರ ಸಾವು

ಗೊಂಡಾ(ಉತ್ತರ ಪ್ರದೇಶ), ಮೇ 29– ಸರ್ಗಂಜ್ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕರಣ್ ಭೂಷಣ್ ಸಿಂಗ್ ಅವರ ಬೆಂಗಾವಲು ವಾಹನವು ಡಿಕ್ಕಿ ಹೊಡೆದ ಪರಿಣಾಮ, ಇಬ್ಬರು ಬಾಲಕರು ಮೃತಪಟ್ಟು, ಓರ್ವ ವ್ಯಕ್ತಿ ಗಾಯಗೊಂಡಿರುವ ಘಟನೆ ಉತ್ತರ ಪ್ರದೇಶದ ಗೊಂಡಾ ಜಿಲ್ಲೆಯ ಕರ್ನಲ್ ಗಂಜ್–ಹುರ್ಘೂರ್ ಪುರ್ ರಸ್ತೆಯಲ್ಲಿ ನಡೆದಿದೆ.



ಘಟನೆ ನಡೆದ ಕೂಡಲೆ ಸ್ಥಳದಲ್ಲಿ ದೊಡ್ಡ ಸಂಖ್ಯೆಯ ಜನಸಂದಣಿ ಜಮಾವಣೆಗೊಂಡಿದ್ದು, ಪೊಲೀಸರು ಅಪಘಾತವೆಸಗಿದ ಕಾರನ್ನು ವಶಪಡಿಸಿಕೊಂಡಿದ್ದಾರೆ. ಪೊಲೀಸ್ ಮೂಲಗಳ ಪ್ರಕಾರ, ಅಪಘಾತವೆಸಗಿದ ಕಾರು ಬಿಜೆಪಿ ಅಭ್ಯರ್ಥಿ ಕರಣ್ ಸಿಂಗ್ ಭೂಷಣ್ ಅವರ ಬೆಂಗಾವಲು ಪಡೆಗೆ ಸೇರಿದೆ. ಅಪಘಾತ ನಡೆದ ಸಂದರ್ಭದಲ್ಲಿ ಕರಣ್ ಭೂಷಣ್ ಸಿಂಗ್ ಅವರು ಕಾರಿನಲ್ಲಿದ್ದರೆ ಎಂಬ ಕುರಿತು ಸದ್ಯ ತನಿಖೆ ನಡೆಯುತ್ತಿದೆ. ಎಫ್‌ಐಆರ್‌ನಲ್ಲಿ ಅವರ ಹೆಸರನ್ನು ಸೇರಿಸಲಾಗಿಲ್ಲ ಎಂದು ಹೇಳಲಾಗಿದೆ.

ದ್ವಿಚಕ್ರವಾಹನದಲ್ಲಿ ಹೋಗುತ್ತಿದ್ದ ರೆಹಾನ್ ಖಾನ್ (17) ಮತ್ತು ಶೆಹಜಾದ್ ಖಾನ್ (20) ಅವರಿಗೆ ಶಾಲೆಯ ಬಳಿ ಕಾರು ಡಿಕ್ಕಿ ಹೊಡೆದಿದೆ ಎಂದು ಕರ್ನಲ್‌ಗಂಜ್ ಎಸ್‌ಎಚ್‌ಒ ನಿರ್ಭಯ್ ನಾರಾಯಣ್ ಸಿಂಗ್ ಹೇಳಿದ್ದಾರೆ. ಇಬ್ಬರೂ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಇಬ್ಬರಿಗೆ ಡಿಕ್ಕಿ ಹೊಡೆದ ಎಸ್‌ಯುವಿ ನಿಯಂತ್ರಣ ತಪ್ಪಿ ರಸ್ತೆಬದಿ ನಡೆದುಕೊಂಡು ಹೋಗುತ್ತಿದ್ದ ಸೀತಾದೇವಿ (60) ಅವರಿಗೂ ಡಿಕ್ಕಿ ಹೊಡೆದಿದೆ ಎಂದು ಎಸ್‌ಎಚ್‌ಒ ತಿಳಿಸಿದ್ದಾರೆ.

ಈ ಕುರಿತು ದಾಖಲಾಗಿರುವ ದೂರನ್ನು ಆಧರಿಸಿ ಕರ್ನಲ್ ಗಂಜ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಇದರ ಬೆನ್ನಿಗೇ ಕ್ರಮ ಕೈಗೊಂಡಿರುವ ಪೊಲೀಸರು, ಕಾರು ಹಾಗೂ ಚಾಲಕನನ್ನು ತಮ್ಮ ವಶಕ್ಕೆ ಪಡೆದಿದ್ದಾರೆ.

ಎಸ್‌ಯುವಿಯಲ್ಲಿದ್ದವರು ಅಪಘಾತಕ್ಕೊಳಗಾದ ಕಾರನ್ನು ಅಲ್ಲಿಯೇ ಬಿಟ್ಟು ಬೇರೆ ವಾಹನದಲ್ಲಿ ಪರಾರಿಯಾಗಿದ್ದಾರೆ ಎಂದು ಅವರು ಆರೋಪಿಸಿದ್ದಾರೆ ಎಂದು ಎಸ್‌ಎಚ್‌ಒ ಹೇಳಿದರು.

ಮನೆಗೆ ನುಗ್ಗಿ ಯುವತಿ ಮೇಲೆ ಮಾರಣಾಂತಿಕ ಹಲ್ಲೆ

ಮೈಸೂರು, ಮೇ 29– ಮನೆಗೆ ಅತಿಕ್ರಮ ಪ್ರವೇಶ ಮಾಡಿ ಯುವತಿ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ಮೈಸೂರಿನ ಮಂಡಿ ಮೊಹಲ್ಲಾದಲ್ಲಿ ನಡೆದಿದೆ.

ತ್ರಿಪುರಾ ಮೂಲದ ಅಜಯ್ ಮಾರಕ್ ಎಂಬಾತನ ಪತ್ನಿ ಲೋಟಿಕ(19) ಮಾರಣಾಂತಿಕ ಹಲ್ಲೆಗೊಳಗಾದವರಾಗಿದ್ದು, ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ವಿವರ: ತ್ರಿಪುರಾದ ಅಜಯ್ ಮಾರಕ್ ಅದೇ ರಾಜ್ಯದ ಲೋಟಿಕ ಎಂಬಾಕೆಯನ್ನು ಪ್ರೀತಿಸಿ ಮದುವೆಯಾಗಿದ್ದಲ್ಲದೇ ಕಳೆದ 6 ತಿಂಗಳ ಹಿಂದೆ ಮೈಸೂರಿಗೆ ಕರೆತಂದು ಮಂಡಿ ಮೊಹಲ್ಲಾದ ಬಾಡಿಗೆ ರೂಂನಲ್ಲಿ ದಂಪತಿ ವಾಸವಿದ್ದರು. ಅಜಯ್ ಮಾರಕ್ ಫೈವ್‌ಲೈಟ್ಸ್ ಸರ್ಕಲ್‌ನಲ್ಲಿರುವ ರೆಸ್ಟೋರೆಂಟ್‌ವೊಂದರಲ್ಲಿ ಜ್ಯೂಸ್ ಮಾಸ್ಟರ್ ಆಗಿ ಕೆಲಸ ಮಾಡುತ್ತಿದ್ದು, ಲೋಟಿಕ ಸಯ್ಯಾಜಿರಾವ್ ರಸ್ತೆಯ ಬಂಬೂ ಬಜಾರ್‌ನ ಹೋಟೆಲ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದರು.

ಮೇ 27ರಂದು ಮಧ್ಯಾಹ್ನ 2 ಗಂಟೆ ಸುಮಾರಿನಲ್ಲಿ ಅಜಯ್ ಮಾರಕ್ ತನ್ನ ಪತ್ನಿಯ ಮೊಬೈಲ್‌ಗೆ ಕರೆ ಮಾಡಿದ್ದು, ಆಕೆ ಕರೆ ಸ್ವೀಕರಿಸಿರಲಿಲ್ಲ. ಆದರೆ, 2.43ರಲ್ಲಿ ಅಪರಿಚಿತ ವ್ಯಕ್ತಿಯೋರ್ವ ಮಾರಕ್‌ಗೆ ಕರೆ ಮಾಡಿ ತನಗೆ ರಸ್ತೆಯಲ್ಲಿ ಮೊಬೈಲ್ ಸಿಕ್ಕಿದೆ ಎಂದು ತಿಳಿಸಲಾಗಿ, ತಾವು ವಾಸವಿದ್ದ ರೂಂನ ಪಕ್ಕದ ರಸ್ತೆಗೆ ತೆರಳಿದ ಮಾರಕ್ ಆ ವ್ಯಕ್ತಿಯಿಂದ ಮೊಬೈಲ್ ಪಡೆದುಕೊಂಡು ಪತ್ನಿಯನ್ನು ನೋಡಲು ರೂಂಗೆ ಬಂದಾಗ ಹೊರಗಿನಿಂದ ರೂಂನ ಚಿಲಕ ಹಾಕಲಾಗಿತ್ತು. ಒಳಗೆ ಹೋಗಿ ನೋಡಿದಾಗ ಲೋಟಿಕ ಮಾರಕಾಸ್ತ್ರಗಳಿಂದ ಹಲ್ಲೆಗೊಳಗಾಗಿ ರಕ್ತದ ಮಡುವಿನಲ್ಲಿ ಬಿದ್ದಿದ್ದರು. ಆಕೆಯನ್ನು ವಿಚಾರಿಸಿದಾಗ ಅಪರಿಚಿತ ವ್ಯಕ್ತಿಯೋರ್ವ ರೂಂಗೆ ಅತಿಕ್ರಮ ಪ್ರವೇಶ ಮಾಡಿ ತನ್ನ ಮಾನಭಂಗಕ್ಕೆ ಪ್ರಯತ್ನಿಸಿದ್ದಾನೆ. ತಾನು ವಿರೋಧ ವ್ಯಕ್ತಪಡಿಸಿದಾಗ ಚಾಕುವಿನಿಂದ ಹಲ್ಲೆ ಮಾಡಿದ್ದಾನೆ ಎಂದು ಆಕೆ ತಿಳಿಸಿದ್ದಾರೆ. ಸದ್ಯಕ್ಕೆ ಖಾಸಗಿ ಆಸ್ಪತ್ರೆಯ ತುರ್ತು ನಿಗಾ ಘಟಕದಲ್ಲಿ ಲೋಟಿಕ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಸಂಬಂಧ ಎನ್.ಆರ್. ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡಿಟಿಪಿ, ಜಾವಾ ಪೈಥಾನ್ ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು, ಮೇ 29– ಮೈಸೂರಿನ ರಾಮಕೃಷ್ಣನಗರದ ಎಸ್‌ಎಸ್‌ಐಟಿ ಸಲ್ಯೂಷನ್ಸ್ 2024–25ನೇ ಸಾಲಿನ ಕಂಪ್ಯೂಟರ್ ಡಿಪ್ಲೊಮಾ ಕೋರ್ಸ್‌ಗಳಿಗಾಗಿ ಅರ್ಜಿ ಆಹ್ವಾನಿಸಿದೆ. ತರಬೇತಿಯಲ್ಲಿ ಡಿಟಿಪಿ, ಜಾವಾ ಪೈಥಾನ್ ತರಬೇತಿಗಳೊಂದಿಗೆ ಸಿಐಟಿ (ಸರ್ಟಿಫಿಕೇಟ್ ಇನ್ ಇನ್‌ಫರ್ಮೇಷನ್ ಟೆಕ್ನಾಲಜಿ) ಡಿಸಿಎ (ಡಿಪ್ಲೊಮಾ ಇನ್ ಕಂಪ್ಯೂಟರ್ ಅಪ್ಲಿಕೇಷನ್) ಡಿಒಎ (ಡಿಪ್ಲೊಮಾ ಇನ್ ಆಫೀಸ್ ಆಟೋಮೇಷನ್) ಡಿಸಿಟಿಸಿ (ಡಿಪ್ಲೊಮಾ ಇನ್ ಕಂಪ್ಯೂಟರ್ ಟೀಚರ್ ಟ್ರೈನಿಂಗ್ ಕೋರ್ಸ್) ಡಿಎನ್‌ಟಿಟಿಸಿ (ಡಿಪ್ಲೊಮಾ ಇನ್ ನರ್ಸರಿ ಟೀಚರ್ ಟ್ರೈನಿಂಗ್ ಕೋರ್ಸ್) ಮುಂತಾದ ಕಲಿಕಾ ಹಾಗೂ ಪ್ರಾಯೋಗಿಕ ತರಗತಿಗಳು ಸಹ ನಡೆಯಲಿವೆ. ಎಸ್‌ಎಸ್‌ಎಲ್‌ಸಿ ನಂತರದ ವಿದ್ಯಾಭ್ಯಾಸ ಹೊಂದಿರುವ ಎಲ್ಲಾ ವರ್ಗದವರು ಇದರ ಫಲಾನುಭವಿಗಳಾಗಿರುತ್ತಾರೆ. ಅರ್ಜಿ ಹಾಗೂ ಪ್ರವೇಶಾತಿಗೆ 8310306 882, 9964790442 ಸಂಪರ್ಕಿಸಿ.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ಸರಗೂರಲ್ಲಿ ಶ್ರೀ ಚೌಡೇಶ್ವರಿ ಅಮ್ಮನವರ ವರ್ಧಂತ್ಯುತ್ಸವ

ಮದುವಣಗಿತ್ತಿಯಂತೆ ಶೃಂಗಾರಗೊಂಡ ಪಟ್ಟಣ, ಮೆರವಣಿಗೆ, ವಿಶೇಷ ಪೂಜೆ


ಸರಗೂರು ಪಟ್ಟಣದಲ್ಲಿ ಶ್ರೀ ಚೌಡೇಶ್ವರಿ ಅಮ್ಮನವರ 84ನೇ ವರ್ಧಂತಿ, ಜ್ಯೋತಿ ಮಹೋತ್ಸವವದಲ್ಲಿ ಭಕ್ತರು ಬಾಯಿಬೀಗ ಹರಕೆ ತೀರಿಸಿದರು.

ಸರಗೂರು, ಮೇ 29– ಸರಗೂರು ಪಟ್ಟಣದಲ್ಲಿ ಶ್ರೀ ಚೌಡೇಶ್ವರಿ ಅಮ್ಮನವರ ವರ್ಧಂತಿ ಹಾಗೂ 84ನೇ ವರ್ಷದ ಜ್ಯೋತಿ ಪೂಜಾ ಮಹೋತ್ಸವವನ್ನು ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು.

ದೊಡ್ಡಬಳ್ಳಾಪುರ ಪುಷ್ಪಾಂಡಜ ಮಹರ್ಷಿ ಆಶ್ರಮ ತಪಸಿಹಳ್ಳಿಯ ಶ್ರೀ ದಿವ್ಯ ಜ್ಞಾನಂದಗಿರಿ ಸ್ವಾಮೀಜಿ ಅವರ ದಿವ್ಯ ಸಾನ್ನಿಧ್ಯದಲ್ಲಿ ನಡೆಯುತ್ತಿರುವ ಹಬ್ಬದ ಹಿನ್ನೆಲೆಯಲ್ಲಿ ಪಟ್ಟಣವನ್ನು ತಳಿರು–ತೋರಣಗಳಿಂದ ಶೃಂಗರಿಸಿ, ರಂಗೋಲಿ ಬಿಡಿಸಿ, ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು ದೇವಾಲಯದಲ್ಲಿ ಬೆಳಗಿನ ಜಾವದಿಂದ ಹೋಮ– ಹವನ ನಡೆಸಿ ಗಣಪತಿ ಹೋಮ, ಪುಣ್ಯಾಹ, ಕಳಸ ಪ್ರತಿಷ್ಠಾಪನೆ, ದುರ್ಗಾ ಹೋಮ, ಕುಂಕುಮಾರ್ಚನೆ ಪೂಜಾ ಕೈಂಕರ್ಯಗಳು ಜರುಗಿದವು.

ಶ್ರೀ ಚೌಡೇಶ್ವರಿ ಅಮ್ಮನವರ ಹೂವಿನ ಪಲ್ಲಕ್ಕಿ ಉತ್ಸವ ಜ್ಯೋತಿ ಸಮೇತವಾಗಿ ಮಂಗಳವಾದ್ಯದೊಡನೆ ಕಪಿಲಾ ನದಿಗೆ ತೆರಳಿ ಗಂಗೆ ಪೂಜೆ ನಡೆಸಲಾಯಿತು. ಹರಕೆ ಹೊತ್ತ ಭಕ್ತರು ಬಾಯಿಬೀಗ, ಅಲಗು ಸೇವೆ, ಸ್ತೋತ್ರಪಠಣ, ಖಡ್ಗಸ್ತೋತ್ರ ಪಠಣ, ಭಜನೆ, ಪೂರ್ಣಕುಂಭ ಕಳಸದೊಂದಿಗೆ ಪ್ರಮುಖ ರಸ್ತೆ ಮುಖಾಂತರ ಸತ್ತಿಗೆ, ವೀರಗಾಸೆ ಕುಣಿತ ಹಾಗೂ ಕಲಾ ತಂಡಗಳ ಜೊತೆಯಲ್ಲಿ ಮೆರವಣಿಗೆ ನಡೆಸಲಾಯಿತು. ಉತ್ಸವವು ದೇವಾಲಯಕ್ಕೆ ತಲುಪಿದ ನಂತರ ವಿಶೇಷ ಪೂಜೆ ನಡೆಸಿ ಮಹಾಮಂಗಳಾರತಿ ಮಾಡಿ ಪ್ರಸಾದ ವಿನಿಯೋಗ ಮಾಡಲಾಯಿತು. ಪಟ್ಟಣದ ನೇಕಾರ ತೂಗಟವೀರ ಕ್ಷತ್ರೀಯ ಸಮಾಜವತಿಯಿಂದ ಈ ಪೂಜಾಕೈಂಕರ್ಯ ನಡೆಯಿತು. ಭಕ್ತಾದಿಗಳಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಗುರುವಾರ ಮಧ್ಯಾಹ್ನ 1.30 ಗಂಟೆಗೆ ತಾಯಿಗೆ ಮಹಾಮಂಗಳಾರತಿ ನಡೆಸಿ ರಾತ್ರಿ 7.30ಕ್ಕೆ ವಿದ್ಯುತ್ ದೀಪಗಳಿಂದ ಅಲಂಕೃತಗೊಂಡ ಹೂವಿನ ಪಲ್ಲಕ್ಕಿಯಲ್ಲಿ ಶ್ರೀ ಚೌಡೇಶ್ವರಿ ಅಮ್ಮನವರ ಉತ್ಸವಮೂರ್ತಿಯನ್ನು ಕೂರಿಸಿ ಪಟ್ಟಣದ ರಾಜಬೀದಿಗಳಲ್ಲಿ ಮೆರವಣಿಗೆ ನಡೆಸಿ ದೇವಸ್ಥಾನಕ್ಕೆ ಕರೆತಂದು ಮಹಾಮಂಗಳಾರತಿ ಮಾಡಿ, ತೀರ್ಥ ಪ್ರಸಾದ ವಿನಿಯೋಗ ಮಾಡಲಾಗುವುದು. ಹಾಗೂ ರಾತ್ರಿ 8 ಗಂಟೆ ನಂತರ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಮೇ 31ನೇ ಶುಕ್ರವಾರ ಮಧ್ಯಾಹ್ನ ಚೌಡೇಶ್ವರಿ ಅಮ್ಮನವರ ವಿಶೇಷ ಪೂಜೆ ಹಾಗೂ ಮೆರವಣಿಗೆ ನಡೆಯಲಿದೆ. ರಾತ್ರಿ 8.30 ಗಂಟೆಗೆ ಬೆಂಗಳೂರಿನ ವಿದ್ವಾನ್ ರಾಯಚೂರು ಡಾ.ಶೇಷಗಿರಿದಾಸ್ ಮತ್ತು ತಂಡದವರಿಂದ ಭಕ್ತಿ ಸಂಗೀತ ಏರ್ಪಡಿಸಲಾಗಿದೆ.

ಜೂ.1 ಶನಿವಾರ ಮಧ್ಯಾಹ್ನ ಮಹಾಮಂಗಳಾರತಿ ನಂತರ ತೀರ್ಥಪ್ರಸಾದ ವಿನಿಯೋಗ ನಂತರ 3 ಗಂಟೆಗೆ ವಸಂತೋತ್ಸವ ಬಣ್ಣದೋಕುಳಿ, ನಂತರ ಶ್ರೀ ಚೌಡೇಶ್ವರಿ ಅಮ್ಮನವರ ಪಲ್ಲಕಿ ಉತ್ಸವ ನಂತರ ಕಪಿಲಾ ನದಿಯಲ್ಲಿ ತೆಪ್ಪೋತ್ಸವ ಹಾಗೂ ಪ್ರಮುಖ ರಸ್ತೆಯಲ್ಲಿ ಅಮ್ಮನವರ ಮೆರವಣಿಗೆ ನಡೆಸಿ ದೇವಸ್ಥಾನಕ್ಕೆ ಬಂದು ಮಹಾಮಂಗಳಾರತಿ ನೆರವೇರುವುದು.

ಎಲ್ಲಾ ಪೂಜಾ ಕೈಕಂರ್ಯವನ್ನು ಅರ್ಚಕರಾದ ಜಿ.ಕೆ.ಗೋಪಿನಾಥ್, ಪುರೋಹಿತ್ ಎಸ್. ಹರೀಶ್ ಹಾಗೂ ಸುಕೃತ್ ನೆರವೇರಿಸುವರು.

ಶ್ರೀ ಚೌಡೇಶ್ವರಿ ನೇಕಾರ ತೊಗಟ ವೀರ ಕ್ಷತ್ರಿಯ ಸಮಾಜ, ಶ್ರೀ ಚೌಡೇಶ್ವರಿ ನೇಕಾರ ತೊಗಟವೀರ ಕ್ಷತ್ರಿಯ ಯುವಕ ಸಂಘ, ಶ್ರೀ ಚೌಡೇಶ್ವರಿ ನೇಕಾರ ತೊಗಟವೀರ ಕ್ಷತ್ರಿಯ ಭಜನಾ ಮಂಡಳಿ, ಶ್ರೀ ಚೌಡೇಶ್ವರಿ ನೇಕಾರ ತೊಗಟವೀರ ಕ್ಷತ್ರಿಯ ಮಹಿಳಾ ಸಂಘದವರು ಉಪಸ್ಥಿತರಿದ್ದರು.

ಜೆಎಸ್‌ಎಸ್ ವಸತಿ ಶಾಲೆ ದಾಖಲಾತಿ ಪ್ರಕ್ರಿಯೆಗೆ ಚಾಲನೆ


ಸುತ್ತೂರಿನ ಜೆಎಸ್‌ಎಸ್ ವಸತಿ ಶಾಲೆಯಲ್ಲಿ ಸಂಸ್ಥೆಯ ಆಡಳಿತಾಧಿಕಾರಿಗಳಾದ ಎಸ್.ಪಿ.ಉದಯಶಂಕರ್ ಅವರು ವಿದ್ಯಾರ್ಥಿಗಳಿಗೆ ಪ್ರವೇಶ ಪತ್ರ ನೀಡುವ ಮೂಲಕ ದಾಖಲಾತಿ ಪ್ರಕ್ರಿಯೆಗೆ ಚಾಲನೆ ನೀಡಿದರು. ಚಿತ್ರದಲ್ಲಿ ಸಂಸ್ಥೆಯ ಮುಖ್ಯಸ್ಥರು, ವಿದ್ಯಾರ್ಥಿಗಳು ಹಾಗೂ ಪೋಷಕರನ್ನು ಕಾಣಬಹುದು.

ಮಹಿಳೆ ನಾಪತ್ತೆ



ಹುಣಸೂರು, ಮೇ 29– ತಾಲೂಕಿನ ಹಳ್ಳದಕೊಪ್ಪಲು ನಿವಾಸಿ ಶಿವರಾಜೇಗೌಡ ಅವರ ಪತ್ನಿ ಕೆಂಡಮ್ಮ(50) ಮೇ 19ರಿಂದ ನಾಪತ್ತೆಯಾಗಿದ್ದಾರೆ. ಈಕೆ ಅಂದು ಬೆಳಗ್ಗೆ 8.30ಕ್ಕೆ ಹುಣಸೂರಿಗೆ ಹೋಗಿ ಬರುವುದಾಗಿ ಹೇಳಿ ಹೋದವರು ಮನೆಗೆ ವಾಪಸ್ಸಾಗಿಲ್ಲ ಎಂದು ಪುತ್ರ ಮಂಜುನಾಥ್ ಬಿಳಿಕೆರೆ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಇವರ ಬಗ್ಗೆ ಸುಳಿವು ಸಿಕ್ಕಲ್ಲಿ ಮೊ: 9480805057 ಸಂಪರ್ಕಿಸುವಂತೆ ಬಿಳಿಕೆರೆ ಪೊಲೀಸರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್.ಡಿ.ಕೋಟೆ ಕೋರ್ಟಿನ ಪ್ರಪ್ರಥಮ ಮಹಿಳಾ ನ್ಯಾಯಾಧೀಶರು ಅಧಿಕಾರ ಸ್ವೀಕಾರ; ಅಭಿನಂದನೆ


ಹೆಚ್.ಡಿ.ಕೋಟೆ ನ್ಯಾಯಾಲಯದ ನ್ಯಾಯಾಧೀಶರಾದ ಎಂ.ಸುಷ್ಮಾ ಅವರನ್ನು ಸನ್ಮಾನಿಸಲಾಯಿತು.

ಹೆಚ್.ಡಿ.ಕೋಟೆ, ಮೇ 29– ದುರ್ಬಲ ವರ್ಗದವರು, ಅನ್ಯಾಯಕ್ಕೊಳಗಾ ದವರಿಗೆ ನ್ಯಾಯ ದೊರಕಿಸಲು ಶ್ರಮ ಪಡುವುದಾಗಿ ಕೋಟೆ ನ್ಯಾಯಾಲಯದ ನ್ಯಾಯಾಧೀಶರಾದ ಎಂ.ಸುಷ್ಮಾ ಹೇಳಿದರು.

ಹೆಚ್.ಡಿ.ಕೋಟೆ ಪಟ್ಟಣದ ನ್ಯಾಯಾಲಯಕ್ಕೆ ಪ್ರಪ್ರಥಮ ಬಾರಿಗೆ ಮಹಿಳಾ ನ್ಯಾಯಾಧೀಶರಾಗಿ ಅಧಿಕಾರ ಸ್ವೀಕರಿಸಿದ ಅವರು ವಕೀಲರ ಸಂಘದವರು ಹಾಗೂ ಮಹಿಳೆಯರು ಮಾಡಿದ ಸನ್ಮಾನವನ್ನು ಸ್ವೀಕರಿಸಿ ಮಾತನಾಡಿದವರು.

ನೊಂದವರು, ಅನ್ಯಾಯಕ್ಕೆ ಒಳಗಾದವರು ಯಾರೇ ಆಗಿದ್ದರೂ ಅಂಥವರಿಗೆ ನ್ಯಾಯಾಲಯದ ಮುಖಾಂತರ ನ್ಯಾಯ ಒದಗಿಸುವ ಕೆಲಸ ಮಾಡುವುದು ನಮ್ಮದು. ಕಾನೂನಿನ ಅರಿವನ್ನು ಪ್ರತಿಯೊಬ್ಬರೂ ಪಡೆದುಕೊಳ್ಳಬೇಕು. ನ್ಯಾಯ ಕೇಳಲು ಪ್ರತಿಯೊಬ್ಬರಿಗೂ ಹಕ್ಕಿದ್ದು, ಅದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು. ವಕೀಲರಾದ ಸರಸ್ವ ಮಾತನಾಡಿ, ಮಹಿಳಾ ನ್ಯಾಯಾಧೀಶರೊಬ್ಬರು ಇಲ್ಲಿಗೆ ಬಂದಿರುವುದು ನಮಗೆಲ್ಲಾ ಸ್ಫೂರ್ತಿಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ 1ನೇ ಹೆಚ್ಚುವರಿ ನ್ಯಾಯಾಲಯದ ನ್ಯಾಯಾಧೀಶರಾದ ಸುರೇಶ್, ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಸತೀಶ್, ಹಿರಿಯ ಸಿವಿಲ್ ನ್ಯಾಯಾಧೀಶರಾದ ಸಂದೇಶ ಪ್ರಭು, ವಕೀಲರ ಸಂಘದ ಅಧ್ಯಕ್ಷ ಗಂಗರಾಜು, ಉಪಾಧ್ಯಕ್ಷ ಚಿಕ್ಕನಾಯಕ, ಸಿದ್ದಪ್ಪಾಜಿ, ನಾರಾಯಣಗೌಡ, ಕೃಷ್ಣ, ನಾಗಶ್ರೀ, ಮಂಜುಳಾ, ರೋಜಾ, ನಯನ, ದಿನೇಶ್, ಶ್ರೀನಿವಾಸ್, ಮಹಿಳಾ ಸಾಂತ್ವನ ಕೇಂದ್ರದ ಜಶೀಲ ಸೇರಿದಂತೆ ಮುಂತಾದವರು ಹಾಜರಿದ್ದರು.

ಉಚಿತ ನೇತ್ರ ತಪಾಸಣೆ ಶಿಬಿರದಲ್ಲಿ 300 ಮಂದಿಗೆ ಚಿಕಿತ್ಸೆ

150 ಮಂದಿ ನೇತ್ರ ಶಸ್ತ್ರಚಿಕಿತ್ಸೆಗೆ ಆಯ್ಕೆ



ತಿ.ನರಸೀಪುರ ಮೇ 29– ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ನಡೆದ ಉಚಿತ ನೇತ್ರ ತಪಾಸಣೆ ಮತ್ತು ಚಿಕಿತ್ಸೆ ಶಿಬಿರದಲ್ಲಿ 300 ಮಂದಿ ಚಿಕಿತ್ಸೆ ಪಡೆದಿದ್ದು, ಶಸ್ತ್ರಚಿಕಿತ್ಸೆಗೆ 150 ಮಂದಿ ಆಯ್ಕೆಯಾಗಿದ್ದಾರೆ.

ಶ್ರೀಕಂಠೇಶ್ವರ ಅಕ್ಕಿ ಗಿರಣಿ ಮತ್ತು ಪ್ಯಾಟಲ್, ಶಂಕರ ಆಸ್ಪತ್ರೆ ಬೆಂಗಳೂರು, ಜಿಲ್ಲಾ ಅಂಧತ್ವ ನಿವಾರಣಾ ವಿಭಾಗ ಮೈಸೂರು ಮತ್ತು ಸಾರ್ವಜನಿಕ ಆಸ್ಪತ್ರೆ ತಿ.ನರಸೀಪುರ ಇವರ ಸಹಯೋಗದಲ್ಲಿ 300ಕ್ಕೂ ಹೆಚ್ಚು ಕಣ್ಣಿನ ಸಮಸ್ಯೆ ಇರುವ ರೋಗಿಗಳನ್ನು ತಪಾಸಣೆ ಮಾಡಲಾಯಿತು. ಗ್ಲಾಕೋಮಾ, ಪೊರೆ, ನೀರು ಸೋರುವುದು ಮತ್ತು ರೆಟಿನಾ ಸಂಬಂಧಿಸಿದ ರೋಗಿಗಳ ಪರೀಕ್ಷಿಸಿ 150 ರೋಗಿಗಳನ್ನು ಶಸ್ತ್ರಚಿಕಿತ್ಸೆಗೆ ಆಯ್ಕೆ ಮಾಡಲಾಗಿದ್ದು, ಅವರಲ್ಲಿ ತುರ್ತು ಶಸ್ತ್ರಚಿಕಿತ್ಸೆ ಇರುವ 50 ಮಂದಿಗೆ ಶಸ್ತ್ರಚಿಕಿತ್ಸೆ ಮಾಡಲಾಗುವುದು.

ಶಿಬಿರದ ಪ್ರಾಯೋಜಕ ಶ್ರೀಕಂಠಮೂರ್ತಿ ಮಾತನಾಡಿ, ಕಣ್ಣು ಮಾನವ ದೇಹದ ಸೂಕ್ಷ್ಮ ಅಂಗ. ಇದನ್ನು ಸುರಕ್ಷಿತವಾಗಿ ಕಾಪಾಡಿಕೊಳ್ಳಬೇಕು. ಮನುಷ್ಯನಿಗೆ 40 ವರ್ಷ ಕಳೆದ ಮೇಲೆ ಕಣ್ಣಿನ ತೊಂದರೆ ಕಾಣಿಸಿಕೊಳ್ಳುತ್ತದೆ. ಶುಗರ್, ಬಿಪಿ ಇರುವವರು ಒಂದು ವರ್ಷಕ್ಕೆ ಮತ್ತು ಆರು ತಿಂಗಳ ಒಳಗಡೆ ದೃಷ್ಟಿ ಪರೀಕ್ಷಿಸಿಕೊಳ್ಳಬೇಕು. ನಮ್ಮ ತಾಯಿ ಅವರ ಸ್ಮರಣಾರ್ಥ ಈ ಉಚಿತ ಕಣ್ಣಿನ ತಪಾಸಣೆ ಮತ್ತು ಶಸ್ತ್ರಚಿಕಿತ್ಸೆ ಶಿಬಿರವನ್ನು ಹಮ್ಮಿಕೊಳ್ಳಲಾಗಿದ್ದು ಕಣ್ಣಿನ ಸಮಸ್ಯೆ ಇರುವವರು ಕಾರ್ಯಕ್ರಮವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಶಂಕರ್ ಕಣ್ಣಿನ ಆಸ್ಪತ್ರೆಯ ವೈದ್ಯ ಡಾ. ನಿತೀಶ್ ಕುಮಾರ್, ಫೀಲ್ಡ್ ಆಫೀಸರ್ಸ್ ನೀಲ್ ಕುಮಾರ್, ಸಿಬ್ಬಂದಿ ಸ್ವಪ್ನಸಿಂಗ್, ಅಕುಲ್ ಭವಾನಿ, ನೇತ್ರ ಪರಿವೀಕ್ಷ ಉಮೇಶ್ ಕುಮಾರ್, ನೇತ್ರಾಧಿಕಾರಿ ಶಹರೀನಾ, ಗ್ರಾಪಂ ಉಪಾಧ್ಯಕ್ಷ ಕೈಯಂಬಳ್ಳಿ ಅಶೋಕ್, ಗ್ರಾಪಂ ಮಾಜಿ ಅಧ್ಯಕ್ಷ ಶಂಭುದೇವನಪುರ ರಮೇಶ್ ಇತರರು ಇದ್ದರು.

ಕಳಲೆ ಕೇಶವಮೂರ್ತಿ ಎಂಎಲ್‌ಸಿ ಮಾಡಲು ಮನವಿ

ಮಲ್ಕುಂಡಿ, ಮೇ 29– ನಂಜನಗೂಡು ವಿಧಾನಸಭಾ ಕ್ಷೇತ್ರ ತ್ಯಾಗ ಮಾಡಿ ಮಾಜಿ ಸಂಸದ ಆರ್.ಧ್ರುವನಾರಾಯಣ್ ಅವರ ಪುತ್ರ ದರ್ಶನ್ ಅವರನ್ನು ಶಾಸಕರನ್ನಾಗಿ ಮಾಡಲು ಸಹಕರಿಸಿದ ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಅವರನ್ನು ವಿಧಾನಪರಿಷತ್‌ಗೆ ಆಯ್ಕೆ ಮಾಡಬೇಕು ಎಂದು ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿ ಹರದನಹಳ್ಳಿ ಸೋಮೇಶ್ ಮನವಿ ಮಾಡಿದರು.

ನಂಜನಗೂಡು ಶಾಸಕರಾಗಿ ಅಲ್ಪ ಅವಧಿಯಲ್ಲೇ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿ ಪಕ್ಷ ಸಂಘಟನೆ ಮಾಡಿದ ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಅವರು ಜನರ ಕಷ್ಟ ಸುಖಗಳಿಗೆ ಸ್ಪಂದಿಸುತ್ತಾ ಬಂದಿದ್ದಾರೆ. ಅವರನ್ನು ವಿಧಾನಪರಿಷತ್‌ಗೆ ಆಯ್ಕೆ ಮಾಡಿದರೆ ಜನಸೇವೆಗೆ ಮತ್ತಷ್ಟು ಶಕ್ತಿ ತುಂಬಿದಂತಾಗುತ್ತದೆ. ಹೀಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ನಮ್ಮ ಮನವಿ ಪರಿಗಣಿಸಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಅವರನ್ನು ವಿಧಾನಪರಿಷತ್‌ಗೆ ಆಯ್ಕೆ ಮಾಡಬೇಕು ಎಂದು ಮನವಿ ಮಾಡಿದರು

ಸಾರ್ವಜನಿಕರ ರಸ್ತೆಯಲ್ಲಿ ಜಗುಲಿ ನಿರ್ಮಾಣ ಆರೋಪ

ಗ್ರಾಮಸ್ಥರ ತೀವ್ರ ವಿರೋಧ, ಮಾತಿನ ಚಕಮಕಿ, ಪಿಡಿಓ ನೋಟೀಸ್



ಹುಣಸೂರು, ಮೇ 29– ಸಾರ್ವಜನಿಕರ ರಸ್ತೆಯಲ್ಲಿ ರಾತ್ರೋರಾತ್ರಿ ನಿರ್ಮಾಣವಾದ ಜಗುಲಿ ತೀವ್ರ ವಿವಾದಕ್ಕೆ ಕಾರಣವಾಗಿದೆ. ಗ್ರಾಮಸ್ಥರ ವಿರೋಧವಿದ್ದರೂ ಲೆಕ್ಕಿಸದ ಗ್ರಾಮ ಪಂಚಾಯ್ತಿ ಸದಸ್ಯೆ ರಾಜಾರೋಷವಾಗಿ ಜಗುಲಿ ನಿರ್ಮಿಸಿರುವುದಾಗಿ ಆರೋಪ ಕೇಳಿ ಬಂದಿದೆ.

ನಿರ್ಮಾಣ ಕಾಮಗಾರಿಯನ್ನು ತಡೆ ಹಿಡಿಯಲು ಬಂದ ಗ್ರಾಮಸ್ಥರ ನಡುವೆ ಗ್ರಾಮ ಪಂಚಾಯ್ತಿ ಸದಸ್ಯೆ ಕುಟುಂಬ ಮಾತಿನ ಚಕಮಕಿ ನಡೆಸಿದೆ. ಹುಣಸೂರು ತಾಲೂಕಿನ ಉಮ್ಮತ್ತೂರು ಗ್ರಾಮ ಪಂಚಾಯ್ತಿ ವ್ಯಾಪ್ತಿಯ ನೆಲ್ಲೂರು ಪಾಲ ಗ್ರಾಮದಲ್ಲಿ ಘಟನೆ ನಡೆದಿದೆ.

ತಾಲೂಕಿನ ನೆಲ್ಲೂರುಪಾಲ ಗ್ರಾಮದ ಉಮ್ಮತ್ತೂರು ಗ್ರಾಮ ಪಂಚಾಯ್ತಿ ಸದಸ್ಯೆ ಅವರ ಪತಿಯ ಮನೆಗೆ ಹೊಂದಿಕೊಂಡಂತಿರುವ ರಸ್ತೆ ಸಾರ್ವಜನಿಕರು ಓಡಾಡುವ ರಸ್ತೆ ಎಂದು ಹೇಳಲಾಗಿದೆ. ಇಲ್ಲಿ ವಾಹನಗಳು, ಟ್ರಾಕ್ಟರ್‌ಗಳ ಓಡಾಟ ಹಿಂದಿನಿಂದಲೂ ಸಾಗಿ ಬಂದಿದೆ.

ಇದೀಗ ಅವರ ಮನೆಯವರು ಸಾರ್ವಜನಿಕರ ರಸ್ತೆಯಲ್ಲಿ ವಾಹನಗಳು ಓಡಾಡಲು ಸಾಧ್ಯವಾಗದಂತೆ ಜಗುಲಿ ನಿರ್ಮಿಸಿದ್ದಾರೆ. ಈ ಬಗ್ಗೆ ಗ್ರಾಮಸ್ಥರು ವಿರೋಧಿಸಿದ್ದಾರೆ. ಗ್ರಾಮಸ್ಥರ ವಿರೋಧವನ್ನು ಲೆಕ್ಕಿಸದೆ ಜಗುಲಿ ನಿರ್ಮಾಣ ಕಾರ್ಯ ಮುಂದುವರೆದಿದೆ.

ಈ ಬಗ್ಗೆ ಗ್ರಾಮಸ್ಥ ವಿಶ್ವನಾಥ್ ಹಾಗೂ ಕೃಷ್ಣ ಅವರು ಉಮ್ಮತ್ತೂರು ಗ್ರಾಮ ಪಂಚಾಯ್ತಿಗೆ ದೂರು ನೀಡಿದ್ದಾರೆ. ಪಿಡಿಓ ಅವರು ಮನೆ ಮಾಲೀಕರಿಗೆ ನೋಟೀಸ್ ಜಾರಿ ಮಾಡಿದ್ದು, ಕಾಮಗಾರಿಯನ್ನು ಸ್ಥಗಿತಗೊಳಿಸುವಂತೆ ಸೂಚಿಸಿದ್ದಾರೆ. ಇದು ರಸ್ತೆ ಅಲ್ಲ, ನಮ್ಮದೇ ಜಾಗ ಎಂದು ವಾದಿಸುತ್ತಿರುವ ಅವರಿಗೆ ಸೂಕ್ತ ದಾಖಲೆ ಒದಗಿಸುವಂತೆ ನೋಟೀಸ್‌ನಲ್ಲಿ ಪಿಡಿಓ ಸೂಚನೆ ನೀಡಿದ್ದಾರೆ. ಸ್ಥಳಕ್ಕೆ ಬಂದ ಸಾರ್ವಜನಿಕರ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಿರುವ ಗ್ರಾಮ ಪಂಚಾಯ್ತಿ ಸದಸ್ಯೆ ವರ್ತನೆ ಮೊಬೈಲ್‌ನಲ್ಲಿ ಸೆರೆಯಾಗಿದೆ.

ಕೆ.ವಿವೇಕಾನಂದ ಪರ ಮತಯಾಚನೆ


ನಂಜನಗೂಡಿನ ಸಿಟಿಜನ್ ಇಂಗ್ಲೀಷ್ ಶಾಲೆಯಲ್ಲಿ ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಕೆ.ವಿವೇಕಾನಂದ ಪರ ಬಿಜೆಪಿ ಮುಖಂಡ ಎಸ್.ಮಹದೇವಯ್ಯ ನೇತೃತ್ವದಲ್ಲಿ ಮತಯಾಚನೆ ನಡೆಸಲಾಯಿತು.

ನಂಜನಗೂಡು, ಮೇ 29– ನಗರದ ಸಿಟಿಜನ್ ಇಂಗ್ಲೀಷ್ ಶಾಲೆ, ಲಯನ್ಸ್ ಹಾಗೂ ರೋಟರಿ ಶಾಲೆಗಳಲ್ಲಿ ಬುಧವಾರ ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಕೆ.ವಿವೇಕಾನಂದ ಪರ ಬಿಜೆಪಿ ಮುಖಂಡ ಎಸ್. ಮಹದೇವಯ್ಯ ನೇತೃತ್ವದಲ್ಲಿ ಮತಯಾಚನೆ ಮಾಡಲಾಯಿತು.

ಎಸ್.ಮಹದೇವಯ್ಯ ಮಾತನಾಡಿ, ಕಳೆದ ಬಾರಿ ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ 3 ಮಂದಿ ಅಭ್ಯರ್ಥಿಗಳ ನಡುವೆ ಚುನಾವಣೆ ನಡೆದುದ್ದರಿಂದ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಹೆಚ್ಚಿನ ಸಾಧನೆ ತೋರಲು ಸಾಧ್ಯವಾಗಲಿಲ್ಲ. ಈ ಬಾರಿ ಕಾಂಗ್ರೆಸ್ ಹಾಗೂ ಬಿಜೆಪಿ, ಜೆಡಿಎಸ್ ಮೈತ್ರಿ ಅಭ್ಯರ್ಥಿಯ ನಡುವೆ ನೇರ ಸ್ಪರ್ಧೆ ನಡೆಯಲಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಮಹಿಳಾ ಸಬಲೀಕರಣದತ್ತ ಹೆಚ್ಚಿನ ಒತ್ತು ನೀಡಿದ್ದಾರೆ. ವಿಧಾನಸಭೆ, ಲೋಕಸಭೆ ಚುನಾವಣೆಗಳಲ್ಲಿ ಮಹಿಳೆಯರಿಗೆ ಶೇ.33 ರಷ್ಟು ಮೀಸಲಾತಿ ನೀಡಿರುವುದರಿಂದ ಮುಂದೆ ಹೆಚ್ಚಿನ ಮಹಿಳೆಯರು ಆರಿಸಿ ಬರಲು ಅನುಕೂಲವಾಗಲಿದೆ. ನಮ್ಮ ಅಭ್ಯರ್ಥಿ ಕೆ.ವಿವೇಕಾನಂದ ಅವರಿಗೆ ಮೊದಲ ಪ್ರಾಶಸ್ತ್ಯದ ಮತ ನೀಡಿ ಜಯಶೀಲರನ್ನಾಗಿ ಮಾಡಬೇಕು ಎಂದು ಹೇಳಿದರು.

ಬಿಜೆಪಿ ಮುಖಂಡರಾದ ಮಂಗಳಾ ಸೋಮಶೇಖರ್ ಮಾತನಾಡಿ, ಈ ಚುನಾವಣೆಯಲ್ಲಿ ಅಭ್ಯರ್ಥಿಗಳಿಗೆ ಚಿಹ್ನೆ ಇರುವುದಿಲ್ಲ, ಅಭ್ಯರ್ಥಿಯ ಭಾವಚಿತ್ರದ ಮೇಲೆ 1 ಎಂದು ಬರೆಯಬೇಕು. ಈ ಕ್ಷೇತ್ರದಿಂದ ಸತತವಾಗಿ ಆಯ್ಕೆಯಾಗುತ್ತಿರುವ ಮರಿತಿಬ್ಬೇಗೌಡ ಶಿಕ್ಷಕರ ಸಮಸ್ಯೆಗಳಿಗೆ ಸರಿಯಾಗಿ ಸ್ಪಂದಿಸುತ್ತಿಲ್ಲ. ಶಿಕ್ಷಕರು ದೇಶದ ಹಿತದೃಷ್ಟಿಯಿಂದ ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದ ಅವರಿಗೆ ಮೊದಲ ಪ್ರಾಶಸ್ತ್ಯದ ಮತ ನೀಡಿ ಗೆಲ್ಲಿಸಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಜೆಡಿಎಸ್ ಜಿಲ್ಲಾಧ್ಯಕ್ಷ ಎನ್.ನರಸಿಂಹಸ್ವಾಮಿ, ಬಿಜೆಪಿ ಮುಖಂಡರಾದ ಡಾ.ಶಿವರಾಂ, ಕುಂಬರಳ್ಳಿ ಸುಬ್ಬಣ್ಣ, ನಂದಿನಿ ಮಹೇಶ್, ಹುಲ್ಲಹಳ್ಳಿ ಮೋಹನ್, ಪ್ರೇಮ ಸಂಭಯ್ಯ, ಮಾಧುರಾಜ್ ಉಪಸ್ಥಿತರಿದ್ದರು.

ಈ ಸರ್ಕಾರದಲ್ಲಿ ಶಿಕ್ಷಣ, ಆರೋಗ್ಯಕ್ಕೆ ಗ್ಯಾರಂಟಿ ಇಲ್ಲ

ಮಾಜಿ ಸಚಿವ ಹೆಚ್. ವಿಶ್ವನಾಥ್ ಕಳವಳ



ಹುಣಸೂರು, ಮೇ 29– ರಾಜ್ಯ ಸರ್ಕಾರ ಬಡ ವರ್ಗಕ್ಕೆ ಗ್ಯಾರಂಟಿ ಯೋಜನೆ ನೀಡಿದ್ದರೂ ಮೂಲಭೂತ ಅವಶ್ಯಕತೆಗಳಾದ ಶಿಕ್ಷಣ ಮತ್ತು ಆರೋಗ್ಯಕ್ಕೆ ಗ್ಯಾರಂಟಿ ನೀಡದ ಕಾರಣ ಶ್ರೀಸಾಮಾನ್ಯರು ಇದರಿಂದ ವಂಚಿತರಾಗುತ್ತಿದ್ದಾರೆ ಎಂದು ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್ ಕಳವಳ ವ್ಯಕ್ತಪಡಿಸಿದರು.

ನಗರದ ಕಾವೇರಿ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಘಟಕ ಉದ್ಘಾಟಿಸಿ ಮಾತನಾಡಿ, ಸರ್ಕಾರ ಶ್ರೀಸಾಮಾನ್ಯರಿಗೆ 5 ಗ್ಯಾರಂಟಿಗಳನ್ನು ನೀಡಿದ್ದು, ಅಂಬೇಡ್ಕರ್ ಅವರ ಅಕ್ಷರ, ಆರೋಗ್ಯ ಇಲ್ಲದ ವ್ಯಕ್ತಿಗೆ ಉಳಿದೆಲ್ಲವೂ ನಶ್ವರ ಎಂದಿದ್ದರು. ಹೀಗಾಗಿ ಅಂಬೇಡ್ಕರ್ ಸಂವಿಧಾನದಲ್ಲಿ ಪ್ರತಿಯೊಬ್ಬ ನಾಗರಿಕರಿಗೆ ಕಡ್ಡಾಯವಾಗಿ ಶಿಕ್ಷಣ, ಆರೋಗ್ಯ ಮತ್ತು ಉದ್ಯೋಗ ಕಲ್ಪಿಸಬೇಕು ಎಂದು ಹೇಳಿದ್ದಾರೆ ಎಂದರು.

ರಾಜ್ಯ ಸರ್ಕಾರ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಗಂಭೀರವಾಗಿ ಆಲೋಚಿಸಬೇಕಾಗಿದೆ. ಗ್ರಾಮೀಣ ಭಾಗದ ಸರ್ಕಾರಿ ಶಾಲೆ ಮತ್ತು ಆಸ್ಪತ್ರೆಗಳಲ್ಲಿ ಸವಲತ್ತುಗಳಿದ್ದರೂ ನಾಗರಿಕರಿಗೆ ತಲುಪಿಸುವ ವ್ಯವಸ್ಥೆ ಸರಿಯಿಲ್ಲದೆ ಶ್ರೀಸಾಮಾನ್ಯರು ನಗರ ಪ್ರದೇಶ ಅವಲಂಬಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಆರ್ಥಿಕವಾಗಿ ಸೊರಗಿದ ವ್ಯಕ್ತಿ ಖಾಸಗಿ ವ್ಯವಸ್ಥೆಯಲ್ಲಿ ಹಲವು ಸಮಸ್ಯೆ ಎದುರಿಸಬೇಕಾದ ಅನಿವಾರ್ಯತೆ ನಿರ್ಮಾಣವಾಗಿದೆ ಎಂದರು.

ರಾಜ್ಯದಲ್ಲಿ ಆಡಳಿತ ನಡೆಸಿದ ಎಲ್ಲಾ ಸರ್ಕಾರಗಳು ಸಾಲ ಮಾಡಿ ಆಡಳಿತ ನಡೆಸಿದ್ದು, ಪ್ರಸಕ್ತ ಸರ್ಕಾರ ಹೊರತಲ್ಲ. ಗ್ಯಾರಂಟಿ ನೀಡಿರುವ ಮುಖ್ಯಮಂತ್ರಿಗಳಿಗೆ ಶ್ರೀ ಸಾಮಾನ್ಯರಿಗೆ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲೂ ಸರ್ಕಾರ ಜವಾಬ್ದಾರಿಯುತ ಹೆಜ್ಜೆ ಹಾಕಬೇಕು ಎಂದರು.

ಕಾರ್ಯಕ್ರಮದಲ್ಲಿ ಕಾವೇರಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಡಾ.ಲೋಹಿತ್ ಮಾತನಾಡಿ, ಡಯಾಲಿಸಿಸ್ ಘಟಕ ಖಾಸಗಿ ಆಸ್ಪತ್ರೆಗಳಲ್ಲಿ ತೆರೆಯುವುದು ವಿರಳ. ಈ ಘಟಕದಿಂದ ಆಸ್ಪತ್ರೆಗೆ ಲಾಭವಿಲ್ಲ ಹೀಗಾಗಿ ಹಿಂದೇಟು ಹಾಕುವರು. ಕಾವೇರಿ ಆಡಳಿತ ಮಂಡಳಿ ಸಾರ್ವಜನಿಕ ಸೇವೆ ಉದ್ದೇಶ ಹೊಂದಿರುವುದರಿಂದ ಈ ಘಟಕ ತೆರೆದು ಕಡಿಮೆ ದರದಲ್ಲಿ ಸೇವೆ ಒದಗಿಸಲು ಮುಂದಾಗಿದೆ ಎಂದರು.

ವೇದಿಕೆಯಲ್ಲಿ ನಗರಸಭೆ ಸದಸ್ಯರಾದ ಗಣೇಶ್ ಕುಮಾರಸ್ವಾಮಿ, ಕೃಷ್ಣರಾಜಗುಪ್ತ, ಶರವಣ, ರಾಣಿ ಪೆರುಮಾಳ್, ರಾಧಾ, ವಾಸೇಗೌಡ, ತಾ.ಕುರುಬ ಸಮಾಜದ ಅಧ್ಯಕ್ಷ ಡಿ.ಕುನ್ನೇಗೌಡ,ಡಿ.ಕುಮಾರ್, ನಿಂಗರಾಜ್ ಮಲ್ಲಾಡಿ, ಚೆನ್ನೇಗೌಡ, ನಾಗರಾಜ್ ಮಲ್ಲಾಡಿ, ಸತೀಶ್ ಪಾಪಣ್ಣ ಸೇರಿದಂತೆ ಹಲವರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಲಿಯೋ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಟರ್ಬೋ (ಮ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಕ್ರೂ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಮ್ಯಾಟ್ನಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ)	4 ಪ್ರದರ್ಶನಗಳು
ಸಂಗಂ	
3ನೇ ಕೃಷ್ಣಪ್ಪ (ಕ)	4 ಪ್ರದರ್ಶನಗಳು
ಲಿಡೋ	
ಅಂಜನೀಪುತ್ರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ತ್ರಿಭುಜ (ಕ)	ಬೆಳಗಿನ ಪ್ರದರ್ಶನ
ಕೃಷ್ಣ ನೀ ಬೇಗನೆ ಬಾರೋ (ಕ)	3 ಪ್ರದರ್ಶನಗಳು
ಪ್ರಭಾ	
ಕೃಷ್ಣಾ ನೀ ಬೇಗನೆ ಬಾರೋ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ): ಬೆ.10.15ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ರಾ.9.55ಕ್ಕೆ, 3ನೇ ಕೃಷ್ಣಪ್ಪ (ಕ): ಮ.1.10ಕ್ಕೆ.
ಸ್ಕ್ರೀನ್ 2	ರಾಮನ ಅವತಾರ (ಕ): ಬೆ.10.30ಕ್ಕೆ, ಬಯ್ಯಾ ಜಿ (ಹಿಂ): ಮ.1.35ಕ್ಕೆ, ಸಂ.4.25ಕ್ಕೆ, ಥಾಲವನ್ (ಮ): ರಾ.7.15ಕ್ಕೆ, ರಾ.10ಕ್ಕೆ.
ಸ್ಕ್ರೀನ್ 3	ದಿ ಜಡ್ಜ್‌ಮೆಂಟ್ (ಕ): ಬೆ.10.20ಕ್ಕೆ, ಸಂ.4.05ಕ್ಕೆ, ರಾ.7.05ಕ್ಕೆ, ಪಿಟಿ ಸರ್ (ತ): ಮ.1.20ಕ್ಕೆ, ಗುರುವಾಯೂರ್ ಅಂಬಲನಾಡಿಯಿಲ್ (ಮ): ರಾ.10.05ಕ್ಕೆ.
ಸ್ಕ್ರೀನ್ 4	ಟರ್ಬೋ (ಮ): ಬೆ.10.10ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಗಾರ್ಫೀಲ್ಡ್ ಮೂವಿ (3ಡಿ)(ಇಂ): ಮ.1.50ಕ್ಕೆ

ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಗಾರ್ಫೀಲ್ಡ್ ಮೂವಿ (3ಡಿ)(ಇಂ): ಬೆ.10.40ಕ್ಕೆ, ಮ.1ಕ್ಕೆ, ಸಂ.6.10ಕ್ಕೆ, ರಾ.8.30ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಮ.3.20ಕ್ಕೆ.
ಸ್ಕ್ರೀನ್ 2	ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ರಾ.7.05ಕ್ಕೆ, ಶ್ರೀಕಾಂತ್ (ಹಿಂ): ಮ.1.05ಕ್ಕೆ, ರಾ.10.10ಕ್ಕೆ,
ಸ್ಕ್ರೀನ್ 3	ಇಂಗ ನಾನ್ ಥಾನ್ ಕಿಂಗು (ತ): ಬೆ.11.05ಕ್ಕೆ, ಇಫ್ 2024 (ಇಂ): ಮ.1.55ಕ್ಕೆ, ರಾ.7.35ಕ್ಕೆ, A (ಕ): ಸಂ.4.20ಕ್ಕೆ, ಗುರುವಾಯೂರ್ ಅಂಬಲನಾಡಿಯಿಲ್ (ಮ): ರಾ.10ಕ್ಕೆ.
ಸ್ಕ್ರೀನ್ 4	ರಾಮನ ಅವತಾರ (ಕ): ಮ.12.45ಕ್ಕೆ, ಕೃಷ್ಣ ನೀ ಬೇಗನೇ ಬಾರೋ (ಕ): ಮ.3.40ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಸಂ.6.55ಕ್ಕೆ, ಅರಮನೈ 4 (ತ): ರಾ.9.45ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಎವಿಡೆನ್ಸ್ (ಕ): ಬೆ.11.15ಕ್ಕೆ, ಅರನ್‌ಮನೈ 4 (ತ): ಮ.1.15ಕ್ಕೆ, ಟರ್ಬೋ (ಮ): ಸಂ.4ಕ್ಕೆ, ಮೂರನೇ ಕೃಷ್ಣಪ್ಪ (ಕ): ಸಂ.6.40ಕ್ಕೆ, ದಿ ಜಡ್ಜ್‌ಮೆಂಟ್ (ಕ): ರಾ.9.30ಕ್ಕೆ.
ಸ್ಕ್ರೀನ್ 2	ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ): ಬೆ.10.20ಕ್ಕೆ, ಸಂ.4.05ಕ್ಕೆ, ಟರ್ಬೋ (ಮ): ಮ.1.05ಕ್ಕೆ, ಸಂ.6.50ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ದಿ ಜಡ್ಜ್‌ಮೆಂಟ್ (ಕ): ಬೆ.10.40ಕ್ಕೆ, ಮ.3.55ಕ್ಕೆ, 3ದೇವಿ (ಕ): ಮ.1.30ಕ್ಕೆ, ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ): ಸಂ.6.45ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಗರುಡ ಮಾಲ್,
1ನೇ ಮಹಡಿ, ಮೊ.ನಂ: 9901373210

ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1.15ಕ್ಕೆ, ಮ.3.40ಕ್ಕೆ, ರಾ.7.15ಕ್ಕೆ, ರಾ.10ಕ್ಕೆ, ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10.05ಕ್ಕೆ, ಮ.12ಕ್ಕೆ, ಮ.3.10ಕ್ಕೆ, ಸಂ.6.20ಕ್ಕೆ, ರಾ.9.30ಕ್ಕೆ, ಸ್ಟಾರ್ (ತ): ಮ.1ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, 4N6 (ಕ): ಮ.1.05ಕ್ಕೆ, ಅಂಜನೀಪುತ್ರ (ಕ): ಸಂ.4.15ಕ್ಕೆ, ಕೃಷ್ಣಮ್ಮ (ತೆ): ಸಂ.4.20ಕ್ಕೆ, ರಾ.10.15ಕ್ಕೆ, ಪವರ್ (ಕ): ಸಂ.6.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಎನ್‌ಡಿಎ ಅಭ್ಯರ್ಥಿ ವಿವೇಕಾನಂದರ ಗೆಲ್ಲಿಸುವಂತೆ ಖಾಸಗಿ ಶಿಕ್ಷಣ ಸಂಸ್ಥೆಗಳ ಪ್ರತಿನಿಧಿಗಳಲ್ಲಿ ಶಾಸಕ ಜಿಟಿಡಿ ಮನವಿ



ಮೈಸೂರು,ಮೇ 29(ಪಿಎಂ)– ವಿಧಾನ ಪರಿಷತ್ತಿನ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟ ಅಭ್ಯರ್ಥಿ ವಿವೇಕಾ ನಂದರನ್ನು ಬೆಂಬಲಿಸುವಂತೆ ಖಾಸಗಿ ಶಿಕ್ಷಣ ಸಂಸ್ಥೆಗಳ ಪ್ರತಿನಿಧಿಗಳನ್ನು ಶಾಸಕರೂ ಆದ ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡರು ಕೋರಿದರು.

ಮೈಸೂರಿನ ಹುಣಸೂರು ರಸ್ತೆಯ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಸಿಬಿಎಸ್‌ಇ, ಐಸಿಎಸ್‌ಇ ಅಂಡ್ ಸ್ಟೇಟ್ ಪ್ರೈವೇಟ್ ಸ್ಕೂಲ್ಸ್ ಮ್ಯಾನೇಜ್‌ಮೆಂಟ್ ಅಸೋಸಿಯೇಷನ್ ಮೈಸೂರು (ಸಿಐಎಸ್‌ಪಿಎಂಎಂ) ವತಿಯಿಂದ ಬುಧವಾರ ಹಮ್ಮಿಕೊಂಡಿದ್ದ ದಕ್ಷಿಣ ಶಿಕ್ಷಕರ ಕ್ಷೇತ್ರದ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿ ಜೊತೆಗಿನ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಎನ್‌ಡಿಎ ಅಭ್ಯರ್ಥಿ ಗೆಲ್ಲಿಸಿದರೆ ಖಾಸಗಿ ಶಿಕ್ಷಣ ಸಂಸ್ಥೆಗಳ ಯಾವುದೇ ಸಮಸ್ಯೆಗಳಿದ್ದರೂ ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಅವರು ಆಶ್ವಾಸನೆ ನೀಡಿದರು. ಅಭ್ಯರ್ಥಿ ಕೆ.ವಿವೇಕಾನಂದ ಮಾತನಾಡಿ, ಶಿಕ್ಷಕರ ನಡುವೆ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಪ್ರಾಮಾಣಿಕ ಹಾಗೂ ಪರಿಣಾಮಕಾರಿಯಾಗಿ ಸೇವೆ ಸಲ್ಲಿಸಲು ಒಂದು ಅವಕಾಶ ಮಾಡಿಕೊಡಬೇಕೆಂದು ಕೋರಿದರು. ಇದಕ್ಕೂ ಮುನ್ನ ಅಸೋಸಿಯೇಷನ್‌ನ ಪದಾಧಿಕಾರಿಗಳು, ಖಾಸಗಿ ಶಾಲೆಗಳು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ತಿಳಿಸಿದರು. ಸಿಐಎಸ್‌ಪಿಎಂಎಂ ಸಂಸ್ಥಾಪಕ ಅಧ್ಯಕ್ಷ ಸುಧಾಕರ್ ಎಸ್.ಶೆಟ್ಟಿ, ಅಧ್ಯಕ್ಷ ವಿ.ವೆಂಕಟೇಶ್, ಉಪಾಧ್ಯಕ್ಷ ರವೀಂದ್ರಸ್ವಾಮಿ, ಕಾರ್ಯದರ್ಶಿ ರಾಧಾಕೃಷ್ಣ, ಖಜಾಂಚಿ ಸ್ವರೂಪಿಣಿ, ಬಿಜೆಪಿ ಮುಖಂಡ ಮೈ.ವಿ.ರವಿಶಂಕರ್ ಸೇರಿದಂತೆ ಖಾಸಗಿ ಶಿಕ್ಷಣ ಸಂಸ್ಥೆ ಮುಖ್ಯಸ್ಥರು, ಶಿಕ್ಷಕರು ಹಾಜರಿದ್ದರು.



ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರ ಶ್ರೀ ಬಿ.ಆರ್ ಶ್ರೀಧರ ಬಿನ್ ಲೇಟ್ ಬಿ.ಎಚ್.ರಾಜನ್ ರವರಿಗೆ ನಾಗರೀಕ ಯೋಗಕ್ಷೇಮ ಗೃಹ ನಿರ್ಮಾಣ ಸಹಕಾರ ಸಂಘ(ರಿ), ಬೋಗಾದಿ 1ನೇ ಹಂತ, ಮೈಸೂರು– 570022 ಇವರಿಂದ ನನ್ನ ಕಕ್ಷಿದಾರರಿಗೆ ಮಂಜೂರಾತಿಯಾದ ನಿವೇಶನದ ಸಂಖ್ಯೆ 94ರ ಮೂಲ ಮಂಜೂರಾತಿ ಪತ್ರವನ್ನು ದಿನಾಂಕ 12.05.2024 ರಂದು ಜೆರಾಕ್ಸ್ ಮಾಡಿಸಲು ಮಹದೇಶ್ವರ – ಬಡಾವಣೆಯಲ್ಲಿರುವ ಜೆರಾಕ್ಸ್ ಕೇಂದ್ರಕ್ಕೆ ತೆಗೆದುಕೊಂಡು ಹೋದ ಸಂದರ್ಭದಲ್ಲಿ ನನ್ನ ಕಕ್ಷಿದಾರರ ಮೂಲ ಮಂಜೂರಾತಿ ಪತ್ರ ಕಳೆದು ಹೋಗಿರುತ್ತದೆ. ಆದುದರಿಂದ ಯಾರಿಗಾದರೂ ನನ್ನ ಕಕ್ಷಿದಾರರ ಮೂಲ ಮಂಜೂರಾತಿ ಪತ್ರ ಸಿಕ್ಕಿದಲ್ಲಿ ಈ ಕೆಳಗೆ ತಿಳಿಸಿರುವ ವಿಳಾಸಕ್ಕೆ ತಂದು ಕೊಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

ನನ್ನ ಕಕ್ಷಿದಾರರಾದ ಬಿ.ಆರ್.ಶ್ರೀಧರ ಬಿನ್ ಲೇಟ್ ಬಿ.ಎಚ್ ರಾಜನ್ ರವರನ್ನು ಹೊರತುಪಡಿಸಿ ಬೇರೆ ಯಾರಿಗೂ ಯಾವುದೇ ರೀತಿಯ ಹಕ್ಕು ಇರುವುದಿಲ್ಲ. ಒಂದು ವೇಳೆ ನನ್ನ ಕಕ್ಷಿದಾರರ ಮೂಲ ಮಂಜೂರಾತಿ ಪತ್ರವನ್ನು ಯಾವುದೇ ವ್ಯಕ್ತಿ ದುರ್ಬಳಕೆ ಮಾಡಿಕೊಂಡು ಬೇರೆ ಯಾರಿಗಾದರೂ ಅಥವಾ ಯಾವ ವ್ಯಕ್ತಿಗಾದರೂ ಕ್ರಯ. ಭೋಗ್ಯ, ದಾನ ಇತರೆ ಯಾವುದೆ ಪತ್ರವನ್ನು ಮಾಡಿ ಕೊಟ್ಟರೆ ನನ್ನ ಕಕ್ಷಿದಾರರು ಜವಾಬ್ದಾರನಾಗಿರುವುದಿಲ್ಲ ಮತ್ತು ಅಂತಹ ವ್ಯಕ್ತಿಗಳ ಮೇಲೆ ನಮ್ಮ ಕಕ್ಷಿದಾರರು ಸೂಕ್ತ ಕಾನೂನು ಕ್ರಮ ಜರುಗಿಸುತ್ತಾರೆ ಎಂದು ತಿಳಿಯುವುದು.

ದಾಖಲೆಯನ್ನು ತಲುಪಿಸುವ ವಿಳಾಸ
ಬಿ.ಆರ್. ಶ್ರೀಧರ., ಮನೆ ನಂ.1237, 10ನೇ ಮುಖ್ಯರಸ್ತೆ, ಗೋಕುಲಂ 3ನೇ ಹಂತ, ಮೈಸೂರು.
9900851981, -9945567511

Sd/- N.NATARAJU, B.A.LL.B
ADVOCATES #4, 1st Cross, Near Ganesh bhandar, Janathanagar, Mysuru.
PH.9036778462.8792054088

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರ ಶ್ರೀ ಎಂ. ಗೋಪಾಲಯ್ಯ ಬಿನ್ ಲೇಟ್ ಎಸ್ ಮುದ್ದಯ್ಯ ರವರಿಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಮಂಜೂರಾತಿಯಾಗಿ ಮನೆ ನಿರ್ಮಿಸಿಕೊಂಡು ವಾಸ ಮಾಡುತ್ತಿರುತ್ತಾರೆ. ನನ್ನ ಕಕ್ಷಿದಾರರು ತಮ್ಮ ಮನೆಯ ಮೂಲ ಸ್ವಾಧೀನ ಪತ್ರವನ್ನು ದಿನಾಂಕ 12.05.2024 ರಂದು ಜೆರಾಕ್ಸ್ ಮಾಡಿಸಲು ಮಹದೇಶ್ವರ ಬಡಾವಣೆಯಲ್ಲಿರುವ ಜೆರಾಕ್ಸ್ ಕೇಂದ್ರಕ್ಕೆ ತೆಗೆದುಕೊಂಡು ಹೋದ ಸಂದರ್ಭದಲ್ಲಿ ನನ್ನ ಕಕ್ಷಿದಾರರ ಮೂಲ ಸ್ವಾಧೀನಪತ್ರವು ಕಳೆದುಹೋಗಿರುತ್ತದೆ. ಅದುದರಿಂದ ಯಾರಿಗಾದರೂ ನನ್ನ ಕಕ್ಷಿದಾರರ ಮೂಲ ಸ್ವಾಧೀನಪತ್ರವು ಸಿಕ್ಕಿದಲ್ಲಿ ಈ ಕೆಳಗೆ ತಿಳಿಸಿರುವ ವಿಳಾಸಕ್ಕೆ ತಂದು ಕೊಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

ನನ್ನ ಕಕ್ಷಿದಾರರಾದ ಶ್ರೀ ಎಂ. ಗೋಪಾಲಯ್ಯ ಬಿನ್ ಲೇಟ್ ಎಸ್ ಮುದ್ದಯ್ಯ ರವರನ್ನು ಹೊರತುಪಡಿಸಿ ಬೇರೆ ಯಾರಿಗೂ ಯಾವುದೇ ರೀತಿಯ ಹಕ್ಕು ಇರುವುದಿಲ್ಲ. ಒಂದು ವೇಳೆ ನನ್ನ ಕಕ್ಷಿದಾರರ ಮೂಲ ಸ್ವಾಧೀನ ಪತ್ರವನ್ನು ಯಾವುದೇ ವ್ಯಕ್ತಿ ದುರ್ಬಳಕೆ ಮಾಡಿಕೊಂಡು ಬೇರೆ ಯಾರಿಗಾದರೂ ಅಥವಾ ಯಾವ ವ್ಯಕ್ತಿಗಾದರೂ ಕ್ರಯ, ಭೋಗ್ಯ, ದಾನ ಇತರೆ ಯಾವುದೆ ಪತ್ರವನ್ನು ಮಾಡಿಕೊಟ್ಟರೆ ನನ್ನ ಕಕ್ಷಿದಾರರು ಜವಾಬ್ದಾರನಾಗಿರುವುದಿಲ್ಲ ಮತ್ತು ಅಂತಹ ವ್ಯಕ್ತಿಗಳ ಮೇಲೆ ನಮ್ಮ ಕಕ್ಷಿದಾರರು ಸೂಕ್ತ ಕಾನೂನು ಕ್ರಮ ಜರುಗಿಸುತ್ತಾರೆ ಎಂದು ತಿಳಿಯುವುದು.

ದಾಖಲೆಯನ್ನು ತಲುಪಿಸುವ ವಿಳಾಸ
ಬಿ.ಆರ್. ಶ್ರೀಧರ., ಮನೆ ನಂ.1237, 10ನೇ ಮುಖ್ಯರಸ್ತೆ, ಗೋಕುಲಂ 3ನೇ ಹಂತ, ಮೈಸೂರು.
9900851981, -9945567511

Sd/- N.NATARAJU, B.A.LL.B
ADVOCATES #4, 1st Cross, Near Ganesh bhandar, Janathanagar, Mysuru.
PH.9036778462.8792054088

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಸಂಖ್ಯೆ:ಮೈನಪ್ರಾ/ವ.ಕ/2024-25 ದಿನಾಂಕ: 24.05.2024

ಪತ್ರಿಕಾ ಪ್ರಕಟಣೆ

ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಮೈಸೂರು ನಗರ. ಮನೆ ನಂ.ಮಾರಿಗುಡಿ ಬೀದಿ, ಹಿನಕಲ್ ಗ್ರಾಮ, ಮೈಸೂರು ರಲ್ಲಿ ವಾಸವಿರುವ ಮಾದನಾಯ್ಕ ರವರ ಮಗನಾದ ಶ್ರೀ.ಜವರನಾಯ್ಕ ರವರಿಗೆ ದಿನಾಂಕ: 30.06.2008 ರಂದು ವಿಜಯನಗರ 4ನೇ ಹಂತ 2ನೇ ಫೇಸ್ ಬಡಾವಣೆಯ ನಿ.ಸಂ.4928 ಅಳತೆ 15X24 ಮೀಟರ್ ನಿವೇಶನ ಮಂಜೂರಾಗಿದ್ದು, ದಿನಾಂಕ: 09.07.2008 ರಂದು ಕ್ರಯಪತ್ರ ಪಡೆದಿರುತ್ತಾರೆ. ದಿನಾಂಕ:11.07.2008 ರಂದು ಖಾತಾ ಕಂದಾಯ ಪತ್ರ ಪಡೆದಿರುತ್ತಾರೆ.

ಮಂಜೂರಾತಿದಾರರಾದ ಶ್ರೀ.ಜವರನಾಯ್ಕ ಮತ್ತು ಇತರರು ಶ್ರೀ.ಯು.ಜೆ. ಅರುಣ್ ರವರಿಗೆ 4ನೇ ಪುಸ್ತಕದ ದಸ್ತಾವೇಜು ನಂಬರ ಎಂಮೈಎಸ್–4–00207–2008–09 ದಿನಾಂಕ:07.08.2008 ರಂದು ಜಿಪಿಎ ನೊಂದಾಯಿಸಿದ್ದು, ಸದರಿ ಜಿಪಿಎದಾರರಾದ ಶ್ರೀ.ಯು.ಜೆ.ಅರುಣ್ ರವರು ಶ್ರೀ.ಅಮರೇಶ್ ವೀರಭದ್ರಪ್ಪ ಮತ್ತು ಶ್ರೀಮತಿ.ಪಿ.ವಿ.ಸುಂದರಮ್ಮ ರವರಿಗೆ ಎಂಮೈ–ಎಸ್–1–03906–2008–09 ದಿನಾಂಕ:19.08.2008 ರಂದು ಶುದ್ಧಕ್ರಯಕ್ಕೆ ಮಾರಾಟ ಮಾಡಿ, ದಿನಾಂಕ:19.10.2010 ರಂದು ಖಾತಾ ವರ್ಗಾವಣೆ ಮಾಡಲಾಗಿರುತ್ತದೆ. ನಂತರ ಶ್ರೀ.ಅಮರೇಶ್ ವೀರಭದ್ರಪ್ಪ ಮತ್ತು ಶ್ರೀಮತಿ.ಪಿ.ವಿ.ಸುಂದರಮ್ಮ ರವರು ಶ್ರೀಮತಿ.ಕೆ.ಸಿ.ಸರೋಜ ರವರಿಗೆ ಎಂಮೈ–ಎಸ್–1–03637–2019–20 ದಿನಾಂಕ:24.07.2019 ರಂದು ದಿನಾಂಕ:15.10.2019 ರಂದು ಶುದ್ಧಕ್ರಯಕ್ಕೆ ಮಾರಾಟ ಮಾಡಿ ಖಾತಾ ವರ್ಗಾವಣೆ ಮಾಡಲಾಗಿರುತ್ತದೆ.

ಖಾತಾ ವರ್ಗಾವಣೆದಾರರಾದ ಶ್ರೀಮತಿ.ಕೆ.ಸಿ.ಸರೋಜ ರವರು ಸದರಿ ನಿವೇಶನ ಸಂಖ್ಯೆ 4928 ಅನ್ನು ಮನೆ ನಂ.123, ಅಹಿಂಸಾ ಮಾರ್ಗ, ಸಿದ್ದಾರ್ಥನಗರ ಬಡಾವಣೆ, ಮೈಸೂರು ರಲ್ಲಿ ವಾಸವಿರುವ ಶ್ರೀಮತಿ.ಕೆ.ಸಿ.ಸರೋಜ ರವರ ಮಗಳಾದ ಶ್ರೀಮತಿ.ಕೆ.ಪಿ.ಸವಿತ ಕೋಂ ಶ್ರೀ.ಕಪನಿಗೌಡ ರವರಿಗೆ ಉಪ ನೊಂದಣಾಧಿಕಾರಿ ಪೂರ್ವ 1 ನೇ ಪುಸ್ತಕದ ದಸ್ತಾವೇಜು ನಂಬರ್ ಎಂಮೈ–ಎಸ್–1–08657–2020–21 ಆಗಿ ಸಿ.ಡಿ.ನಂಬರ್ ಎಂಮೈಎಸ್‌ಡಿ618ನೇ ದ್ದರಲ್ಲಿ ದಿನಾಂಕ:06.01.2021 ರಂದು ನೋಂದಾಯಿತ ವಿಭಾಗ ಪತ್ರದಂತೆ ಮೇಲ್ಕಂಡ ನಿವೇಶನವನ್ನು ಶ್ರೀಮತಿ.ಕೆ.ಪಿ.ಸವಿತ ರವರ ಹೆಸರಿಗೆ ಬಂದಿರುವುದರಿಂದ ಸದರಿಯವರು ದಿನಾಂಕ:04.05.2024 ರಂದು ಸದರಿ ನಿವೇಶನಕ್ಕೆ ಖಾತಾ ವರ್ಗಾವಣೆ ಕೋರಿ ಮನವಿ ಸಲ್ಲಿಸಿದ್ದು, ಶ್ರೀಮತಿ.ಕೆ.ಪಿ.ಸವಿತ ರವರಿಗೆ ಸಂಬಂಧಪಟ್ಟ ಹಿತಾಸಕ್ತಿದಾರರಿಂದ ಖಾತಾ ವರ್ಗಾವಣೆಗೆ ಸಂಬಂಧಿಸಿದಂತೆ ಯಾ–ರಿಂದಾದರೂ ತಕರಾರು ಏನಾದರು ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 15 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ಸಲ್ಲಿಸುವುದು. ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಿಯಮಾನುಸಾರ ಕ್ರಮ ವಹಿಸಲಾಗುವುದು.

ಸಹಿ/– ವಿಶೇಷ ತಹಸೀಲ್ದಾರ್, ವಲಯ ಕಛೇರಿ – 3, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣ, ಮೈಸೂರು –570010
ದೂರವಾಣಿ:0821–2424673/74 ಇಮೇಲ್: commr_amh@yahoo.in

ಸಂಖ್ಯೆ:ಆ.ಪು.ಸಂ.ಪ/ಸಂ.ವಿ/ಟೆಂಡರ್–1/2024–25 ದಿನಾಂಕ: 23.05.2024

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999–2000 ರನ್ವಯ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ವತಿಯಿಂದ ಸೇವಾ ಟೆಂಡರ್ (Service Tender) ಅನ್ನು ಇಲಾಖೆಯ ಅಧಿಕಾರಿಗಳಿಗೆ ವಾಹನ ಚಾಲಕರ ಸಮೇತ ವಾಹನವನ್ನು (Indent No DAMH/ 2023-24/SE0004) (Call-2) ಒದಗಿಸುವ ಸೇವೆಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ **http://kppp.karnataka.gov.in** ಕರೆಯಲಾಗಿದೆ. ಈ ಟೆಂಡರಿಗಿಟ್ಟ ಮೊತ್ತ **ರೂ.50.00 ಲಕ್ಷಗಳಾಗಿದ್ದು** ಟೆಂಡರ್‌ನ ಸ್ಟ್ಯಾಂಡರ್ಡ್ ಟೆಂಡರ್ ದಸ್ತಾವೇಜಿನಲ್ಲಿ ತಿಳಿಸಿರುವ ಷರತ್ತುಗಳಿಗನುಗುಣವಾಗಿ ನೋಂದಾಯಿತ ಆಸಕ್ತ ಕಂಪೆನಿಗಳು/ಟ್ರಾವೆಲ್ಸ್ ಏಜೆನ್ಸಿಗಳು ಭಾಗವಹಿಸಬಹುದಾಗಿರುತ್ತದೆ.

ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ 06.06.2024 ರ 16.00 ಗಂಟೆಯೊಳಗೆ
ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಯಮ	ದಿನಾಂಕ 10.06.2024 ರ 16.30 ಗಂಟೆಗೆ
ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ 11.06.2024 ರ ಮಧ್ಯಾಹ್ನ 12.00 ಗಂಟೆಗೆ

ಸಹಿ/– ಆಯುಕ್ತರು
ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು

DIPR/MYS/KAVITA/18/24-25